ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

21 ಜೂನ್ 2017 ಪುಟ 16 ರೂ. 15/-


ಗೋವು ಪವಿತ್ರ ಎಂಬ ರಾಜಕಾರಣ





ಕಾಡಿದೆ ಕೇಸರಿ ಶಾಕು!

ಚಾಣಾಕ್ಷ ತಂತ್ರ



ಉತ್ತರ ಕನ್ನಡ

ಜೆಪಿ ಭಂಡರಿಗೆ ಆಟ
ಂತ್ರಸ್ತರಿಗೆ ಸಂಕಟ

ಕೊಡಗು

ಕಾಂಗ್ರೆಸ್‌ಗೆ ಬೇಕಿದೆ ಹೊಸ ಮುಖಗಳು

ಪಾರ್ವತಮ್ಮನಂತ ಪರಸನ್ನು ದೇಸದಲ್ಲೇ ಇರ್ಲಿಲ್ಲ ಕಣ



● ಬಿ.ಚಂದ್ರೇಗೌಡ

ಕಟ್ಟೆಪುರಾಣ

ಉಗ್ರಿ ಕಂಡಕೂಡಲೇ ಜುಮ್ಮಿ,

"ಅಲ್ಲ ಕಂದ, ಪಾರ್ವತಮ್ಮ ತೀರೋದ ಸುದ್ದಿಯ ನನಿಗೆ ಹೇಳಬಾರದೇನ್ಲ" ಎಂದು ರೇಗಿದಳು.

"ಹೇಳಿದ್ರೆ ನೀನೇನು ನೋಡಕ್ಕೊಯ್ತಿದ್ದೇನೆ" ಎಂದ ಉಗ್ರಿ.

"ಅಂಗರೋಗಿಬುಟ್ರೆ ಪಾರ್ವತಮ್ಮ?" ಎಂದ ಕಾಳಮಾವ.

"ಊ ಕಣಮಾವ. ಕಾಯ್ಲಾಗಿ ಬಾಳದಿನದಿಂದ ಆಸ್ಪತ್ರೆಲಿದ್ಲು" ಎಂದ ಉಗ್ರಿ.

"ನಾನು, ಗಂಗಾಧರ, ಆ ಹೊಟ್ಟು ಚಿಕ್ಕಣ್ಣ ಭೈರಣ್ಣ ಯಲ್ಲ ಒಂದು ಸತಿಯ ಅವ್ರುಳ ಮನೆತಕ್ಕೋಗಿದ್ವಿ ಯಾಕಪ್ಪ ಅಂದ್ರೆ, ಮಡುವಾಳ್ರು ಭೈರಣ್ಣ ತ್ವಾಟ ಮಾರಿಬುಡ್ತಿನಿ, ಮಗಳ ಮದುವೆ ಮಾಡಕ್ಕೆ ದುಡ್ಡಿಲ್ಲ ಅಂತ ಹೇಳಿದ್ದ. ಅದ್ಕೆ ಒಂದು ಮಾತು ತ್ವಾಟ ತಗತ್ತಿರ ಅಂತ ಕೇಳಕ್ಕೆ ಹೋಗಿದ್ವಿ. ಈ ಪಾರ್ವತವ್ವ ಗೇಟಿಂದ ನಿಂತಗಂಡು ಧಿಮಾಕಿನ ಮಾತಾಡಿ ಕಳಿಸಿದ್ಲೇ ವರತು ಮನಿವಳಿಕೆ ಕರದು ಒಂದು ಲೋಟ ಕಾಫಿ ಕೊಡಲಿಲ್ಲ, ಅವತ್ತಿಂದ ನನಿಗವುಳ ಕಂಡ್ರಾಯ್ತಿರಲಿಲ್ಲ" ಎಂದ ಸೀರ.

"ಯಾವ ಪಾರ್ವತಮ್ಮನೊ ನೀನೇಳದು?"

"ಅದೆ ಮಂಡೆವ್ರುದೋಳು ಕಂದ."

"ಥೂ ನಿನ್ನ, ಪಾರ್ವತಮ್ಮ ಅಂದ್ರೆ ನಿನಿಗೆ ಕಾಫಿ ಕೊಡದೆಯಿರೊ ಮಂಡ್ಯಾದ ಪಾರ್ವತಮ್ಮಲ್ಲ. ನಿನ್ನಂತ ಲಕ್ಷಾಂತರ ಜನರಿಗೆ ಅನ್ನ ಕೊಟ್ಟ ರಾಜಕುಮಾರನೆಡ್ತಿ ಪಾರ್ವತಮ್ಮನ ಸುದ್ದಿ ನಾವೇಳಿದ್ದು."

"ಓ, ರಾಜಕುಮಾರನೆಡ್ತಿ ಸುದ್ದಿನೇ? ನಾನೆಲ್ಲೋ ಈ ಗ್ವಾಪಾಳದೋಳ ಸುದ್ದಿ ಅನ್ನ ಕಂಡೆ. ಆ ಪಾರ್ವತಮ್ಮಾದ್ರೆ ಇನ್ನೂ ಇರಬೇಕಾಗಿತ್ತು ಕಂದ" ಎಂದ ಸೀರ.

"ಈ ವಾಟಿಸ್ಸೆನಾರ ಹೇಳಬೇಕಾಗಿತ್ತು, ಅವುನೂ ಹೇಳ್ಳಿಲ್ಲ" ಎಂದಳು ಜುಮ್ಮಿ.

"ಯಾವ ಮ್ಯಾಟ್ರಕ್ಕ?" ಎಂದುಕೊಂಡು ವಾಟಿಸ್ಸೆ ಅಂದ.

"ಪಾರ್ವತಮ್ಮ ತೀರೋದ ಸುದ್ದಿ ಕಂದ."

"ಆ ಮ್ಯಾಟ್ರು ನಿನಿಗೇಳೊ ಅಗತ್ಯನೆ ಇಲವಲ್ಲಕ್ಕ. ಟಿವಿಯೋರು ಟ್ವಂಟಿಪೋರವರ್ರೂ ತೋರಿಸಿದ್ರು."

"ಟಿವಿ ನೋಡಲಿಲ್ಲ ಕಂದ, ವಲ ಹುಳುಸ್ತಯಿದ್ದೆ."

"ಪೈನ್. ಕೃಷಿಕಾರ ಮಹಿಳೆರು ಟಿವಿ ಮುಂದೆ ಕೂರಬಾರ್ದು. ಆ ವಿಷಯದಲ್ಲಿ ನೀನೊಂದಿಷ್ಟು ಪಾರ್ವತಮ್ಮನಂಗೆ ಕಣಕ್ಕ. ಆ ಅಕ್ಕ ಇಲ್ದೆಯಿದ್ರೆ ಕನ್ನಡ ಸಿನಿಮಾರಂಗ ಹಾಳು ಬಿದ್ದೋಗಿರದು."

"ಅವುಳು ಸಿನುಮ ತಗಿತಿದ್ಲೆ?"

"ಊ ಕಣಕ್ಕ, ಅವುಳು ಪಸ್ಟು ತಗದ ಸಿನುಮವ ನಾನು, ನೀನು, ಉಗ್ರಿ, ಅವುರವ್ವ, ಯಲ್ಲ ಹೋಗಿ ನೋಡಿದ್ವೊ. ಯಾವುದೇಳು?"

"ಸೀನಿವಾಸ ಕಲ್ಯಾಣ ಅಂತ ಅಲುವುಲ. ಯಂಕಟೇಸ್‌ಪುರ ಟಾಕೀಸ್ ಓಪನ್‌ಗೆ ಆದಾಕಿದ್ರು. ಉಗ್ರಿ ಯಾರವ್ವಂತು ರಾಜಕುಮಾರ ಬಂದೇಟಿಗೆ ಕೈ ಮುಗಿಯೋಳು."

"ಕೈ ಮುಗಿಯಂಗೆ ಇದ್ದ ಕಣಕ್ಕ ನಮ್ಮಣ್ಣ. ನೀನು ದೇವರ ಡ್ರಸ್ಸಾಕು ದೇವರಂಗೆ ಇರನು, ಚೆಡ್ಡಿ ಇಕ್ಕಂಡ್ರೆ ಮಣ್ಣಿನ ಮಗಾಗನು. ಅವುನಿಗೆ ಯಲ್ಲ ಡ್ರಸ್ಸು ಸಟ್ಟಾಗದು ಈ ದೇಶದಲ್ಲಿ ಅವುನೊಬ್ಬನೆ ಕಣಕ್ಕ. ಅಂಗೆ ನೋಡಿದ್ರೆ ಪಾರ್ವತಮ್ಮನಂಗೆ ಇಡೀ ದೇಶದಲ್ಲೇ ಯಾರೂ ಇರಲಿಲ್ಲ."

"ಇಡೀ ದೇಸದಲ್ಲಿರಲಿಲ್ವ?"

"ಸಿನಿಮಾರಂಗದಲ್ಲಿ ಕಣಕ್ಕ, ನಮ್ಮ ಇಂಡಿಯಾ ದೇಶದ ಚಿತ್ರರಂಗದಲ್ಲಿ ಯಾರೂ ಕೂಡ ಗಂಡನ್ನ ಹೀರೊ ಮಾಡಿ, ನಿರ್ಮಾಪಕಿಯಾಗಿ, ತಾನೇ ಕತೆ ಸೆಲೆಕ್ಟ್ ಮಾಡಿ, ಸಿನಿಮಾ ತಗದು ಸಕ್ಸಸ್ ಆಗಿ ಇಂಡಸ್ಟ್ರಿ ಉಳಿಸಿ ಬೆಳಿಸಿರೊ ಮಹಿಳೆ ಪಾರ್ವತಮ್ಮ ಒಬ್ಬಳೆ."

"ಅದ್ರು ಪಾರ್ವತಮ್ಮ ರಾಜಕುಮಾರನಿಗೆ ಜೋಡಿಯಲ್ಲ ಕಂದ" ಎಂದ ಸೀರ.

"ಅಯ್ಯಪ್ಪ ನೀನು ಸಿನ್ನದ್ರಿ ಜೋಡಿಯೇನೊ?" ಎಂದ ಉಗ್ರಿ.

"ಅವತ್ತೇನೊ ನಮ್ಮ ಪರಿಸ್ಥಿತಿ ನೋಡಿ ಹೆಣ್ಣು ಕೊಡೋರಿರಲಿಲ್ಲ, ಸ್ವಾದರ ಮಾವನ ಮಗಳನೆ ಆದೆ. ದೇವುರು ನಾಕಣ್ಣು ಮೂರು ಗಂಡು ಕೊಟ್ಟ, ಮನೆ ಬ್ಯಳಿತು, ನನ್ನ ಸುದ್ದಿ ಬುಡು" ಎಂದ ಸೀರ.

"ರಾಜಕುಮಾರ್ ಸ್ಥಿತಿನೂ ಅಂಗೆ ಇತ್ತು ಕಣೊ ಚಿಗಪ್ಪ ಯಾವ ವ್ಯವಹಾರನೂ ಗೊತ್ತಿಲ್ಲದೆಯಿರೊ ನನ್ನ ಮಗನ್ನ ಕಾಪಾಡಬೇಕಾದ್ರೆ ಆಗಿನ ಕಾಲಕೆ ಓದಿರೊ ಪಾರ್ವತಮ್ಮನೆ ಸರಿ ಅಂತ ರಾಜಕುಮಾರನಪ್ಪ ಮದುವೆ ಮಾಡಿದ. ಆ ವಮ್ಮ ಅವುನ್ನ ಕಾಪಾಡಿದ್ಲು, ಇಲ್ಲ ಅಂದ್ರೆ ಕಡೆವರಿಗೂ ಕವಡೆ ಕಾಸಿಗೆ ಆ್ಯಕ್ಟಿಂಗ್ ಮಾಡಬೇಕಾಗಿತ್ತು."

"ಅಂತ ಬಂಗಾರದ ಮನುಸ ಅನ್ನೊ ಸಿನುಮಕೆ ಕೇವಲ ಮೂವತ್ತು ಸವುರ ಕೊಟ್ಟಿದ್ರಂತೆ. ಆ ಸಿನುಮ ಯರಡೊರ್ಸ ಓಡ್ತು. ಆದಾಯ ಯಾರಿಗೆ ಬತ್ರೂ, ಆ್ಯಕ್ಟಿಂಗ್ ಮಾಡಿದೋನಿಗೆ ಏನು ಸಿಗತೆಳು?" ಎಂದ ಉಗ್ರಿ.

"ಪಾರ್ವತಮ್ಮೇನಾರ ನಿರ್ಮಾಪಕಿನೆ ಆಗದೆಯಿದ್ರೆ ಸರಕಾರದ ಮಾಸಾಶನಕ್ಕೆ ಕಾಯಬೇಕಾಗಿತ್ತು. ಅಂತದನ್ನೆಲ್ಲ ತಪ್ಪಿಸಿ ತಾನೇ ನಿರ್ಮಾಪಕಿಯಾಗಿ, ಆಸ್ತಿ ಮಾಡಿ, ಮಕ್ಕಳನ್ನೆಲ್ಲ ಒಂದು ಲ್ಯವೆಲಿಗೆ ತಂದ್ರಲ್ಲಾ..... ನಿಜಕ್ಕೂ ನನಿಗೆ ಅಂತ ತಾಯಿ ಇದ್ರೆ ಇವತ್ತು ಎಲ್ಲಿರತಿದ್ನೊ ಏನೊ. ಬ್ಯಾಡ್‌ಲಕ್" ಎಂದ ವಾಟಿಸ್ಸೆ.

"ಅವುನ್ಯಾರೊ ಮಂಜೇಗೌಡ ಅನ್ನೋನು ನಿನ್ನಂಗೆ ಅಂದ ಕಣೊ" ಎಂದ ಉಗ್ರಿ.

"ಏನಂದ?"

"ದ್ಯಾವೇಗೌಡ್ರ ಮಗಳ ಮದಿವಾಗಿದ್ರೆ ನಮ್ಮ ತಾಲ್ಲೊಕಿನಲ್ಲಿ ನಾನೇ ಪರ್ಮನೆಂಟ್ ಎಮ್ಮೆಲ್ಲೆಯಾಗಿರತಿದ್ದೆ. ಕಪ್ಪುಗೌಳಿ ಬ್ಯಾಡ ಅಂದುಬುಟ್ಟೆ ಅಂತ ಈಗ್ಲು ಅಳತನೆ."

"ಅವುನಗೋಳ ನಾನು ಕೇಳಿದ್ದಿನಿ. ಅವುನೆಡ್ತಿಗೇನಾರ ಗೊತ್ತಾದ್ರೆ ಮೆಟ್ಟು ಹರಿಯಂಗೆ ವಡಿತಳೆ. ನೀನೇನಾರ ಮಾಡಿ ಅವುನೆಡ್ತಿಗೇಳ್ತಿಯಾ?"



"ಈ ಮನಿಯಾಳ ಹೇಳಿಕೊಡೊ ಮಾತ ನೋಡು. ಅಂಗ್ಯಲ್ಲ ಹೇಳಬ್ಯಾಡ ಕಂದ ಉಗ್ರಿ" ಎಂದಳು ಜುಮ್ಮಿ.

"ನಾನ್ಯಾಕೇಳನ, ಮಾತಿಗಂಗಂದೆ. ಸುಮಾರು ಜನ ಈಗ ತಮ್ಮ ಮುಂದಿರೊ ಕತೆ ಬುಟ್ಟು ಹಳೆದ್ನ ನ್ಯನಿಸಿಗಂಡು ಹಲುಬ್ತರೆ. ಅವುರ ನೋಡಿದ್ರೆ ನಗು ಬತ್ತದೆ. ಈ ಸೀರ ಚಿಗಪ್ಪನೂ ಅಂಥೊನೆಯ. ಅಂಗಿದ್ರೆ, ಹಿಂಗಿದ್ರೆ, ರಾಜಕುಮಾರ ಭಾರತಿ ಮದಿವಾಗಿದ್ರೆ, ಬ್ಯಾಡ ಜಯಂತಿ ಆಗಿದ್ರೆ ಅಂತ ಕತೆ ಕಟ್ಟತನೆ. ಅವ ಇನ್ನೂ ಬುಟ್ಟಿಲ್ಲ ಅವುನು" ಎಂದ ಉಗ್ರಿ.

"ಮಿಸ್ಟರ್ ಉಗ್ರಿ, ರಾಜಕುಮಾರ ಭಾರತಿ ಬಗ್ಗೆ ದವ್ರುಟು ಬಂದಿದ್ಕೆ ಪಾರ್ವತಮ್ಮ ಅವುರಿಬ್ರು ಜೋಡಿ ತಪ್ಸಿದ್ಲು ನಿನಿಗೊತ್ತ?"

"ಅದೇನೊ ಅಂಗಂದ್ರಪ್ಪ ಆಗ."

"ಅನ್ನದೇನು, ದೂರದ ಬೆಟ್ಟ ಸಿನುಮನೆ ಲಾಸ್ಟು ರಾಜ್‌ಕುಮಾರ್ ಭಾರತಿ ಜೋಡಿ. ಅಲ್ಲಿಂದ ಮುಂದೆ ಪಾರ್ವತಮ್ಮ ಹೀರೊಯಿನ್ ಆರಿಸಬೇಕು. ಆ ಹೀರೊಯಿನ್‌ಗಳು ಅಕ್ಕ ಅಕ್ಕ ಅಂತ ಇವ್ರುಳ ಸುತ್ತನೆ ಸುತ್ತಬೇಕು. ರಾಜಕುಮಾರನತ್ರ ಹೋಗಬಾರ್ದು. ಅಂಗೆ ಮಾಡಿದ್ರಂತೆ ಪಾರ್ವತಮ್ಮನೋರು" ಎಂದ ವಾಟಿಸ್ಸೆ.

"ಅಂಗರಿಕದು ಗೂಟ ಹೂದಿದ್ಲು ಅನ್ನು" ಎಂದಳು ಜುಮ್ಮಿ.

"ಗೂಟ ಹೂದಿರಲಿಲ್ಲ, ಗೊಂತಿಗೆ ಬಿಗುದಿದ್ಲು. ಅದ್ಕ ಮದ್ಲು ರಾಜಣ್ಣಾರು ಸೂಟಿಂಗ್ ಮುಗಿಸಿಗಂಡು ನೇರ ಲೀಲಾವತಿ ಮನಿಗೋಗಿ ಬುಡ್ತಿದ್ರಂತೆ."

"ಲೀಲಾವತಿ ಮಗ ರಾಜಕುಮಾರನ ಮಗನಂತೆ ನಿಜುವುಲ?" ಎಂದಳು ಜುಮ್ಮಿ.

"ಅದೇನೊ ದೇವುರು ಲೀಲಾವ[...] ಅವುರಮ್ಮನ ಆಕಾರ ಕೊಟ್ಟ ಬುಟ್ಟ[...] ಮಾತಾಡದಂಗೆ ಒಪ್ಪಿಗಬೇಕಾಗಿತ್ತು."

"ಲೀಲಾವತಿನು ವಸ್ಥೆ ಇವುಳೆ ಬುಡು. [...] ಅವುಳ್ಳು ಬಾಳಸಬವುದಿತ್ತು" ಎಂದಳು ಜು[...]

"ಅಂಗೇನಾರ ಆಗಿದ್ರೆ ನಾವು ಸಪೋ್ರಟು [...] ಎಂದ ಸೀರ.

"ಆಹಹ, ಸಪೋ್ರಟು ಮಾಡಕ್ಕೆ ನೀನ[...] ಗೋವಿಂದನೆ ಚಿಗಪ್ಪ? ಅವ್ರಲ್ಲ ಗುಟ್ಟಲ್ಲಿ ನ[...] ಅದ್ಕೆ ಪಾರ್ವತಮ್ಮನೂ ಲೀಲಾವತಿನೂ ಒಂಥ[...] ಬದುಕಿದ್ರು. ಅಣ್ಣಾರು ಮಾತ್ರ ಯಾವ್ರುದ್ನೂ ತಲೆ[...] ಈಶ್ವರ ಲಿಂಗ ಯಂಗಿರತದೋ ಅಂಗಿದ್ದು ಬ[...] ಈ ಸಮಂದದಿಂದ ಒಂದು ಅನಾಹುತ ಆ[...] ಉಗ್ರಿ" ಎಂದ ವಾಟಿಸ್ಸೆ.

"ಅದ್ಯಾವ ಅನಾಹುತನಪ್ಪ?"

"ಅಣ್ಣಾವ್ರುರ ಲೀಲಾವತಿ ಸಮಂದ ಹ್ಯ[...] ನ್ಯಡಿತ್ತೊ, ಅದೇ ಗುಟ್ಟನ್ನ ಕಾಪಾಡಿಕೊಂಡು[...] ಮತ್ತೆ ಅವುರ ಮಗ ಬದುಕಿದ್ರು. ಇದಾಗಬ[...]

"ಆ ಮಾತು ರಾಜಕುಮಾರನ ಬಾಯಲೆ [...]

"ಯಾವಾಗ?"

"ಅದೇ ವೀರಪ್ಪನ್ ರಾಜಕುಮಾರನ ಕಿಡ[...] ನೂರು ದಿನ ಕಾಡಲ್ಲಿಟಗಂಡಾಗ ಅಣ್ಣಾವರು[...] ಅಜ್ಞಾತವಾಸ ಅನುಭವುಸಬೇಕಾದ್ರೆ ನಾನು [...] ಮಾಡಿರಬೇಕು ಅಂದ್ರು. ಈ ಮಾತಿನ ಅರ್ಥ[...]

"ಏನುವಿಲ್ಲ, ಅಣ್ಣ ರಿಯಲಿ ಗ್ರೇಟ್. ಅಂಥ[...] ತಯಾರಿಸಿ ಕೊಟ್ಟ ಪಾರ್ವತಮ್ಮನೂ ಗ್ರೇಟ[...] ಲೀಲಾವತಿ ಅವರ ಮಗ ವಿನೋದ್ [...] ಗ್ರೇಟ್ ಕಣೊ ಉಗ್ರಿ" ಎಂದ ವಾಟಿಸ್ಸೆ.

"ಎಡೂರಪ್ಪನದೇನೊ ಸಿನುಮ ಬಂದತ[...] ಉಗ್ರಿ.

"ಅಂಗಂದ್ರಪ್ಪ, ಕುಮಾರಣ್ಣನ ಸಿನುಮನ[...] ನಮ್ಮ ಎಡೂರಪ್ಪ ಏನು ಕಡಮೆ ಅ[...] ಫಾಲೊಯರ್ರು ವಂಟವುರೆ."

"ಎಡೂರಪ್ಪನ ಪಾರ್ಟ್ ಯಾರು ಮಾ[...]

"ಮುಖ್ಯಮಂತ್ರಿ ಚಂದ್ರ ಸೂಟಾಯ್ತನೆ."

"ಸೋಬಕ್ಕನ ಪಾತ್ರ ಯಾರು ಮಾಡ್ತಲ್ಲ[...]

"ನನಿಗೇನೊ ತೇಜಸ್ವಿನಿ ಲಗತ್ತಾಗಿ ಸಟ್ಟಾ[...]

"ಎಡೂರಪ್ಪನ ಸಿನುಮ ಅಂದ್ರೆ ರೇಣುಕಾಚ[...] ರೆಡ್ಡಿ, ರಾಮುಲು, ರಾಮದಾಸ ಯಲ್ಲ ಬತ್ತ[...]

"ಊ ಕಣೊ ಉಗ್ರಿ, ಐತಿಹಾಸಿಕ ಸಿನುಮ[...] ಆದ್ರೆ ಪರಪ್ಪನ ಅಗ್ರಾರನೂ ಬತ್ತದೆ!"

"ಥೂ ನಿನ್ನ!!!"

'ಅಚ್ಛೇ' ಕಾ ಮತಲಬ್ ಕ್ಯಾ ಹೈ?

ಒಂದು ಪತ್ರ

ನಾವು ಕನ್ನಡಿಗರು ನರಿಯನ್ನು ನರಿಯೆಂದು ಕರೆದರೆ ಕೇರಳದಲ್ಲಿ ಅದು ಹುಲಿಯಂತೆ. ಅದೇ ರೀತಿ ಮಂಗ ಅಂದರೆ ಅದು ಹೆಣ್ಣಿಗೆ ಸಂಬಂಧಿಸಿದ ಪದವಂತೆ. ಕರಾವಳಿಯ ಪರಂಗಿ ಹಣ್ಣು ಅನಾನಸ್ ಆದರೆ ಕರ್ನಾಟಕದ ಬೇರೆ ಭಾಗದಲ್ಲಿ ಅದು ಪಪ್ಪಾಯ. (ಒಟ್ಟಾರೆ ಪರಂಗಿಗಳು ಪರಿಚಯಿಸಿದ ಹಣ್ಣು). ಅದೇ ರೀತಿ ಇಲ್ಲಿನ ಹಾರೆಗೂ ಅಲ್ಲಿನ ಹಾರೆಗೂ ವ್ಯತ್ಯಾಸವುಂಟು. ರಾಜಸ್ತಾನದ ನನ್ನ ಮಿತ್ರನೊಬ್ಬ "ನಮ್ಮಲ್ಲಿ ಬಂಗಾರ ಅಂದರೆ ಗುಜರಿ ಮಾಲು (ಬಂಗಾರ್ ವಾಲಾ ಅರ್ಥಾತ್ ಗುಜರಿಯವ) ಎಂದರ್ಥ" ಎಂದಿದ್ದ. ಹೀಗೆ ಬೇರೆ ಬೇರೆ ಭಾಷೆಗೆ ತಕ್ಕಂತೆ ಅಲ್ಲದೇ ಒಂದೇ ಭಾಷೆಯಲ್ಲೂ ಕೂಡ ವಿಭಿನ್ನ ಅರ್ಥ ಕೊಡುವ ಒಂದೇ ಉಚ್ಚಾರದ ಪದಗಳು ಹಲವಿವೆ. ಇದೆಲ್ಲಾ ಯಾತಕ್ಕಾಗಿ ಹೇಳುತ್ತಿದ್ದೇನೆಂದರೆ ಮೂರ್ನಾಲ್ಕು ವರ್ಷಗಳಿಂದ ದೇಶಾದ್ಯಂತ ಭಕ್ತರು ಹರಿಬಿಟ್ಟ 'ಅಚ್ಛೇ ದಿನ್' ಎನ್ನುವ ಪದವೂ ಇದೇ ಗುಂಪಿಗೆ ಸೇರಿದೆಯೋ ಎಂಬ ಅನುಮಾನ ಈಗ ನನ್ನನ್ನು ಕಾಡುತ್ತಿದೆ. ನಾವು ಇದನ್ನು ಅರ್ಥಮಾಡಿ ಕೊಳ್ಳುವುದರಲ್ಲೇ ಎಡವಿದ್ದೇವೆಯೇ ಹೊರತು ಅಚ್ಛೇ ದಿನದ ಕಾರಣೀಕರ್ತರನ್ನು ದೂಷಿಸಿ ಏನೂ ಪ್ರಯೋಜನವಿಲ್ಲ.

ನಮ್ಮ ಘನ ಲೋದಿ ಸರಕಾರದ ಪ್ರಮುಖ ಯಾರಾದರೂ (ಸರ್ವಾಧಿಕಾರದ ಸರಕಾರದಲ್ಲಿ ಪ್ರಮುಖರ ಸಂಖ್ಯೆ ತೀರಾ ಕಡಿಮೆ) ಗ್ಯಾಸ್ ಬಿಟ್ಟರೂ ಖರೀದಿಗೊಳಗಾದ ಮೀಡಿಯಾಗಳು ಅದನ್ನೇ ದೊಡ್ಡದಾಗಿ ಬಿಂಬಿಸಿ ಅದನ್ನೇ ಮಹತ್ಸಾಧನೆ ಎಂದು ಪ್ರೈಪೋಟಿಗೆ ಬಿದ್ದವರಂತೆ ಕೊರೆಯುತ್ತವೆ. ಅಮೆರಿಕಾದವರು ಲಾಡನ್‌ನನ್ನು ಹೊಡೆದುರುಳಿಸಿದಂತೆ ನಮ್ಮ ಕಥಾನಾಯಕ ದಾವೂದನನ್ನು ಕರೆತರುವ ವಿಚಾರವೇನೂ, ಸೀಮೆಗಿಲ್ಲದ ಸರ್ಜಿಕಲ್ ಸ್ಟ್ರೈಕ್ ಏನೂ, ನೋಟ್ ಬ್ಯಾನ್ ಮಾಡಿ ಭ್ರಷ್ಟಾಚಾರ, ಕಪ್ಪು ಹಣವಂತರ ಹಾಗು ಭಯೋತ್ಪಾದಕರ ಕಿಬ್ಬದಿ ಕೀಲು ಮುರಿಯುವ ಕಥೆಗಳೇನೂ (ಕಳೆದ ನವೆಂಬರ್ ತಿಂಗಳ ನೋಟ್ ಬ್ಯಾನ್ ಬಳಿಕದ ಟೀವಿ ಕಾರ್ಯಕ್ರಮಗಳನ್ನೊಮ್ಮೆ ಮನಸಲ್ಲೇ ರಿವೈಂಡ್ ಮಾಡಿ ನೋಡಿ ಮಜವಾಗಿರುತ್ತೆ), ಇಂದಿಗೂ ಆಗಾಗ ಬರುವ ಪಾಕ್ ಹಾಗು ಚೀನಾಗಳಿಗೆ ತಕ್ಕ ಪಾಠ ಕಲಿಸುವ ಲೋದಿತಂತ್ರಗಳ ಊಹನೆಯ ಚಂದಾಮಾಮ ಕಥೆಗಳೇನೂ ಇದನ್ನು ನಂಬುವ ಜನಸಾಮಾನ್ಯರು ಇನ್ನೂ ಇರುವ ಕಾರಣ ಈ ತೆರನಾದ ಕಥಾ 'ಕಾಲಕ್ಷೇಪ'ಗಳು ಇನ್ನೂ ಕೂಡ ಚಾಲ್ತಿಯಲ್ಲಿದೆ.

ಇದೀಗ ಈ ಘನ ಸರಕಾರದ ಆಡಳಿತಕ್ಕೆ ಭರ್ತಿ ಮೂರುವರ್ಷ ತುಂಬಿದೆ. ಎಲ್ಲರೂ ಸರಿಯಾಗಿ [...] ಮಾಡುತ್ತಿದ್ದರೂ ಕೂಡ ಮೂಗಿನ ನೇರದ [...] "ಅಲೆ" ಇನ್ನೂ ಜೀವಂತವಿದೆ, ದೇಶದ ಜ[...] ಕಥಾನಾಯಕನಲ್ಲಿ ಇನ್ನೂ ವಿ[...] ಇಟ್ಟಿದ್ದಾರೆಯೇ ಹೊರತು ಕಳಕೊಳ್ಳ[...] ಬಿಂಬಿಸಲಾಗುತ್ತಿದೆ. ನೋಟ್ ಬ್ಯಾನ[...] ಹಣ ಹತೋಟಿ ಎಂದು ತೋರಿಸಲು[...] ಕಾಂಗ್ರೆಸಿಗರ ಮನೆ ಮೇಲಷ್ಟೆ ರೈಡ್ ಮ[...] ಮೂಲಕ ಎರಡು ಮೂರು ಬಗೆಯ [...] ಸಾಧಿಸುವತ್ತಲಿನ ಕು-ತಂತ್ರಗಳು. (ಇವರಿಗೆ [...] ನಿಜವಾದ ಪ್ರಾಮಾಣಿಕತೆಯಿದ್ದರೆ ರೆಡ್ಡಿಯಂತವ[...] ಪಕ್ಷಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ) ಒಟ್ಟಾರೆ, [...] ಸ್ಪಷ್ಟವಿರುವ ತಮ್ಮ ಮೂರು ವರ್ಷದ ಕಳಪೆ[...] ಕುರಿತಾಗಿ ಏನೇ ನಾಟಕವಾಡಿದರೂ ಮುಚ್ಚಿಡಲ[...] ಸ್ಥಿತಿಯಿದ್ದಾಗ ಜನರ ಗಮನ ತಪ್ಪಿಸಲು ಇದೀಗ [...] ಗೋಹತ್ಯಾ ನಿಷೇಧದ ಬಾಣ ಪ್ರಯೋಗ.

ಒಂದೋ ಪ್ರಭುತ್ವದ ಭಯದ ಕಾರಣ[...] ಬಕೆಟ್ ಹಿಡಿಯುವ ಚಾಳಿಯಿಂದ ಹಬ್ಬ[...] ಭಟ್ಟಂಗಿ ಚಾನೆಲ್‌ಗಳಿಗೆ ವಿರುದ್ಧವಾಗಿ ನಿಖರ [...] ಬಿಂಬಿಸುತ್ತಿರುವ ಮಾಧ್ಯಮಗಳ ಮೇಲ[...] ಎನ್‌ಡಿಟಿವಿಯಂತವುಗಳ ಮೇಲಿನ ಸಿಬಿಐ ದಾ[...] ನೋಡಿದಾಗ ಈ ಅಚ್ಛೇ ದಿನ್ ಎಂಬುವುದ[...] ಚಾಲ್ತಿಯಲ್ಲಿರುವ ಒಳ್ಳೆಯ ಎನ್ನುವ ಪದಕ್ಕೆ[...] ಕುಟಿಲತೆ ಎನ್ನುವ ಅರ್ಥವಿರುವ ಪದ[...] ಒಪ್ಪುವಂತಿದೆಯಲ್ಲವೇ. ಇದು ಇದ್ದರೂ [...] ಯಾರಿಗ್ಗೊತ್ತು?

■ ಓದುಗ, ಬೆ[...]


ಕೃಪೆ: ಸತೀಶ್ ಆಚಾರ್ಯ



ಟೀಕೆ ಸಹಿಸದ ಮೋದಿ ಮತ್ತು ಎನ್‌ಡಿಟಿವಿ ಮೇಲೆ ದಾಳಿ

ಟೀಕೆ-ವಿಮರ್ಶೆ ಎಂಬುದೆಲ್ಲ ಬದಿಗಿರಲಿ, ಪ್ರಶ್ನೆ ...ವುದನ್ನೂ ಮೋದಿ ಸಹಿಸುವುದಿಲ್ಲ. ...ರಮಟ್ಟಿಗೆ ಎಂದರೆ ಆತ ಹನ್ನೆರಡು ವರ್ಷ ...ರಾತಿನ ಮುಖ್ಯಮಂತ್ರಿ ಆಗಿದ್ದಾಗ ಒಮ್ಮೆಯೂ ... ವಿಧಾನಸಭೆಯಲ್ಲಿ ತುಟಿಪಿಟಿಕ್ ಎನ್ನಲಿಲ್ಲ. ಈ ...ತು 'ದಿ ವೀಕ್' ಪತ್ರಿಕೆಯಲ್ಲಿ ಒಂದು ವರದಿ ...ಟಗೊಂಡಿತ್ತು. ಒಂದು ರಾಜ್ಯದ ಮುಖ್ಯಮಂತ್ರಿ ...ು ಹೇಗೆ ವಿಧಾನಸಭೆಯಲ್ಲಿ ಮಾತನಾಡದೆ ...ಲು ಸಾಧ್ಯ ಎಂದು ಆಚ್ಚರಿಗೊಂಡ ನಾನು ವರದಿಯನ್ನು ಬರೆದಿದ್ದ ಹಿರಿಯ ...ಕರ್ತರಿಗೆ ಫೋನ್ ಮಾಡಿದ್ದೆ. ನನ್ನ ಪ್ರಶ್ನೆಗೆ ...ರು ಕೊಟ್ಟ ಉತ್ತರ "ಮೋದಿಯವರು ...ಷ್ಟು ಸಾರಿ ಮತ್ತು ಯಾವ ವಿಷಯ ...ತು ವಿಧಾನಸಭೆಯಲ್ಲಿ ಮಾತನಾಡಿದ್ದಾರೆ ...ದು ನಾನು ಮಾಹಿತಿ ಹಕ್ಕು ಕಾಯ್ದೆಯಡಿ ...ಸಿದ್ದೆ. ಆಗ ನನಗೆ ಸಿಕ್ಕ ಉತ್ತರ 'ಗಣ್ಯರು ...ರಿಕೊಂಡಾಗ ಸಂತಾಪ ಸೂಚಿಸಿ ...ತನಾಡಿದ್ದಾರೆಯೇ ಹೊರತು ಇತರೆ ...ಷಯಗಳನ್ನು ಕುರಿತು ಅವರು ...ತನಾಡಿಲ್ಲ' ಎಂಬುದಾಗಿತ್ತು. ಈ ಕುರಿತು ...ು ಗುಜರಾತಿನ ಹಿರಿಯ ಬಿಜೆಪಿ ...ತ್ರಿಯೊಬ್ಬರಲ್ಲಿ ವಿಚಾರಿಸಿದಾಗ ಅವರು 'ಮೋದಿಗೆ ...ರೂ ಪ್ರಶ್ನಿಸುವುದಾಗಲಿ, ತಾವು ಮಾತನಾಡುವಾಗ ...ಧ್ಯೆ ಬಾಯಿ ಹಾಕುವುದಾಗಲಿ, ತನ್ನ ನಿಲುವನ್ನು ...ಕಿಸುವುದಾಗಲಿ ಇಷ್ಟವಿಲ್ಲ. ಅದಕ್ಕೆ ಅವರು ...ತನಾಡುವುದೇ ಇಲ್ಲ' ಎಂದರು.


ಆದ್ದರಿಂದಲೇ ಮೋದಿ ಸಾರ್ವಜನಿಕ ಸಭೆಗಳಲ್ಲಿ ...ರಾರು ಜನರನ್ನು ಗುಡ್ಡೆ ಹಾಕಿಕೊಂಡು ಭಾಷಣ ...ಯುತ್ತಾನೆ, ಯಾರೂ ತನ್ನನ್ನು ಪ್ರಶ್ನಿಸದಂತ ...ಯೋದಲ್ಲಿ ಪ್ರತಿವಾರ 'ಮನ್ ಕಿ ಬಾತ್' ಎಂಬ ... ವೇ ಸಂಭಾಷಣೆಯನ್ನು ಬಿತ್ತರಿಸುತ್ತಾನೆ, ತನ್ನ ...ಾಮರಂತೆ ವರ್ತಿಸುವ ಪತ್ರಕರ್ತರಿಗೆ ಮಾತ್ರ ...ರ್ಶನ ಕೊಡುತ್ತಾನೆ. ಈಗಾಗಲೇ ಹೆಚ್ಚಿನ ಟಿವಿ ...ನೆಲ್‌ಗಳು 'ಮೋದಿ ಭಜನಾ ಮಂಡಳಿಗಳಾಗಿ' ...ವರ್ತನೆಗೊಂಡಿವೆ. ಅಲ್ಲೋ, ಇಲ್ಲೋ ಒಂದೆರಡು ...ಕೆ ಮತ್ತು ಚಾನೆಲ್‌ಗಳು ಮೋದಿಯನ್ನು ...ೋಧಿಸದೇ ಇದ್ದರೂ ವಿಮರ್ಶಿಸುವಷ್ಟು ...ತನ'ವನ್ನಾದರೂ ಉಳಿಸಿಕೊಂಡಿವೆ. ಅಂಥವುಗಳಲ್ಲಿ ...ಡಿಟಿವಿ ಪ್ರಮುಖವಾದದ್ದು. ಮೊನ್ನೆ, ಜೂನ್



...ದು ಆ ಟಿವಿ ಚಾನಲ್‌ನ ಮಾಲೀಕರ ಮೇಲೆ ...ಐ ದಾಳಿ ನಡೆದಿದೆ.

ಎನ್‌ಡಿಟಿವಿ ಈ ದೇಶ ಕಂಡ ಪ್ರಪ್ರಥಮ ಖಾಸಗಿ ... ಟಿವಿ ಚಾನೆಲ್. ಒಂದಾನೊಂದು ಕಾಲದಲ್ಲಿ ... ಇಡೀ ದೇಶದಲ್ಲಿ ನಂಬರ್ ಒನ್ ಸ್ಥಾನವನ್ನು ...ಲಂಕರಿಸಿತ್ತು. ಆದರೆ ಹೊಸಹೊಸ ಚಾನಲ್‌ಗಳು ...ವಾಗಿ, ಅವುಗಳಲ್ಲಿ ಚರ್ಚೆ ಮತ್ತು ವಿವೇಕಕ್ಕಿಂತ ...ಟ, ಅವಿವೇಕತನಗಳು ಹೆಚ್ಚಾದಂತೆ ...ಗದ್ದಲವಿಲ್ಲದ ನಿಷ್ಠೂರ ಎನ್‌ಡಿಟಿವಿಯ ...ಪ್ರಿಯತೆ ಮಂಕಾಗತೊಡಗಿತು. ಆದರೆ ...ಕುಸಿಯುತ್ತಿದ್ದ ಜನಪ್ರಿಯತೆಯನ್ನು ಏರಿಸಲು ...ಡಿಟಿವಿ ತನ್ನ ನಿಲುವನ್ನಾಗಲಿ, ಶೈಲಿಯನ್ನಾಗಲಿ ...ಮಾಯಿಸಿಕೊಳ್ಳಲಿಲ್ಲ. ಅಷ್ಟೇಅಲ್ಲ, ಗುಜರಾತ್‌ನಲ್ಲಿ ...ದಿಯ ಆಳ್ವಿಕೆಯಡಿ 2002ರಲ್ಲಿ ನಡೆದ ...ಮುಗಲಭೆಯನ್ನು ವರದಿ ಮಾಡಿತು. ...ನಿಯಾಗಿ ಮೋದಿ ಚುನಾವಣೆ ಎದುರಿಸಿದಾಗಲೂ ...ನ್ನು ಅದು ಟೀಕಿಸಿತು. ಇದೆಲ್ಲದರ ಮಧ್ಯೆ ...ಕ ಸಮಸ್ಯೆಗಳೂ ಎದುರಾದವು. ಹತ್ತು ವರ್ಷಗಳ ...ೆ ಆ ಆರ್ಥಿಕ ಸಮಸ್ಯೆಗಳನ್ನು ನಿವಾರಿಸಿಕೊಳ್ಳಲು ...ನೆಲ್‌ನ ಮಾಲೀಕರಾದ ರಾಧಿಕಾ ರಾಯ್ ಮತ್ತು ... ಪತಿ ಪ್ರಣಾಯ್ ರಾಯ್ ಮಾಡಿಕೊಂಡ ...ಗಳನ್ನೇ ನೆಪವಾಗಿಟ್ಟುಕೊಂಡು ಮೋದಿ ನೇತೃತ್ವದ ...ಪಿ ಸರ್ಕಾರ ಮೊನ್ನೆ ಅವರ ಮೇಲೆ ದಾಳಿ ...ದೆ.

ಕಳೆದ ಹತ್ತು ವರ್ಷಗಳಲ್ಲಿ ಎನ್‌ಡಿಟಿವಿ ಎದುರಿಸುತ್ತಿದ್ದ ಆರ್ಥಿಕ ಬಿಕ್ಕಟ್ಟಾಗಲಿ, ಅದಕ್ಕೆಂದು ರಾಯ್ ದಂಪತಿಗಳು ಸಾಲ ಮಾಡಿದ್ದಾಗಲಿ ಗುಟ್ಟಾಗಿಯೇನೂ ಇರಲಿಲ್ಲ. ಮಾಧ್ಯಮದ ಎಲ್ಲರಿಗೂ ಅವು ಗೊತ್ತಿದ್ದದ್ದೇ. ಅದರಲ್ಲೂ ಆ ಸಂಸ್ಥೆಯ ಮಾಜಿ ಸಲಹೆಗಾರ ಸಂಜಯ್ ದತ್ ಎಂಬಾತ ರಾಯ್ ದಂಪತಿಗಳ ವಿರುದ್ಧ ಆರೋಪಗಳನ್ನು ಮಾಡುತ್ತಲೇ



ಇದ್ದ. ಆದರೆ ಯಾವ ನ್ಯಾಯಾಲಯವೂ ಆತನ ಆರೋಪಗಳನ್ನು ಸೀರಿಯಸ್ ಆಗಿ ತೆಗೆದುಕೊಂಡಿರಲಿಲ್ಲ.

ಎನ್‌ಡಿಟಿವಿಯ ಬಾಯಿ ಮುಚ್ಚಿಸಲು ಮೋದಿ ಸರ್ಕಾರ ಮಾಡಿದ ಪ್ರಯತ್ನ ಇದೇ ಮೊದಲೇನಲ್ಲ. ಪಠಾಣ್‌ಕೋಟ್ ಮೇಲೆ ಉಗ್ರರು ದಾಳಿ ಮಾಡಿದಾಗ ಎನ್‌ಡಿಟಿವಿ ಹಿಂದಿ ಚಾನೆಲ್‌ನಲ್ಲಿ ಉಗ್ರರಿಗೆ ನೆರವು ನೀಡುವಂತಹ ಸುದ್ದಿ ಪ್ರಸಾರವಾಗಿತ್ತು ಎಂದು ಸುಳ್ಳುಸುಳ್ಳೇ ಆರೋಪಿಸಿ ಆ ಚಾನೆಲ್ 24 ಗಂಟೆ ಕಾಲ ಏನನ್ನೂ ಪ್ರಸಾರ ಮಾಡಕೂಡದೆಂದು ಮೋದಿ ಸರ್ಕಾರ ನಿಷೇಧ ಹೇರಿತ್ತು. ಅದು ವ್ಯಾಪಕ ಖಂಡನೆಗೆ ಗುರಿಯಾದಾಗ ಅದನ್ನು ತಾತ್ಕಾಲಿಕವಾಗಿ ವಜಾ ಮಾಡಿತ್ತು.

ಮೊನ್ನೆಯ ದಾಳಿ ಹಿಂದೆಯೂ ಇಂತಹದ್ದೇ ಮಸಲತ್ತು ಇದೆ. ಸಂಜಯ್ ದತ್ ಕಳೆದ ಏಪ್ರಿಲ್ 28ರಂದು ಎನ್‌ಡಿಟಿವಿ ವಿರುದ್ಧ ಸಿಬಿಐಗೆ ದೂರು ಸಲ್ಲಿಸಿದ್ದ. ಆದರೆ ಸಿಬಿಐ ಏನೂ ಮಾಡದೆ ಸುಮ್ಮನಿತ್ತು. ಆನಂತರ ಜೂನ್ 1ರಂದು ಎನ್‌ಡಿಟಿವಿಯ ಚರ್ಚೆಯಲ್ಲಿ ಭಾಗವಹಿಸಿದ್ದ ಸಂದೀಪ್ ಪಾತ್ರ ಎಂಬ



ಬಿಜೆಪಿ ವಕ್ತಾರ ಆ ಚಾನೆಲ್‌ಗೆ ಹಿಡನ್ ಅಜೆಂಡಾ ಇದೆ ಎಂದು ಆರೋಪಿಸಿದಾಗ ಆ ಚರ್ಚೆಯನ್ನು ನಡೆಸುತ್ತಿದ್ದ ಆ್ಯಂಕರ್ ನಿಧಿ ರಾಜ್ದಾನ್ "ನೀವು ಈ ಚರ್ಚೆ ನಿಲ್ಲಿಸಿ ನಮ್ಮ ಸ್ಟುಡಿಯೋದಿಂದ ಹೊರನಡೆಯಿರಿ" ಎಂದು ಆದೇಶಿಸಿದ್ದರು. ಇದರಿಂದ ಪಾತ್ರನಿಗೆ ಕೋಪಬಂತೋ ಅಥವಾ ತನ್ನ ವಕ್ತಾರನನ್ನು ಹೀಗೆ ಅವಮಾನಿಸಿದ್ದು ಮೋದಿಯ ಪಿತ್ತ ಏರುವಂತೆ ಮಾಡಿತೋ, ಗೊತ್ತಿಲ್ಲ. ಆದರೆ ಮಾರನೆ ದಿನವೇ, ಶುಕ್ರವಾರ ಜೂನ್ 2ರಂದು, ಎನ್‌ಡಿಟಿವಿ ವಿರುದ್ಧ ಸಿಬಿಐ ಎಫ್‌ಐಆರ್ ದಾಖಲಿಸಿಕೊಂಡಿತು. ತಮಾಷೆಯ ಸಂಗತಿ ಯಾವುದೆಂದರೆ 86 ಪುಟಗಳಷ್ಟು ದೀರ್ಘವಾದ ಈ ಎಫ್‌ಐಆರ್‌ನಲ್ಲಿ ದಾಖಲಾಗಿರುವುದೆಲ್ಲಾ ದತ್ ಕೊಟ್ಟಿದ್ದ ದೂರಿನ ಯಥಾವತ್ತು-ಕೊನೆಯ ಒಂದು ಪ್ಯಾರಾ ಹೊರತಾಗಿ! ಅಂದರೆ ಸಿಬಿಐ ದಾಳಿ ಮಾಡುವ ಮುನ್ನ ಎಷ್ಟು ತನಿಖೆ ನಡೆಸಿದೆ ಮತ್ತು ಇದರ ಹಿಂದೆ ಯಾವ ಮಸಲತ್ತು ಇದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ.

ಕ್ರಿಮಿನಲ್ ಪಿತೂರಿ, ವಂಚನೆ, ಕಾನೂನು ದುರುಪಯೋಗ ಎಂಬ ಪದಗಳಿಂದ ಶುರುವಾಗುವ ಸಿಬಿಐ ಎಫ್‌ಐಆರ್‌ನಲ್ಲಿ ರಾಯ್ ದಂಪತಿಗಳು ಐಸಿಐಸಿಐ ಎಂಬ ಖಾಸಗಿ ಬ್ಯಾಂಕಿನ ಅಧಿಕಾರಿಗಳೊಂದಿಗೆ ಕೈಜೋಡಿಸಿ ಆ ಬ್ಯಾಂಕಿಗೆ 48 ಕೋಟಿ ರೂಪಾಯಿ ನಷ್ಟ ಉಂಟಾಗುವಂತೆ ವರ್ತಿಸಿದ್ದಾರೆ ಎಂದು ಆರೋಪಿಸಲಾಗಿದೆ. ಆದರೆ ಆಚ್ಚರಿ ಮೂಡಿಸುವ ವಿಷಯಗಳು ಹಲವಾರು ಇವೆ. ವಿಜಯ್ ಮಲ್ಯ ಎಂಬ ಹೆಂಡೋದ್ಯಮಿ ಸಾರ್ವಜನಿಕ ಬ್ಯಾಂಕುಗಳಿಗೆ 7,000 ಕೋಟಿ ರೂಪಾಯಿಗಳ ಸಾಲ ಬಾಕಿ ಉಳಿಸಿಕೊಂಡಿದ್ದರೂ ಆತನನ್ನು ಮೋದಿ ಸರ್ಕಾರ ವಿದೇಶಕ್ಕೆ ಪರಾರಿ ಆಗಲು ಬಿಡುತ್ತೆ, ಆದರೆ ಖಾಸಗಿ ಬ್ಯಾಂಕಿಗೆ 48 ಕೋಟಿ ರೂಪಾಯಿಗಳ ನಷ್ಟ ಎಂದು ರಾಯ್ ದಂಪತಿಗಳ ಮೇಲೆ ದಾಳಿ ನಡೆಸುತ್ತದೆ. ಹಾಗೆಯೇ ಮಲ್ಯನ ವಿರುದ್ಧ ತಿಂಗಳಾನುಗಟ್ಟಲೆ ಕಾಲ ಸಾರ್ವಜನಿಕ ಬ್ಯಾಂಕುಗಳು ತೆಪ್ಪಗಿದ್ದರೂ ಸುಮ್ಮನಿರುವ ಮೋದಿ ಸರ್ಕಾರ ರಾಯ್ ದಂಪತಿಗಳ ವಿರುದ್ಧ ಐಸಿಐಸಿಐ ಬ್ಯಾಂಕ್ ಯಾವುದೇ ದೂರು ನೀಡದಿದ್ದರೂ ದತ್ ಎಂಬಾತ ಕೊಡುವ ಖಾಸಗಿ ದೂರನ್ನಾಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳುತ್ತದೆ. ರಾಯ್ ದಂಪತಿಗಳು ಐಸಿಐಸಿಐ ಬ್ಯಾಂಕಿನ ಅಧಿಕಾರಿಗಳ ಜೊತೆ ಸೇರಿ ನಷ್ಟ ಉಂಟುಮಾಡಿದ್ದಾರೆನ್ನುವ ಸಿಬಿಐ ರಾಯ್ ಮನೆ ಮತ್ತು ಕಚೇರಿಗಳ ಮೇಲೆ ದಾಳಿ ಮಾಡುತ್ತದೆಯೇ ಹೊರತು ಯಾವುದೇ ಐಸಿಐಸಿಐ ಬ್ಯಾಂಕಿನ ಅಧಿಕಾರಿಗಳ ವಿರುದ್ಧ ತುಟಿಪಿಟಿಕ್ ಎನ್ನುವುದಿಲ್ಲ. ಇದೆಲ್ಲ ಏನನ್ನು ಸೂಚಿಸುತ್ತದೆ?

ಎನ್‌ಡಿಟಿವಿ ಮೇಲೆ ದಾಳಿ ನಡೆಯುತ್ತಿದ್ದಂತೆ ಸಾಮಾಜಿಕ ಜಾಲತಾಣಗಳಲ್ಲಿ ಮೋದಿ ಭಕ್ತರ ವೃಂದ ಕಾರ್ಯಾಚರಣೆಗೆ ಇಳಿದವು. "ಪ್ರಣಾಯ್ ರಾಯ್ ಲೇಖಕಿ ಅರುಂಧತಿ ರಾಯ್ ಅವರ ಸಂಬಂಧಿ. ಅವರಿಬ್ಬರೂ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದರೂ ಹಿಂದೂ ಹೆಸರುಗಳ ಹಿಂದೆ ಬಚ್ಚಿಟ್ಟುಕೊಂಡು ಹಿಂದೂ ವಿರೋಧಿ ಕೆಲಸಗಳಲ್ಲಿ ತೊಡಗಿದ್ದಾರೆ. ಎನ್‌ಡಿಟಿವಿಯ ಬರ್ಖಾ ದತ್ ಕಾಶ್ಮೀರ ಮೂಲದ ಮುಸಲ್ಮಾನ ಆರ್ಥಿಕ ತಜ್ಞ ಹಸೀಬ್ ದ್ರಬು ಅವರ ಮೂರನೆ ಪತ್ನಿ. ಅದೇ ಟಿವಿ ಚಾನೆಲ್‌ನ ನಿಧಿ ರಾಜ್ದಾನ್ ಸದ್ಯದಲ್ಲೇ ಜಮ್ಮು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾರನ್ನು ವಿವಾಹವಾಗಲಿದ್ದಾರೆ" ಎಂದೆಲ್ಲ ಸುಳ್ಳು ಸುದ್ದಿಗಳನ್ನು ಹರಿಯಬಿಟ್ಟರು.

ತಮಾಷೆಯ ಸಂಗತಿ ಯಾವುದೆಂದರೆ ಮೋದಿಯ ಇಂತಹ ಪೆದ್ದು ಭಕ್ತರ ದಾರಿ ತಪ್ಪಿಸಲು ಒಬ್ಬರು ಒಂದು ಕಪೋಲಕಲ್ಪಿತ ವಿಡಂಬನಾತ್ಮಕ ಸುದ್ದಿಯನ್ನು ಸೃಷ್ಟಿಸಿ ಸಾಮಾಜಿಕ ಜಾಲತಾಣಗಳಲ್ಲಿ ಬಿಟ್ಟರು. ಅದು ಹೀಗಿತ್ತು: "ನಿನ್ನೆ ಎನ್‌ಡಿಟಿವಿಯ ಮಾಲೀಕ ಪ್ರಣಾಯ್ ರಾಯ್ ಅವರ ಮನೆಯ ಮೇಲೆ ದಾಳಿ ನಡೆದಾಗ ಹಲವಾರು ರಹಸ್ಯಗಳು ಹೊರಬಿದ್ದವು. ಅಲ್ಲಿ ಸಿಕ್ಕ ಜನ್ಮಪತ್ರದಲ್ಲಿ ಪ್ರಣಾಯ್ ರಾಯ್ ಅವರ ನಿಜ ಹೆಸರು ಪರ್ವೇಜ್ ರಾಜ ಎಂದೂ, ಅವರು ಹುಟ್ಟಿದ್ದು ಕರಾಚಿಯಲ್ಲಿ ಎಂಬುದೂ ಗೊತ್ತಾಯಿತು. ಅಷ್ಟೇ ಅಲ್ಲ, ಅಲ್ಲಿ ಸಿಕ್ಕ ಇನ್ನೊಂದು ಗುಪ್ತ ದಾಖಲೆಯ ಪ್ರಕಾರ ಎನ್‌ಡಿಟಿವಿ ಎಂದರೆ ನವಾಜುದ್ದೀ ದಿನ್ ತೌಫಿ ವೆಂಚಾರ್ (ಇದು ಪ್ರಣಾಯ್ ರಾಯ್ ಅವರ ತಂದೆಯ ಹೆಸರು) ಎಂಬುದೂ ರಟ್ಟಾಯಿತು. ಪ್ರಣಾಯ್ ರಾಯ್ ಅವರ ಪತ್ನಿ ರಾಧಿಕಾ ಅವರ ನಿಜ ಹೆಸರೂ ರಹಿಲಾ ಮತ್ತು ಆಕೆಯ ಅಜ್ಜ ಬಾಬರನ ಸೈನ್ಯದಲ್ಲಿ ಅಡುಗೆ ಭಟ್ಟನಾಗಿದ್ದ. ಪ್ರಣಾಯ್ ರಾಯ್ ಅವರ ಖಾಸಗಿ ಕೊಠಡಿಯಲ್ಲಿ ಮೋದಿ ಅವರ ಚಿತ್ರವೊಂದು ಸಿಕ್ಕಿದ್ದು ಅದರತ್ತ ಆಟದ ಈಟಿಯನ್ನು ಎಸೆಯುತ್ತಿದ್ದರು. ಹಿಂದೂ ಸಹೋದರರೇ, ಈಗಲಾದರೂ ಕಣ್ಣು ತೆರೆದು ಈ ಜನರ ಅಸಲಿಯತ್ತನ್ನು ಅರಿಯಿರಿ. ಇದನ್ನು ಹತ್ತು ವಾಟ್ಸ್ ಆಪ್ ಗುಂಪುಗಳಿಗೆ ಹಂಚದೆ ಇರುವವರನ್ನು ಬಾಬರನ ಸಂತತಿಯವರು ಎಂದೇ ಕರೆಯಬೇಕಾಗುತ್ತದೆ."



• ಗೌರಿ ಲಂಕೇಶ್
editorlankesh@gmail.com

ಬುದ್ಧಿ ಇರುವ ಯಾರಾದರೂ ರಾಧಿಕಾ ರಾಯ್ ಅವರ ಅಜ್ಜ ಅದು ಹೇಗೆ ಬಾಬರ್ ಸೈನ್ಯದಲ್ಲಿದ್ದರು ಎಂದು ಒಂದುಕ್ಷಣವಾದರೂ ಯೋಚಿಸುತ್ತಾರೆ. ಆದರೆ ಮೋದಿಯ ಪೆದ್ದು ಭಕ್ತರು ಈ ವಿಡಂಬನೆಯು ಸತ್ಯ ಎಂದು ಭಾವಿಸಿ ಹಂಚಿಕೊಂಡರು!!

ಇವತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳು ಮೋದಿ ಮುಂದೆ ಡೊಗ್ಗುಸಲಾಮು ಹೊಡೆಯುತ್ತಿದ್ದರೆ, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸುವ ತಂಡಗಳೇ ತಲೆಎತ್ತಿವೆ. ಹಲವಾರು ಬಾರಿ ಈ ಜಾಲತಾಣಗಳಲ್ಲಿ ಚೆಡ್ಡಿಗಳು ಹಬ್ಬಿಸುವ ಸುಳ್ಳು ಸುದ್ದಿಗಳೇ ಟಿವಿ ಚಾನೆಲ್‌ಗಳಲ್ಲಿ ಚರ್ಚಾವಸ್ತುವಾಗುತ್ತವೆ. ಉದಾಹರಣೆಗೆ ಕಾಶ್ಮೀರ ಕುರಿತು ಅರುಂಧತಿ ರಾಯ್ ಪ್ರತಿಕೂಲ ಹೇಳಿಕೆ ನೀಡಿದ್ದಾರೆಂದು ಹಿಂದೂತ್ವವಾದಿ ಗುಂಪೊಂದು ಹರಿಬಿಟ್ಟಿದ್ದ ಕಲ್ಪಿತ ಸಂದರ್ಶನ, ಅರ್ನಾಬ್ ಗೋಸ್ವಾಮಿಯ ರಿಪಬ್ಲಿಕ್ ಚಾನೆಲ್‌ನಲ್ಲಿ ದೇಶಭಕ್ತಿಯ 'ಉಗ್ರ' ಚರ್ಚೆಗೆ ಆಹಾರವಾಗಿತ್ತು!!

ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇಶ ಎಂದು ಕೊಚ್ಚಿಕೊಳ್ಳುವ ಭಾರತದಲ್ಲಿ ಪತ್ರಿಕಾ ಸ್ವಾತಂತ್ರವೂ ಮುಖ್ಯವಾಗಿರಬೇಕು. ಆದರೆ ಇವತ್ತು ನಮ್ಮ ಮಾಧ್ಯಮಗಳು ಎಂತಹ ದುಃಸ್ಥಿತಿ ತಲುಪಿವೆ ಎಂದರೆ ಇತ್ತೀಚೆಗೆ 'ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್' ಎಂಬ ಅಂತರರಾಷ್ಟ್ರೀಯ ಸಂಸ್ಥೆ ಪತ್ರಿಕಾ ಸ್ವಾತಂತ್ರ್ಯದ ಸೂಚ್ಯಾಂಕದಲ್ಲಿ (ಜಗತ್ತಿನ 190 ದೇಶಗಳಲ್ಲಿ) ಭಾರತಕ್ಕೆ 136ನೇ ಸ್ಥಾನ ನೀಡಿತ್ತು. ಅಂಕಣಕಾರರೊಬ್ಬರು ಹೇಳಿರುವಂತೆ "ಇದೇ ಸಮೀಕ್ಷೆಯಲ್ಲಿ ಬಹುಸಾಂಸ್ಕೃತಿಕ ಪ್ರಜಾಪ್ರಭುತ್ವವಲ್ಲದ ಪ್ಯಾಲೆಸ್ಟೇನ್ ಸ್ಥಾನ 135. ತಾಲಿಬಾನ್ ಉಗ್ರರ ಹಿಡಿತದಲ್ಲಿರುವ ಅಫಘಾನಿಸ್ತಾನಕ್ಕೆ ಸಿಕ್ಕಿರುವ ಸ್ಥಾನ 120. ರಾಜಾಡಳಿತವಿರುವ ಒಮಾನ್, ಕತಾರ್ ಮತ್ತು ಇತರೆ ಕೊಲ್ಲಿ ದೇಶಗಳಲ್ಲಿ ಭಾರತದಲ್ಲಿರುವ ಪತ್ರಿಕಾ ಸ್ವಾತಂತ್ರ್ಯಕ್ಕಿಂತ ಹೆಚ್ಚು ಸ್ವಾತಂತ್ರ್ಯವಿದೆ."

ಪ್ರಜಾಪ್ರಭುತ್ವದಲ್ಲಿ ಸರ್ಕಾರವನ್ನು ಪ್ರಶ್ನಿಸುವುದು, ವಿಮರ್ಶಿಸುವುದು, ಟೀಕಿಸುವುದು ಪತ್ರಿಕಾಕರ್ತವ್ಯವಾಗಿದೆ. ಪತ್ರಿಕೆಗಳು ಈ ಕೆಲಸ ಮಾಡಿದರೆ ಮಾತ್ರ ಪ್ರಜಾಪ್ರಭುತ್ವವು ಗಟ್ಟಿಯಾಗುತ್ತದೆ. ಸರ್ಕಾರದ ಜಾಹೀರಾತಿಗಾಗಿ, ದೊಡ್ಡ ರಾಜಕೀಯ ನಾಯಕರ ಸಖ್ಯಕ್ಕಾಗಿ ಹಾತೊರೆಯುವ ಮಾಧ್ಯಮ ಪ್ರಜಾಪ್ರಭುತ್ವಕ್ಕೆ ಹಾನಿಕಾರಕವೇ.

ಹರ್ತೋಶ್ ಸಿಂಗ್ ಬಲ್ ಎಂಬ ಹಿರಿಯ ಪತ್ರಕರ್ತ ಇವತ್ತು "ನಾನು ಪತ್ರಿಕೋದ್ಯಮವನ್ನು ಪ್ರವೇಶಿಸಿದಾಗ ಕಲಿತ ಮೊದಲ ಪಾಠ: ನೀವು ಅವರ ಕಾಲಿಗೆ ಬಿದ್ದರೆ ಅವರು ನಿಮಗೆ ಒದೆಯುತ್ತಾರೆ. ನೀವು ಅವರಿಗೆ ಒದ್ದರೆ ಅವರು ನಿಮ್ಮ ಕಾಲು ನೆಕ್ಕುತ್ತಾರೆ ಎಂಬುದು" ಎಂದು ಟ್ವೀಟ್ ಮಾಡಿದ್ದಾರೆ.

ಅದನ್ನು ಭಾರತೀಯ ಮಾಧ್ಯಮದವರೆಲ್ಲ ನೆನಪಿಟ್ಟುಕೊಂಡರೆ ಅವರಿಗೂ ಕ್ಷೇಮ. ಪ್ರಜಾಪ್ರಭುತ್ವಕ್ಕೂ ಕ್ಷೇಮ. ■


ಉತ್ತರ ಕನ್ನಡ: ಬಿಜೆಪಿ ಭಂಡರಿಗೆ ಆಟ; ಸೀಬರ್ಡ್ ಸಂತ್ರಸ್ತರಿಗೆ ಸಂಕಟ

ಉತ್ತರ ಕನ್ನಡವೆಂದರೆ ಸರ್ಕಾರಿ ಯೋಜನೆಗಳ ಪ್ರಯೋಗಶಾಲೆಯಂತಾಗಿ ಅದ್ಯಾವುದೋ ಕಾಲವಾಗಿ ಹೋಗಿದೆ. ಜಲವಿದ್ಯುತ್ ಯೋಜನೆಗಳು, ಅಣು ವಿದ್ಯುತ್ ಯೋಜನೆ, ನೌಕಾನೆಲೆ, ಬಂದರು, ಹುಲಿ ಯೋಜನೆ, ಅಭಯಾರಣ್ಯ ಯೋಜನೆ, ರೈಲು ದಾರಿ, ಹೆದ್ದಾರಿ.... ಹೀಗೆ ಅಭಿವೃದ್ಧಿಯ ಮುಖವಾಡ ತೊಟ್ಟುಕೊಂಡು ಒಂದರಹಿಂದೊಂದರಂತೆ ದಾಂಗುಡಿಯಿಟ್ಟ ಪ್ರಳಯಾಂತಕ ಪ್ಲಾನ್-ಪ್ರಾಜೆಕ್ಟ್‌ಗಳು ಅಸಹಾಯಕ ಮಂದಿಯ ಬದುಕನ್ನು ಆಪೋಶನ ಪಡೆದು ತೇಗುತ್ತಲೇ ಇದೆ. ಜೀವನಾಧಾರವಾಗಿದ್ದ ತುಂಡು ನೆಲೆ, ಮನೆ, ಕಸುಬು ಕಳಕೊಂಡು ಹಲವರು ಬೀದಿ ಪಾಲಾದರೆ, ಇನ್ನೆಷ್ಟೋ ಮಂದಿ ಪರಿಹಾರದ ನಿರೀಕ್ಷೆಯಲ್ಲಿ ಮಣ್ಣು ಹಿಡಿದು ಸತ್ತೇ ಹೋಗಿದ್ದಾರೆ!

ಇದ್ಯಾವುದರ ಪರಿವೆ ಉತ್ತರ ಕನ್ನಡದ ದರಿದ್ರ ಜನ ಪ್ರತಿನಿಧಿಗಳಿಗಿಲ್ಲ! ನಾಲ್ಕು ದಶಕದಿಂದ ಜಿಲ್ಲೆಯನ್ನು ಒಂದಿಲ್ಲೊಂದು ರೀತಿಯಲ್ಲಿ ಆಳುತ್ತಿರುವ ಪಾಲಿಟಿಕಲ್ ಡಾನ್ ದೇಶಪಾಂಡೆ ಒಂದೆಡೆಯಾದರೆ ಢೋಂಗಿ ಹಿಂದುತ್ವದ ದಗಾಕೋರ ಸಂಸದ ಅನಂತ್ಮಾಣಿ ಮತ್ತೊಂದೆಡೆ. ಇವರಿಬ್ಬರೂ ಈ ನತದೃಷ್ಟ ಜಿಲ್ಲೆಗೆ ಗಂಟು ಬಿದ್ದಿರುವ ಅನಿಷ್ಟಗಳು. ನಡುವೆ ಇರುವ ಎಮ್ಮೆಲ್ಲೆ-ಎಮ್ಮೆಲ್ಸಿಗಳೆಲ್ಲರೂ ಅಷಾಢಭೂತಿಗಳು. ಈ ಹೊನಗೇಡಿಗಳಿಗೆಲ್ಲ ತಂತಮ್ಮ ರಾಜಕೀಯ ತೆವಲು-ಅಸ್ತಿತ್ವ, ಸರ್ಕಾರಿ ಸುಖ-ಸೌಲಭ್ಯದ್ದೇ ದೊಡ್ಡ ಚಿಂತೆ. ಜನರು ಸಾಯಲಿ, ಜಿಲ್ಲೆ ಬರಡಾಗಲಿ ತಮ್ಮ ಸ್ಥಾನ-ಮಾನ ಮಾತ್ರ ಅಬಾಧಿತವಾಗಿರಲಿ ಎಂಬ ಧೋರಣೆ ದುಷ್ಟ ಜನ ಪ್ರತಿನಿಧಿಗಳದು. ಹೀಗಾಗಿ ಜಿಲ್ಲೆಯ ಸಮಸ್ಯೆಗಳು ಜನಿವಾರಕ್ಕೆ ಬಿದ್ದ ಗಂಟಿನಂತೆ ಬಿಡಿಸಲಾಗದ ಸಿಕ್ಕುಸಿಕ್ಕಾಗುತ್ತಿದೆ. ಕಳೆದ ಮೂರು ದಶಕದಿಂದ ಸಂತ್ರಸ್ತರ ಗೋಳು ಹೊಯ್ದುಕೊಳ್ಳುತ್ತಿರುವ ಸೀಬರ್ಡ್ ನೌಕಾನೆಲೆ ಸಮಸ್ಯೆ ಒಂದೇ ಸಾಕು, ಜಿಲ್ಲೆಯನ್ನು ಪಾರ್ಲಿಮೆಂಟ್ ಮತ್ತು ಅಸೆಂಬ್ಲಿಯಲ್ಲಿ ಪ್ರತಿನಿಧಿಸುತ್ತಿರುವ ಸೋಗಲಾಡಿಗಳ ಮೂರು ಕಾಸಿನ ರಾಜಕಾರಣದ ಹಕೀಕತ್ತು ತಿಳಿಯಲಿಕ್ಕೆ!!

ಮಂತ್ರಿ ದೇಶಪಾಂಡೆಯದು ದೇಶಾವರಿ ಆಡಳಿತ; ಸಂಸದ ಅನಂತ್ಮಾಣಿಗೋ ತಾನು ರಸ್ತೆ, ಬ್ರಿಡ್ಜ್, ಶಾಲೆ, ಆಸ್ಪತ್ರೆ, ಲೈಟ್, ಯೋಜನಾ ನಿರಾಶ್ರಿತರ ತೊಂದರೆಯಂಥ ಲೋಕಲ್ ಸಮಸ್ಯೆಗೆ ಸಂಬಂಧಿಸದ-ದಿಲ್ಲಿಯಲ್ಲಿ ಕುಂತು ಕಾನೂನು-ಶಾಸನ ಮಾಡುವ ಮಹಾಮಹಿಮನೆಂಬ ಅಹಮ್! ಇದೇ ನೌಕಾನೆಲೆ ನಿರಾಶ್ರಿತರ ನರಕಯಾತನೆಯ ಮೂಲ. ಜನಪ್ರತಿನಿಧಿಗಳ ದುಷ್ಟ ಬುದ್ಧಿಯಿಂದ ಕಾರವಾರ-ಅಂಕೋಲಾ ನಡುವಿನ ಸಮುದ್ರ ತಟದಲ್ಲಿ ಮೂವತ್ತು ವರ್ಷದ ಹಿಂದೆ ನೆಲೆ ನಿಂತಿರುವ ನೌಕಾನೆಲೆ ಯೋಜನೆ ಬ್ರಹ್ಮರಾಕ್ಷಸನಂತಾಗಿ ಸಂತ್ರಸ್ತರನ್ನು ಈಗ ಹಿಂಡಿಹಿಪ್ಪೆ ಮಾಡಿಬಿಟ್ಟಿದೆ. ಆರಂಭದಿಂದಲೇ ನೌಕಾನೆಲೆ ಯೋಜನೆ ಪ್ರಭೃತಿಗಳು, ಕೇಂದ್ರ ರಕ್ಷಣಾ ಇಲಾಖೆ ಸಂತ್ರಸ್ತರ ಕಡೆಗಣಿಸುತ್ತಲೇ ಬಂದಿದೆ. ಮನೆ, ಹೊಲ, ತೋಟ, ಉದ್ಯೋಗ ಕಳೆದುಕೊಳ್ಳುವವರಿಗೆ ನಿಗದಿಸಿದ್ದ ಪರಿಹಾರ ಮೊತ್ತವೇ ಅವೈಜ್ಞಾನಿಕ-ಅಸಂಬದ್ಧ-ಅನ್ಯಾಯದ್ದಾಗಿತ್ತು. ನೂರಾರು ವರ್ಷ ಲಕ್ಷಾಂತರ ಕಾಯಿ ಕೊಡುವ ತೆಂಗಿನಮರ, ತಲೆ-ತಲೆ ಮಾರಿಗೆ ಅನ್ನ ನೀಡುತ್ತಿದ್ದ ಗದ್ದೆಗೆ ಕೇಂದ್ರ ರಕ್ಷಣಾ ಇಲಾಖೆಯ ಪ್ರಭೃತಿಗಳು ಕೊಟ್ಟ ಹಣ ಅತ್ಯಲ್ಪ, ನಿರಾಶ್ರಿತರ ಮಕ್ಕಳಿಗೆ ನೌಕಾನೆಲೆಯಲ್ಲಿ ಗೌರವಾನ್ವಿತ ಬದುಕು ನಿಭಾಯಿಸುವ ಸಂಬಳದ ನೌಕರಿ ಕೊಡುತ್ತೇವೆಂದಿದ್ದೂ ಲೊಳಲೊಟ್ಟೆಯೇ.


ಇಂಥ ಅನ್ಯಾಯ ಅಡಿಗಡಿಗೂ ಆಗಿದೆ. ನಿರಾಶ್ರಿತರು ಸಂಘಟಿತರಾಗಿ ಬೀದಿ ಹೋರಾಟ, ಕಾನೂನು ಹೋರಾಟ ಮಾಡಬೇಕಾಗಿ ಬಂತು. ಪ್ರತಿ ಗುಂಟೆಗೆ ರಕ್ಷಣಾ ಇಲಾಖೆ ನಿಗದಿಸಿದ ಪರಿಹಾರ ಸಾಲದೆಂದು ಸಂತ್ರಸ್ತರು ನ್ಯಾಯಾಲಯಕ್ಕೆ ಹೋದರು. ಜಿದ್ದಿಗೆ ಬಿದ್ದ ಎಸಿ ರೂಮಿನ ಅಧಿಕಾರಶಾಹಿ ಸಂತ್ರಸ್ತರ ಸತಾಯಿಸಿತು. ಕೇಸು ಸುಪ್ರೀಂಕೋರ್ಟ್‌ತನಕ ಹೋಯಿತು. ಅಲ್ಲಿ ನಿರಾಶ್ರಿತರಿಗೆ ನ್ಯಾಯ ಸಿಕ್ಕಿತು. ಪ್ರತಿ ಗುಂಟೆ ರೂ. 11,500 ನಂತೆ ಪರಿಹಾರ ಕೊಡಲು



ಸೀಬರ್ಡ್ ನೌಕಾನೆಲೆ, ನಿರಾಶ್ರಿತರ ಸ್ಥಿತಿಗತಿ

ಸುಪ್ರೀಂ ಆದೇಶಿಸಿತು. ಸಂತ್ರಸ್ತರ ಹೋರಾಟದ ಕಾವಿನಲ್ಲಿ ರಾಜಕೀಯ ಪುಢಾರಿಗಳು ಮೈ ಕಾಯಿಸಿಕೊಂಡರೇನೋ ನಿಜ. ಆದರೆ ರಕ್ಷಣಾ ಇಲಾಖೆ ಸುಪ್ರೀಂ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸದಂತೆ ಪರಿಸ್ಥಿತಿ ಎದುರಾಯ್ತು. ಆದರೆ ಪರಿಹಾರ ಎಂಬುದು ಮಾತ್ರ ಇವತ್ತಿಗೂ ಮರೀಚಿಕೆಯಾಗೇ ಇದೆ....

ಹೆಚ್ಚಿನ ಪರಿಹಾರ ಬೇಡಿಕೆ 1204 ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತ್ತು. ಪುನರ್ವಸತಿ ಕೇಂದ್ರದ ಅವಾಂತರ-ಅವ್ಯವಸ್ಥೆಗೆ ಸಂಬಂಧಿಸಿದಂತೆ 24 ಕೇಸು ಕೋರ್ಟಲ್ಲಿ ದಾಖಲಾಗಿತ್ತು. ಸುಪ್ರೀಂ ನಿರಾಶ್ರಿತರ ಅವಸ್ಥೆ ಗಂಭೀರವಾಗಿ ಪರಿಗಣಿಸಿ ಹೆಚ್ಚಿನ ಪರಿಹಾರಕ್ಕೆ ಆರ್ಡರ್ ಮಾಡಿತ್ತು. ಈ ತೀರ್ಪಿಗೆ ತಲೆ ಬಾಗಿದ ರಕ್ಷಣಾ ಇಲಾಖೆ ತನ್ನ ಡಿಫೆನ್ಸ್ ಎಸ್ಟೇಟ್ ಅಧಿಕಾರಿಯಿಂದ 317 ದಾವೆಗೆ ಸಂಬಂಧಿಸಿದ ಒಟ್ಟು ಹಣ ರೂ. 173 ಕೋಟಿ ಜಮಾ


ಅನಂತಕುಮಾರ್ ಹೆಗಡೆ


ಮನೋಹರ್ ಪರಿಕ್ಕರ್


ಯಡ್ಡಿ

ಮಾಡಿಸಿತ್ತು. 595 ಪ್ರಕರಣಗಳ ಪರಿಹಾರ ಶೇ.25 ಮತ್ತು ಹೆಚ್ಚಿನ ಪರಿಹಾರ ಶೇ.50 ಸೇರಿಸಿ ಒಟ್ಟು ರೂ. 48 ಕೋಟಿ ನಿರಾಶ್ರಿತರ ಪರಿಹಾರವೆಂದು ಕಾಯ್ದಿರಿಸಲಾಗಿತ್ತು. ಒಟ್ಟು 912 ಪ್ರಕರಣಗಳ 221.24 ಕೋಟಿ ಜಮಾ ಮಾಡಲಾಗಿದೆ.

ನ್ಯಾಯಾಲಯದ ಅಂತಿಮ ತೀರ್ಪು ಬರುತ್ತಲೇ ಉತ್ತರ ಕನ್ನಡದ ಜಿಲ್ಲಾಡಳಿತ 500 ಕ್ಕೂ ಹೆಚ್ಚು ಪರಿಹಾರ ಪ್ರಕರಣ ಸಿದ್ಧಪಡಿಸಿ ಡಿಫೆನ್ಸ್ ಎಸ್ಟೇಟ್ ಅಧಿಕಾರಿ ಕಚೇರಿಗೆ ಕಳಿಸಿಕೊಟ್ಟಿತ್ತು. ಆದರೆ ಅಲ್ಲಿ ಈ ಫೈಲ್‌ಗಳು ಧೂಳು ತಿನ್ನುತ್ತ ಕುಂತಿವೆಯಷ್ಟೇ. ಅಂದರೆ ರಕ್ಷಣಾ ಇಲಾಖೆಗೆ ಸೀಬರ್ಡ್ ನಿರಾಶ್ರಿತರೆಂದರೆ ಅಷ್ಟು ನಿಕೃಷ್ಟ! ಇದು ರಾಜ್ಯ ಸರ್ಕಾರದ ಗಮನಕ್ಕೂ ಬಂತು. ಆಗ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಒಂದು ಸಭೆ ಕರೆದರು. ಮೂರು ದಶಕದಿಂದ ತೆವಳುತ್ತಿರುವ ಸೀಬರ್ಡ್ ನಿರಾಶ್ರಿತರ ಸಮಸ್ಯೆ ಬೇಗ ಪರಿಹರಿಸುವುದಕ್ಕಾಗಿ ಕಾರವಾರದ ಜಿಲ್ಲಾಧಿಕಾರಿ ಕಚೇರಿ ಸಮುಚ್ಚಯದಲ್ಲೇ ಡಿಫೆನ್ಸ್ ಎಸ್ಟೇಟ್ ಶಾಖೆ ತೆರೆಯುವ ಬಗ್ಗೆ ರಕ್ಷಣಾ ಇಲಾಖೆಗೆ ಕೋರಿಕೆ ಸಲ್ಲಿಸುವ ನಿರ್ಧಾರ ಮುಖ್ಯ ಕಾರ್ಯದರ್ಶಿ ನೇತೃತ್ವದ ಸಭೆಯಲ್ಲಿ ಕೈಗೊಳ್ಳಲಾಗಿತ್ತು. ಇದಕ್ಕೆ ರಕ್ಷಣಾ ಇಲಾಖೆ ಒಪ್ಪಿಕೊಂಡಿತ್ತು.

ಆದರೆ ಕಾರವಾರಕ್ಕೆ ಬಂದ ಡಿಫೆನ್ಸ್ ಎಸ್ಟೇಟ್ ಇಲಾಖೆಯ ಅಧಿಕಾರಿಗಳು ಸ್ಥಳೀಯ ಕಚೇರಿಯ ಸೌಲಭ್ಯದ ಬಗ್ಗೆ ಕುಂಟುನೆಪ ಎತ್ತಿ ಪಲಾಯನ ಮಾಡಿದ್ದಾರೆ. ರಕ್ಷಣಾ ಇಲಾಖೆಯ ಉದಾಸೀನತೆಯಿಂದ ಪರಿಹಾರ ಸಮಸ್ಯೆ ಉಲ್ಬಣವಾಗಿದೆ. 634.41 ಕೋಟಿ ರೂ. ಪರಿಹಾರ ಬಾಕಿಯಾಗೇ ಉಳಿದಿದೆ. ಸಂತ್ರಸ್ತರು ಸಂಕಟ ಪಡುತ್ತಲೇ ಇದ್ದಾರೆ. ಸ್ವಯಂಘೋಷಿತ ದೇಶೋದ್ಧಾರಕ ಮೋದಿ ಸರ್ಕಾರ್ ಪ್ರೊಡಕ್ಷನ್‌ನ 'ಈ ಕರುಣಾಜನಕ ಪರಿಹಾರ' ಧಾರಾವಾಹಿಯ ಜೋಕ್ ಸೀನೊಂದು ಕಳೆದ ನವೆಂಬರ್‌ನಲ್ಲಿ ಪ್ರದರ್ಶನವಾಗಿದೆ. ಕೆನರಾದ ಗುದುಮುರಿಗೆ ಸಂಸದ ಸಾಹೇಬ ಅನಂತ್ಮಾಣಿಯ ದಿಲ್ಲಿ ಆಫೀಸಿಂದ ಕಾರವಾರದ ಬಿಜೆಪಿ ವಲಯಕ್ಕೆ ಸೀಬರ್ಡ್ ನಿರಾಶ್ರಿತರಿಗೆ ಕೇಂದ್ರ ಸರ್ಕಾರ ಬರೋಬ್ಬರಿ 11 ಸಾವಿರ ಕೋಟಿ ಪರಿಹಾರಾರ್ಥ ಬಿಡುಗಡೆ ಮಾಡಿದೆ ಎಂದು ಬಂಡಲ್ ಸಂದೇಶ ಒಂದು ಬಂದಿತ್ತು.

ಮೋದಿಗಿಂತಲೂ ಕಲಾತ್ಮಕವಾಗಿ ಸುಳ್ಳು ಹೇಳುವ ಕಲೆ ಕರಗತ ಮಾಡಿಕೊಂಡಿರುವ ಅನಂತ್ಮಾಣಿ ಸ್ವ-ಪಕ್ಷದ ಪೆದ್ದರನ್ನೆಲ್ಲ ನಾಜೂಕಾಗಿ ಯಾಮಾರಿಸಿದ್ದ. ಕಾರವಾರದ ಶಾಸಕ ಸತೀಶ್ ಸೈಲ್ ಮತ್ತು ಮಂತ್ರಿ ದೇಶಪಾಂಡೆ ಹೆಚ್ಚಿನ ಪರಿಹಾರಕ್ಕೆ ರಕ್ಷಣಾ ಇಲಾಖೆ ಒಪ್ಪುವಂತೆ ಮಾಡಿದ ಸಾಹಸ ತಮ್ಮದೆಂದು ಹೇಳಿಕೊಳ್ಳುತ್ತಿರುವುದು ಚೆಡ್ಡಿಗಳ ಕುಂಡೆಗೆ ಹಸಿ ಮೆಣಸು ಅರೆದಂತಾಗಿತ್ತು. ಅನಂತ್ಮಾಣಿ 11 ಸಾವಿರ ಕೋಟಿ ಬಿಡುಗಡೆ ಮಾಡಲಾಗಿದೆಯೆಂದು ಮೆಸೇಜು ಕಳಿಸಿದ್ದೇ ತಡ, ಬಿಜೆಪಿಯ ಕೇಸರಿ ಬ್ರಿಗೇಡ್ ಪರಿಹಾರ ಪಾಲಿಟಿಕ್ಸ್ ಶುರು ಹಚ್ಚಿಕೊಂಡೇ ಬಿಟ್ಟಿತು.

ಅಮಾಯಕ ಸಂತ್ರಸ್ತರ ಕಿವಿ ಮೇಲೆ ಹೂವಿಡಲು ಬಿಜೆಪಿ ಭಂಡರಲ್ಲೇ ಸ್ಪರ್ಧೆ ಏರ್ಪಟ್ಟಿತು. ಮಾಧ್ಯಮ ಗೋಷ್ಠಿ ಪೈಪೋಟಿ ಮೇಲೆ ನಡೆದದ್ದೇ ನಡೆದದ್ದು. ಮೂರು ದಶಕದ ಸಂತ್ರಸ್ತರ ಸಮಸ್ಯೆ ಮೋದಿ ಕೃಪೆಯಿಂದ ರಕ್ಷಣಾ ಮಂತ್ರಿ ಪರಿಕ್ಕರ್ ಪರಿಹಾರ ಮಾಡಿದ್ದಾರೆ. ಇದಕ್ಕೆ ಸಂಸದ ಅನಂತ್ಮಾಣಿಯ ಕಳಕಳಿ-ಕರ್ತವ್ಯಶಕ್ತಿಯೇ ಕಾರಣ ಎಂದೆಲ್ಲ ಭೋಂಗು ಬಿಟ್ಟರು ಚೆಡ್ಡಿ ಚತುರರು. ಕಾರವಾರದ ಬಿಜೆಪಿ ಶಾಸಕನಾಗಲು ತಿಪ್ಪರಲಾಗ ಹಾಕುತ್ತಿರುವ ಪಡರೆ ನಾಗನಂತೂ ದಗಲುಬಾಜಿ ಸಂಸದ ಅನಂತ್ಮಾಣಿಯಿಂದಾಗಿ ಸಂತ್ರಸ್ತರು ಸ್ವರ್ಗ ಕಂಡಿದ್ದಾರೆಂಬಂತೆ ಬಹುವರ್ಣದ ಜಾಹೀರಾತು ತನ್ನ ಮುಖವಾಣಿಯಲ್ಲಿ ಅಚ್ಚಿಸಿಕೊಂಡುಬಿಟ್ಟಿದ್ದ. ಸುಳ್ಳುಗಾರ ಅನಂತ್ಮಾಣಿಯ ಮಾತು ನಂಬಿ ಈ ಸ್ವಯಂಘೋ[...] ಜಾಣರು ಎಡವಿಬಿದ್ದರಾ ಅಥವಾ ಸುಳ್ಳು [...] ರಿಹರ್ಸಲ್ ನಡೆಸಿದರಾ? ಎಂಬುದು [...] ಸಂಘಿಗಳಿಗೇ ಅರ್ಥವಾಗಿಲ್ಲ!

ಇದಾದ ಕೆಲವೇ ದಿನದಲ್ಲಿ (ಡಿಸೆಂಬರ್ [...] ಹೊನ್ನಾವರಕ್ಕೆ ರಾಜ್ಯ ಬಿಜೆಪಿ ಅಧಿನಾಯಕ [...] ಬೀಗುವ ಯಡ್ಡಿಯಜ್ಜ ಬಂದಿದ್ದರು. ತನ್ನ [...] ಜಿಲ್ಲಾ ಬಿಜೆಪಿಯ ಹವ್ಯಕ ಹಿರೇಮಣಿಗಳು ಬ[...] ಮಾಜಿ ಮಂತ್ರಿ ಶಿವಾನಂದ ನಾಯ್ಕರ ಮಗಳ ಮದು[...] ಬಂದಿದ್ದ ಯಡ್ಡಿಯಜ್ಜ ಹೊನ್ನಾವರದಲ್ಲಿ ಸಾರ್ವಜನಿ[...] ನಡೆಸಿದ್ದರು. ಈಗ ಯಡ್ಡಿ ಕಂಕುಳಲ್ಲಿ ಸದಾ [...] ಅನಂತ್ಮಾಣಿಯೇ ಶಿವಾನಂದ ನಾಯ್ಕರ ರಾ[...] ಅವಸಾನಕ್ಕೆ ಕಾರಣ ಎಂಬುದು ವಿಕಟ ವ್ಯಂಗ್[...] ಅನಂತ್ಮಾಣಿ ಅಂದು ಯಡ್ಡಿ ಶೋನಲ್ಲಿ "[...] ನಿರಾಶ್ರಿತರ ಸಮಸ್ಯೆಗೆ ಪರಿಹಾರ ಕಂಡುಹಿಡಿ[...] ಬಿಜೆಪಿ ರಕ್ಷಣಾ ಮಂತ್ರಿ ಮನೋಹರ ಪರಿ[...] ಸಾವಿರ ಕೋಟಿಯ ಪರಿಹಾರ ಬಿಡುಗಡೆ ಮಾ[...] ನ್ಯಾಯಾಲಯದ ಆದೇಶದಂತೆ ಪರಿಹಾರ [...] ಕೇಂದ್ರ ಸರ್ಕಾರ ಕಂಕಣ ಬದ್ಧವಾಗಿದೆ" ಎಂದೇ[...] ಬಿಟ್ಟಿದ್ದರು.


ಬ್ರಾಹ್ಮಣ ಶಿಷ್ಯ ಅನಂತ್ಮಾಣಿಯ ಸಂಘಿ [...] ಏರಿಳಿತದ ಭಾಷಣದಿಂದ ಯಡ್ಡಿ ಪ್ರಚೋ[...] ಹೋದರು. ತಾನೇನೂ ಕಮ್ಮಿಯಿಲ್ಲ ಸೀಬರ್ಡ್ ನಿ[...] ಸಮಸ್ಯೆಯ ಕದಡಿದ ನೀರಲ್ಲಿ ಮೀನು ಹಿಡಿವ [...] ಎಂದು ತೋರಿಸುವ ಹಠಕ್ಕೆ ಬಿದ್ದರು ಯಡ್ಡಿ. [...] ದಶಕದಿಂದ ಸೀಬರ್ಡ್ ನಿರಾಶ್ರಿತರ ಸತಾಯ[...] ಪರಿಹಾರ ಸಮಸ್ಯೆಯನ್ನು ಕೆಚ್ಚೆದೆಯಿಂದ ಶಾಶ್ವತ ಪರಿ[...] ರಕ್ಷಣಾ ಮಂತ್ರಿಯೆಂದು ಪರಿಕ್ಕರ್‌ಗೆ ಕಣ[...] ಕೊಂಡಾಡಿದ್ದರು ಯಡ್ಡಿ. ಇಂಥ ಧೀರಾಧಿ ಧೀರ[...] ಮಂತ್ರಿಗೆ 25 ಸಾವಿರ ಜನ ಸೇರಿ ಸನ್ಮಾನ ಮಾಡ[...] ಕೂಗಾಡಿದ್ದರು.

ವಾಸ್ತವ ಮಾತ್ರ ಕಠೋರವಾಗಿದೆ. 11 ಸಾವಿರ[...] ಹಣ ಪರಿಕ್ಕರ್ ಬಿಡುಗಡೆ ಮಾಡಿದ್ದು ಸಂತ್ರಸ್ತರ [...] ಬಟಾವಡೆಗಲ್ಲ; ಸೀಬರ್ಡ್ ಯೋಜನೆಯ ಎರಡನೇ[...] ಕಾಮಗಾರಿಗಾಗಿ ಆಗಿತ್ತು. ಇದು ಸಂಸದ ಅ[...] ಮಾಜಿ ಸಿಎಂ ಯಡ್ಡಿಜೀಗೆ ಗೊತ್ತಿತ್ತು. ಗೊತ್ತಿದ್ದೂ [...] ಸುಳ್ಳು ಈ ಚೆಡ್ಡಿ ನಾಯಕದ್ವಯರು ಬೊಗಳಿ[...] ಹೊತ್ತಲ್ಲೇ 'ಪತ್ರಿಕೆ' 11 ಕೋಟಿ ಎರಡನೇ [...] ಸೀಬರ್ಡ್ ಕಾಮಗಾರಿಗೇ ಹೊರತು ಬಡವರ ಪರಿ[...] ಎಂದು ಬರೆದಿತ್ತು. ಈಗದು ಅಧಿಕೃತವಾಗಿದೆ. ಅ[...] ಖಾಸಾ ಆದ್ಮಿಗಳು ನಮ್ಮ ಸಂಸದ ಸಾಹೇಬ[...] ಹೇಳೋ ಪೈಕಿಯಲ್ಲ ಅಂತಿದ್ದಾರೆ. ಹಾಗಿದ್ದರೆ [...] ಪೆದ್ದನಾ? 11 ಸಾವಿರ ಕೋಟಿ ಹಣದ [...] ಗೊತ್ತಾಗದಿದ್ದರೆ ಆತ ಸಂಸದನಾಗಲು ನಾಲಾಯ[...] ಐದು ಬಾರಿ ಸಂಸದನಾಗಿ ಆಯ್ಕೆಯಾಗಿರುವ ಅ[...] ಯೋಗ್ಯತೆ ಇಷ್ಟೇನಾ? ಕೇಂದ್ರದಲ್ಲಿರುವ ತನ್ನದೇ [...] ಸರ್ಕಾರದ ನಡಾವಳಿಯೂ ಗೊತ್ತಾಗದಷ್ಟು ಅ[...] ಮಾಣಿ ಈಡಾಗಿದ್ದಾನಾ?

ಈಗ ಬಿಜೆಪಿಗರೆಲ್ಲ ಬಾಯಲ್ಲಿ ಅವಲಕ್ಕಿ ಹಾ[...] ಕುಂತಿದ್ದಾರೆ. ಯಾರೂ ಸೀಬರ್ಡ್ ಸಂತ್ರಸ್ತರ ಪ[...] ಬಗ್ಗೆ ಉಸಿರೆತ್ತುತ್ತಿಲ್ಲ. ಮೋದಿ-ಯಡ್ಡಿ-ಅನಂ[...] ಸುಳ್ಳಾಟ ಉತ್ತರ ಕನ್ನಡಿಗರಿಗಂತೂ ಅರ್ಥವಾಗಿದೆ. [...] ನಿರಾಶ್ರಿತರು ನಿರಾಶೆ-ನೋವಿನ ನಡುವೆಯೂ [...] ಭಂಡಾಟ, ಬಂಡಲ್‌ಬಾಜಿ ಮಾತುಗಾರಿಕೆಗೆ ಬ[...] ನಗುತ್ತಿದ್ದಾರೆ.

ಹೇ.... ರಾಮ್... ಇಂಥ ಸೋಗಲಾಡಿ ಸಂ[...] ಆತನ ಢೋಂಗಿ ಪರಿವಾರದಿಂದ ಎಂದು ಉತ್ತ[...] ಮುಕ್ತಿ ಕೊಡುವೆ? ಹಾಗಂತ ಜಿಲ್ಲೆಯ ಜನರು ಹೇ[...]

■ ವರದಿ[...]




ಸಿದ್ದು ಸಮಾವೇಶಕ್ಕೆ ವಿಶ್ವನಾಥ್ ಗುಡ[...]

ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಸಂಧಾನದಿಂದ ವಿಶ್ವನಾಥ್ ತಣ್ಣಗಾಗಿದ್ದಾರೆ ಅಂದುಕೊಂಡದ್ದು ಸುಳ್ಳಾಗಿದೆ. ರಾಜ್ಯ ಉಸ್ತುವಾರಿ ಮುರಳೀಧರ್ ರಾವ್ ಭೇಟಿ ಮಾಡಿದ ಬೆನ್ನಿಗೆ ನಾನು ಕಾಂಗ್ರೆಸ್‌ನಲ್ಲೇ ಉಳಿಯುತ್ತೇನೆ ಎಂಬ ಹೇಳಿಕೆ ನೀಡಿದ್ದ ವಿಶ್ವನಾಥ್‌ರು ಅಚ್ಚರಿ ಮೂಡಿಸಿದ್ದರು. ಯಾಕಂದ್ರೆ ಸಿದ್ದು ಮೇಲಿನ ಸಿಟ್ಟಿಗೆ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಲು ಬಹುತೇಕ ಮಾತುಕತೆ ಮುಗಿದಿತ್ತು. ವಿಶ್ವನಾಥ್ ಕೂಡಾ ಹಳೇ ವೈರಿ ದೇವೇಗೌಡರ ಕೊಟ್ಟಿಗೆ ಸೇರಲು ಉತ್ಸುಕರಾಗೇ ಇದ್ದರು.

ಆದರೆ ಯಾವಾಗ ತುಣಸೂರಿನ ಟಿಕೆಟ್ ವಿಚಾರ ಬಂದು, ಪುತ್ರವ್ಯಾಮೋಹಿ ಜಿ.ಟಿ.ದೇವೇಗೌಡರು ಗಡದ್ದು ಗುಟುರು ಹಾಕಿದರೋ ಆಗಿನಿಂದ ವಿಶ್ವನಾಥ್ ಮತ್ತಾದಂತೆ ಕಂಡುಬರುತ್ತಿದ್ದಾರೆ. 'ಹೈಕಮಾಂಡ್ ನಾಯಕರು ಎಲ್ಲಾ ಸರಿ ಮಾಡುವ ಭರವಸೆ ನೀಡಿರೋದ್ರಿಂದ ಕಾಂಗ್ರೆಸ್‌ನಲ್ಲೇ ಉಳಿಯುತ್ತೇನೆ' ಎಂಬ ಮಾತು ಅವರಿಂದ ಹೊರಬಿದ್ದದ್ದು ಕೂಡಾ ಆಗಲೇ.

ಇನ್ನೇನು ಮೈಸೂರು ಭಾಗದ ದಿಗ್ಗಜ ನಾಯಕರ ಕದನಕ್ಕೆ ತೆರೆ ಬಿದ್ದಿದೆ ಅಂದುಕೊಳ್ಳುವ ಹೊತ್ತಿಗೆ ಮತ್ತೆ ಬೆಂಕಿ ದಿಗ್ಗೆಂದಿದೆ. ಅದಕ್ಕೆ ಕಾರಣವಾದದ್ದು ಸಿದ್ದರಾಮಯ್ಯ ಸರ್ಕಾರದ ಅದ್ದೂರಿ ಸಾಧನಾ ಸಮಾವೇಶ. ಕೆಲದಿನಗಳ ಹಿಂದೆ ಚಿತ್ರದುರ್ಗದಲ್ಲಿ ನಾಲ್ಕು ವರ್ಷ ಪೂರೈಸಿದ ಸಮಾರಂಭ ಮಾಡಿದ್ದ ಸರ್ಕಾರ ಈ ಸಲ [...] ತವರು ಜಿಲ್ಲೆ ಮೈಸೂರಿನಲ್ಲಿ ಅಂತದ್ದೇ ಸಮಾವೇಶ ಆಯೋ[...] ಸರ್ಕಾರದ ವಿವಿಧ ಯೋಜನೆಗಳಡಿ ಆಯ್[...] ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿ[...] ಕಾರ್ಯಕ್ರಮದ ಉದ್ದೇಶವಾಗಿತ್ತು. ಆದಾಗ್ಯೂ ಆ ಸ[...] ಕಾಂಗ್ರೆಸ್‌ನ ಚುನಾವಣಾ ತಯಾರಿಯು [...] ಆಗಿತ್ತಾದ್ದರಿಂದ ಸರ್ಕಾರದ ಭಾಗವಾಗಿರದ ಕಾಂ[...] ತುಸು ಉತ್ಸುಕರಾಗಿದ್ದರು. ಸಿದ್ದು ಜೊತೆ ಮುನಿಸಿಕೊ[...] ವಿಶ್ವನಾಥ್‌ಗೆ ಅಂತಹ ಉತ್ಸಾಹ ಇರದೆ[...] ಅವರನ್ನು ಉದ್ದೇಶಪೂರ್ವಕವಾಗಿ ಆಹ್ವಾನಿಸದೆ ಸ[...] ದಿಂದ ಹೊರಗಿಟ್ಟದ್ದು ವೃದ್ಧ ಜೀವ ಒಳಗೊಳಗೇ [...] ವಂತೆ ಮಾಡಿತ್ತು. ಅದರಲ್ಲೂ ವೇದಿಕೆಯ [...]

ಬಳ್ಳಾರಿ: ಹೆಂಡ್ತಿಗೆ ಆಸಿಡ್ ಕುಡಿಸಿದ ವಿಕೃತ ಪೊಲೀಸಪ್ಪ!



ಸ್ಯಾಡಿಸ್ಟ್ ವೆಂಕಟೇಶ್

ಎಲ್ಲವೂ ನೆಟ್ಟಗಿದ್ದಿದ್ದರೆ ಆ ಹೆಣ್ಮಗಳು ಇಷ್ಟೊತ್ತಿಗೆ ಎರಡು ಮುದ್ದುಮಕ್ಕಳು ಹಾಗೂ ಪೊಲೀಸ್ ಗಂಡನ ...ತ ನೆಮ್ಮದಿಯ ಗೃಹಿಣಿಯಾಗಿರುತ್ತಿದ್ದಳು. ಆದರೆ ...ಕೊಂಡ ಗಂಡನ ವಿಕೃತ ಖಯಾಲಿಯಿಂದಾಗಿ ಹಾಸಿಗೆ ...ಲೆ ಜೀವಂತ ಶವದಂತೆ ಬಿದ್ಕೊಂಡಿದ್ದಾಳೆ. ಧನಪಿಶಾಚಿ ...ಡ ಬಲವಂತವಾಗಿ ಆಸಿಡ್ ಕುಡಿಸಿದ್ದರಿಂದ ಅನ್ನಾಹಾರ ...ಯುತ್ತಿಲ್ಲ. ಈಗಾಗಲೇ ಮೂರ್‍ನಾಲ್ಕು ಆಪರೇಷನ್ ...ದೆಯಾದರೂ ಪ್ರಾಣದ ಖಾತ್ರಿಗೆ ಮತ್ತೂ ಒಂದು ...ರೇಷನ್ ಆಗಬೇಕು ಅಂತ ಡಾಕ್ಟರುಗಳು ಹೇಳುತ್ತಿದ್ದಾರೆ. ...ದೆಯ ಕೈಲಿದ್ದ ಪುಡಿಗಾಸೆಲ್ಲ ಖರ್ಚಾಗಿ, ಆಸ್ಪತ್ರೆಯ ...ಲ್ ಪಾವತಿಸಲಿಕ್ಕೂ ಸಾಧ್ಯವಿಲ್ಲದೆ ಮಗಳನ್ನು ಮನೆಗೆ ...ದು ಮಲಗಿಸಿಕೊಂಡಿದ್ದಾರೆ. ಪೈಪ್ ಹಾಕಿ ಗಂಜಿ ...ಸಬೇಕು. ಮಕ್ಕಳಿಬ್ಬರು ದೈನೇಸಿ ಅಮ್ಮನ ಅಕ್ಕಪಕ್ಕ ...ಪಿಳಿ ಕಣ್ಣುಬಿಟ್ಟು ಕೂತಿರೋದನ್ನು ನೋಡುತ್ತಿದ್ದರೆ ...ಥವರಿಗೂ ಕರುಳು ಕಿತ್ತು ಬರುತ್ತೆ, ಜೊತೆಗೆ ಆ ...ತಕ ಗಂಡನ ಮೇಲೆ ಕೋಪವೂ ಉಕ್ಕಿಬರುತ್ತೆ. ಜಿಲ್ಲಾ ..., ಡಿವೈಎಸ್ಪಿಗೆ ತಮ್ಮ ಈ ಸಿಬ್ಬಂದಿಯ ಸಂಪೂರ್ಣ ...ನ್ಗಡಿ ತಿಳಿದಿದ್ದರೂ ಕರೆದು ಬುದ್ಧಿ ಹೇಳದೆ ಕೈಕಟ್ಟಿ ...ತಿರೋದು ನೋಡಿದರೆ ಪೊಲೀಸ್ ಇಲಾಖೆಗೆ ...ತಃಕರಣ ಅನ್ನೋದು ಇದೆಯೋ ಇಲ್ಲವೋ ಎಂಬ ...ನುಮಾನ ಮೂಡದಿರದು.

ಆಕೆಯ ಹೆಸರು ಆಶಾ. ಹೆಸರಿನಷ್ಟೇ ಮುದ್ದಾಗಿದ್ದ ...ಡುಗಿ. ಬಳ್ಳಾರಿ ಸರ್ಕಾರಿ ಆಸ್ಪತ್ರೆಯಲ್ಲಿ ಕೆಳದರ್ಜೆ ...ನೌಕರರಾಗಿ ಕೆಲಸ ಮಾಡುತ್ತಿದ್ದ ಆವಳ ತಂದೆ ನರಸಿಂಹಲು ...ಗಳನ್ನು ಪ್ರೀತಿಯಾಗಿಯೇ ಸಾಕಿದ್ದರು. ಅಂಥಾ ...ಡುಗಿಯ ಬಾಳಿಗೆ ಕರಾಳ ಗ್ರಹಣದಂತೆ ...ದುಕೊಂಡವನು ತೋರಣಗಲ್ಲು ಪೊಲೀಸ್ ಠಾಣೆಯ ...ಟೆಕ್ ಪೇದೆ ವೆಂಕಟೇಶ ಅಲಿಯಾಸ್ ಸ್ಯಾಡಿಸ್ಟ್ ಯೆಂಕ್ಟೇಸ. ...06ರಲ್ಲಿ ಮಗಳಿಗೆ ಮದುವೆ ಮಾಡಲು ಗಂಡುಗಳ ...ಡುಕಾಟದಲ್ಲಿದ್ದ ನರಸಿಂಹಲುಗೆ ಅದ್ಯಾರೋ ಪುಣ್ಯಾತ್ಮರೂ ...ಕಟೇಶನ ಪರಿಚಯ ಮಾಡಿಸಿದ್ದರು. ನೋಡಲು ಕರೀ ...ಣದಂತಿದ್ದರೂ ವೆಂಕಟೇಶನ ಪೊಲೀಸ್ ಇಲಾಖೆಯ ...ದೆ ಕೆಲಸಕ್ಕೆ ಮರುಳಾದ ನರಸಿಂಹಲು ತಾನು ಕೂಡಿಟ್ಟಿದ್ದ ...ದಲ್ಲೇ ಐವತ್ತು ಸಾವಿರ ವರದಕ್ಷಿಣೆ, ಐದು ತೊಲ ...ಗಾರ ಕೊಟ್ಟು ತಕ್ಕಮಟ್ಟಿಗೆ ಅದ್ದೂರಿ ಮದುವೆಯನ್ನೇ ...ಡಿಕೊಟ್ಟಿದ್ದರು. ಪೊಲೀಸ್ ಗಂಡ ಸಿಕ್ಕಿದ್ದರಿಂದ ಆಶಾ ...ಡಾ ಖುಷಿಯಾಗಿಯೇ ಗಂಡನ ಮನೆ ಸೇರಿದ್ದಳು. ...ರೆ ಅವಳ ಖುಷಿ ಬಹಳ ದಿನವೇನೂ ಬಾಳಿಕೆ ಬರಲಿಲ್ಲ. ...ಭದಲ್ಲೇ ವೆಂಕಟೇಶ ಅದೆಷ್ಟು ವಿಕೃತ ಸ್ವಭಾವದವ, ...ಪಿಶಾಚಿ ಅನ್ನೋದು ಆಶಾಗೆ ಗೊತ್ತಾಗಿಹೋಗಿತ್ತು.

...ಆಗಿನ್ನು ವೆಂಕಟೇಶ ಬಳ್ಳಾರಿಯ ಗಾಂಧಿನಗರ ಪೊಲೀಸ್ ...ಯಲ್ಲಿ ಹಿರಿಯ ಪೊಲೀಸ್ ಪೇದೆಯಾಗಿದ್ದ. ಹೆಂಡತಿಯ ...ನ ಕಾಸಿನ ಮೇಲೆ ಕಣ್ಣುಹಾಕಿದ ವೆಂಕಟೇಶ್, ಆಶಾಳ ಅಂಗೈಯಲ್ಲಿದ್ದ ಮದುವೆ ಗೋರಂಟಿ ಅಳಿಸುವುದಕ್ಕು ಮೊದಲೇ ತಂದೆ ಮನೆಯಿಂದ ಒಂದು ಲಕ್ಷ ಹಣ, ಬಳ್ಳಾರಿಯಲ್ಲಿ ಒಂದು ಸೈಟು ತರುವಂತೆ ಸಣ್ಣಗೆ ಚಿವುಟಲು ಶುರು ಮಾಡಿದ್ದ. ತವರಿನ ಪರಿಸ್ಥಿತಿಯನ್ನು ಚೆನ್ನಾಗಿಯೇ ಅರಿತಿದ್ದ ಆಶಾ ಅದಕ್ಕೆ ಒಪ್ಪಿರಲಿಲ್ಲ. ಆಗ ತನ್ನ ಪೊಲೀಸ್ ಟಾರ್ಚರ್ ಶುರು ಮಾಡಿದ್ದ ವೆಂಕಟೇಶ ಆಕೆಯನ್ನು ಮನೆಯಲ್ಲೇ ಕೂಡಿಹಾಕಿ ಚಿತ್ರಹಿಂಸೆ ಕೊಟ್ಟಿದ್ದ. ಆಕೆಯನ್ನು ಹೊರಗಡೆಯೇ ಕಳಿಸುತ್ತಿರಲಿಲ್ಲ. ಅಪ್ಪಿತಪ್ಪಿ ಆಕೆ ಕಿಟಕಿಯಲ್ಲಿ ಇಣುಕಿ ನೋಡಲು ಯತ್ನಿಸಿದರೆ, 'ಅದ್ಯಾವನಿಗೆ ಸನ್ನೆ ಮಾಡುತ್ತಿದೀಯಾ, ಯಾರ ಜೊತೆ ನಿನ್ನ ಸಂಬಂಧವಿದೆ?' ಅಂತೆಲ್ಲ ಅಸಹ್ಯದ ಪ್ರಶ್ನೆಗಳ ಮೂಲಕ ಮಾನಸಿಕ ಹಿಂಸೆ ಕೊಡುತ್ತಿದ್ದ. ವೆಂಕಟೇಶನ ವಿಕೃತಿ ಅದ್ಯಾವ ಮಟ್ಟಕ್ಕೆ ಹೋಗಿತ್ತೆಂದರೆ ಆಶಾ ಮತ್ತವಳ ಅಣ್ಣನ ನಡುವೆಯೇ ಸಂಬಂಧ ಕಟ್ಟಿ ಹಿಂಸಿಸುತ್ತಿದ್ದ.

ಇದು ಆಶಾಳ ತಂದೆ ನರಸಿಂಹಲುಗೆ ಗೊತ್ತಾಗಿ ಮಗಳನ್ನು ಕರೆದೊಯ್ಯಲು ಅಳಿಯನ ಮನೆಗೆ ಬಂದಾಗ ಹಣ ಸೈಟು ಕೊಡಿ ಇಲ್ಲ ನಿಮ್ಮ ಮಗಳಿಂದ ಡೈವೋರ್ಸ್ ಕೊಡಿಸಿ ಅಂತ ಚೌಕಾಸಿಗಿಳಿದಿದ್ದ. ವಯಸ್ಸಿಗೂ ಮರ್ಯಾದೆ ಕೊಡದೆ ಮಾವನನ್ನು ಹೊಡೆದು ಹೊರಹಾಕಿದ್ದ. ಅವತ್ತು ಕಿಂಚಿತ್ತು ಹೆಚ್ಚುಕಮ್ಮಿಯಾಗಿದ್ದರೂ ವೆಂಕಟೇಶ ಬೀಸಿದ ಚಾಕುವಿನ ಏಟಿಗೆ ನರಸಿಂಹಲು ರಕ್ತ ಕಾರಿಕೊಂಡು ಸಾಯಬೇಕಿತ್ತು. ಕೊನೆಗೆ ನರಸಿಂಹಲು ತನ್ನ ಪೊಲೀಸ್ ಅಳಿಯನ ಮೇಲೆಯೇ ಕೌಳಬಜಾರ್ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಿಸಿದ್ದರು (ದೂರು ಸಂಖ್ಯೆ 153/2007). ಹಿರಿಯ ಅಧಿಕಾರಿಗಳ ಮುಂದೆ ಕ್ಷಮೆ ಬೇಡುವಂತೆ ಅಂಗಲಾಚಿದ್ದ ವೆಂಕಟೇಶ ಇನ್ಮುಂದೆ ಹೀಗೆ ನಡೆದುಕೊಳ್ಳುವುದಿಲ್ಲ ಎಂಬ ಭರವಸೆ ಕೊಟ್ಟು ಕೇಸ್ ವಾಪಾಸ್ ತೆಗೆದುಕೊಳ್ಳುವಂತೆ ಪುಸಲಾಯಿಸಿದ್ದ. ಮಗಳ ಬದುಕು ಸರಿಹೋದರೆ ಸಾಕು ಅಂತ ಆ ವೃದ್ಧ ತಂದೆಯೂ ಕೇಸ್ ವಾಪಾಸ್ ತೆಗೆದುಕೊಂಡಿದ್ದರು.


ನರಳಾಡುತ್ತಿರುವ ಆಶಾ...

ಆದಾಗಿ ಕೆಲದಿನ ಆ ಜೋಡಿಯ ಜೀವನ ಚೆನ್ನಾಗಿಯೇ ಸಾಗಿತ್ತು. ಅಲ್ಲದೆ ಒಂದು ಗಂಡು ಮಗವೂ ಜನಿಸಿತ್ತು. ವೆಂಕಟೇಶ ಮಗುವಿನ ನಾಮಕರಣವನ್ನು ವಿನಾಕಾರಣ ಮುಂದೂಡುತ್ತಿದ್ದನ್ನು ಕಂಡ ಆಶಾಳ ತಂದೆ ಮತ್ತು ದೊಡ್ಡಪ್ಪನ ಮಗನೆ ಸೇರಿ ಚಿಕ್ಕದಾಗಿ ಸಮಾರಂಭ ಮಾಡಿ ಮಗುವಿಗೆ ಅಖಿಲ್ ಅಂತ ಹೆಸರಿಟ್ಟಿದ್ದರು. ಇದು ವೆಂಕಟೇಶನಿಗೆ ಇನ್ನಿಲ್ಲದ ಸಿಟ್ಟು ತರಿಸಿತ್ತು. ಅವನ ಹಳೆಯ ಪ್ರವರಗಳು ಮತ್ತೆ ಶುರುವಾದವು. ದಿನಾ ಕಂಠಪೂರ್ತಿ ಕುಡಿದು ಬರೋದು, ಬಾಯಿಗೆಬಂದಂತೆ ಬಯ್ಯೋದು, ಮಕ್ಕಳ ಮುಂದೆಯೇ ಹಿಗ್ಗಾಮುಗ್ಗ ಹೊಡೆಯೋದು, ಗ್ಯಾಸ್ ಲೀಕ್ ಮಾಡಿ ಸಾಯಿಸಿಬಿಡುತ್ತೇನೆ ಅಂತೆಲ್ಲ ಬೆದರಿಸೋದು ನಡೆದೇ ಇತ್ತು. ಅಷ್ಟಾದರೂ ಮಕ್ಕಳ ಭವಿಷ್ಯಕ್ಕಾಗಿ ಆಶಾ ಎಲ್ಲವನ್ನೂ ನುಂಗಿಕೊಂಡಿದ್ದಳು.

2015ರ ವೇಳೆಗೆ ಅವರ ವಾಸ ಪೊಲೀಸ್ ಕ್ವಾಟ್ರರ್ಸ್‌ಗೆ ಬದಲಾಗಿತ್ತು. ಸುತ್ತಲೂ ಪೊಲೀಸ್ ಕುಟುಂಬಗಳೇ ಇರೋದ್ರಿಂದ ಈಗಲಾದರೂ ಗಂಡ ತನ್ನೊಟ್ಟಿಗೆ ನೆಟ್ಟಗೆ ನಡೆದುಕೊಳ್ಳಬಹುದು ಅಂತ ಆಶಾ ಕನಸಿದ್ದೆಲ್ಲ ವ್ಯರ್ಥವಾಯ್ತು. ಅವನ ವಿಕೃತಿ ಮತ್ತಷ್ಟೂ ಹೆಚ್ಚಾಯ್ತು. ಅಕ್ಕಪಕ್ಕದ ಮನೆಯ ಹೆಂಗಸರೊಂದಿಗೆ ಮಾತನಾಡಿದರೆ, 'ನನ್ನ ಬಗ್ಗೆ ಅವರ ಬಳಿ ಚಾಡಿ ಹೇಳ್ತೀಯ' ಅಂತ ಬಡಿಯಲು ಮುಂದಾಗುತ್ತಿದ್ದ. ಬೇಸತ್ತ ಆಶಾ ತನ್ನ ತವರುಮನೆ ಸೇರಿಕೊಂಡಿದ್ದಳು.


ಆಶಾ

ಎಂಟು ತಿಂಗಳು ತಂದೆಯ ಮನೆಯಲ್ಲಿದ್ದ ಆಕೆ ಈಗಲಾದರೂ ಗಂಡ ಸರಿಹೋಗಿರಬಹುದು ಅಂತ ಮನೆಗೆ ವಾಪಾಸಾಗಿದ್ದೆ ಅವಳ ಬಾಳಿಗೆ ಬಲುದೊಡ್ಡ ಆಘಾತ ತಂದಿಟ್ಟಿತು. ಮನೆಗೆ ಬಂದ ಹೆಂಡತಿಯ ಮೇಲೆ ವೆಂಕಟೇಶ್ ಅದೇ ವಿಕೃತ ದೌರ್ಜನ್ಯ ನಡೆಸಿದ್ದಾನೆ. ಆಗ ವಿಧಿಯಿಲ್ಲದೆ ಎಸ್ಪಿ ಚೇತನ್‌ಕುಮಾರ್‌ರನ್ನು ಭೇಟಿಯಾಗಿ ತನ್ನ ಕಷ್ಟ ತೋಡಿಕೊಂಡಿದ್ದಳು. ಆಗ ಎಸ್ಪಿ ಸಾಹೇಬರು ಡಿವೈಎಸ್ಪಿ ಹೊಸಮನಿಯವರನ್ನು ಕರೆಸಿ, ಗಂಡಹೆಂಡಿರ ಜಗಳ ಬಗೆಹರಿಸುವಂತೆ ಹೇಳಿಕಳಿಸಿದ್ದರು. ಇಬ್ಬರಿಗೂ ಬುದ್ಧಿ ಹೇಳಿದ ಡಿವೈಎಸ್ಪಿ ಇನ್ಮುಂದೆ ಇಂಥಾ ತಕರಾರು ಮಾಡಿಕೊಳ್ಳದಂತೆ ಎಚ್ಚರಿಕೆ ನೀಡಿ ಕಳಿಸಿದ್ದರು. ಆ ಬುದ್ಧಿ ಮಾತಿನ ವ್ಯಾಲಿಡಿಟಿಯೂ ಒಂದೇ ತಿಂಗಳಿಗೆ ಕೊನೆಯಾಗಿತ್ತು. ವೆಂಕಟೇಶ ಮತ್ತೆ ತನ್ನ ವಿಕೃತಿ ಶುರು ಮಾಡಿಕೊಂಡಿದ್ದ.

ಮತ್ತೆ ಆಕೆ ಡಿವೈಎಸ್ಪಿಯನ್ನು ಎಡತಾಕಿದಾಗ ಅವರು ಟ್ರಾಫಿಕ್ ಪೊಲೀಸಪ್ಪ ಲಕ್ಷ್ಮಣ್ ಎಂಬ ಮನೆಮುರುಕನಿಗೆ ಸಂಧಾನದ ಹೊಣೆ ಒಪ್ಪಿಸಿ ಕೈತೊಳೆದುಕೊಂಡರು. ಆ ಲಕ್ಷ್ಮಣ್ ಕೂಡಾ ವೆಂಕಟೇಶ್‌ನ ದೋಣಿಯ ಪಯಣಿಗನೇ. ಕಾಸೆಂದರೆ ಕನಸಲ್ಲೂ ಬಾಯ್ಬಿಡುವ ಆಸಾಮಿ. ಅವನ ವೀಕ್ನೆಸ್ ಚೆನ್ನಾಗಿ ತಿಳಿದುಕೊಂಡಿದ್ದ ವೆಂಕಟೇಶ್, ಒಂದಷ್ಟು ಹಣ ಬಿಸಾಕಿ ತನ್ನ ಪರ ವಕಾಲತ್ತು ವಹಿಸುವಂತೆ ರೆಡಿ ಮಾಡಿದ್ದ. ಕಾಸಿನ ಋಣಕ್ಕೆ ಬಿದ್ದ ಲಕ್ಷ್ಮಣ ಅಬಲೆಯ ಪರ ನಿಲ್ಲುವ ಬದಲು ಆಕೆಗೇ ಧಮಕಿ ಹಾಕಿ, ನಿನಗೆ ದುಡ್ಡು ಕೊಡಿಸ್ತೀನಿ ತಗೊಂಡು ಡೈವೋರ್ಸ್ ಕೊಟ್ಟುಹೋಗು ಅಂತ ಡೀಲ್‌ಗೆ ಮುಂದಾಗಿದ್ದ. ನೊಂದ ಆಶಾ, ಇವರ ಉಸಾಬರಿಯೇ ಬೇಡ, ತಂದೆ ಮನೆಗೆ ಹೋಗಿಬಿಡೋಣ ಅಂತ ನಿರ್ಧರಿಸಿ ಕ್ವಾಟ್ರರ್ಸ್‌ನ ಮನೆಯಲ್ಲಿದ್ದ ಬಟ್ಟೆ ತೆಗೆದುಕೊಂಡು ಹೋಗಲು ಅಲ್ಲಿಗೆ ಹೋಗಿದ್ದಳು.




ಅಷ್ಟೊತ್ತಿಗಾಗಲೇ ಕುಡಿದು ಚಿತ್ತಾಗಿದ್ದ ವೆಂಕಟೇಶ ಹೆಂಡತಿಯನ್ನು ನೋಡುತ್ತಿದ್ದಂತೆಯೇ ನನ್ನ ವಿರುದ್ಧವೇ ಎಸ್ಪಿಗೆ ಕಂಪ್ಲೆಂಟ್ ಕೊಡ್ತೀಯಾ, ನೀನು ಬದುಕಿರಬಾರದು ಅಂತ ಹೊಡೆದಿದ್ದಲ್ಲದೇ ಟಾಯ್ಲೆಟ್ ಕ್ಲೀನ್ ಮಾಡುವುದಕ್ಕೆಂದು ಇಟ್ಟಿದ್ದ ಆಸಿಡ್ ಅನ್ನು ಬಲವಂತಾಗಿ ಆಕೆಯ ಗಂಟಲೊಳಕ್ಕೆ ಸುರಿದಿದ್ದ. ಆ ವಿಕೃತನ ಕೈಯಿಂದ ಅದೇಗೊ ತಪ್ಪಿಸಿಕೊಂಡು ಹೊರಬಂದು ಪ್ರಜ್ಞೆತಪ್ಪಿದ ಆಶಾಗೆ ಮತ್ತೆ ಪ್ರಜ್ಞೆ ಬಂದಿದ್ದು ಬೆಂಗಳೂರಿನ ಬಿ.ಜಿ.ಎಸ್ ಗ್ಲೋಬಲ್ ಆಸ್ಪತ್ರೆಯಲ್ಲಿ. ಇದಕ್ಕೂ ಮುಂಚೆ ಬಳ್ಳಾರಿಯ ವಿಮ್ಸ್ ಆಸ್ಪತ್ರೆ, ಬೆಂಗಳೂರಿನ ವಿಜಯನಗರ ಆಸ್ಪತ್ರೆಯಲ್ಲೆಲ್ಲಾ ಸುತ್ತಾಡಿ ಸುಮಾರು 10 ಲಕ್ಷಕ್ಕೂ ಮೀರಿ ಖರ್ಚು ಮಾಡಿ ಆಕೆಯನ್ನು ಉಸಿರಾಡುವ ಸ್ಥಿತಿಯಲ್ಲಿ ಉಳಿಸಿಕೊಳ್ಳಲಾಗಿದೆ.

ದೇಹಕ್ಕೆ ಕೊಳವೆ ಹಾಕಿದ್ದಾರೆ. ಅದರ ಮೂಲಕ ಔಷಧಿ ರೂಪದಲ್ಲಿ ಬದುಕಲು ಆಹಾರ ನೀಡಲಾಗುತ್ತಿದೆ. ಇನ್ನೊಂದು ಆಪರೇಷನ್ ಆಗಬೇಕಿದ್ದು ಅದಕ್ಕೂ ಲಕ್ಷಾಂತರ ಹಣ ಬೇಕಾಗಿದೆ. ಆಶಾಳ ತಂದೆ ನರಸಿಂಹಲು ಇದ್ದಬದ್ದ ಹಣ ಖರ್ಚು ಮಾಡಿ, ಸಾಲ ಮಾಡಿ ಈಗ ಕೈಚೆಲ್ಲಿ ಕುಳಿತಿದ್ದಾರೆ. ಈ ಕುರಿತು ದೂರು ನೀಡಿದ್ದರೂ ಕೌಳ್ ಬಜಾರ್ ಪೊಲೀಸರು ವೆಂಕಟೇಶ್ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಆಶಾಳ ತಂದೆ ಕೊಟ್ಟ ದೂರನ್ನು ದಾಖಲಿಸಿಕೊಂಡಿದ್ದಾರೆಯೇ ಹೊರತು ಆಶಾ ಕೊಡಲು ಮುಂದಾಗಿದ್ದ ದೂರನ್ನು ಪೊಲೀಸರು ದಾಖಲಿಸಿಕೊಂಡೇ ಇಲ್ಲ. ಸಾಲದ್ದಕ್ಕೆ ಸ್ಯಾಡಿಸ್ಟ್ ವೆಂಕಟೇಶ್‌ನನ್ನು ತೋರಣಗಲ್ಲು ಟ್ರಾಫಿಕ್ ಪೊಲೀಸ್ ಠಾಣೆಗೆ ವರ್ಗಾವಣೆ ಮಾಡಿ ಬಚಾವು ಮಾಡುವ ಪ್ರಯತ್ನ ಮಾಡಲಾಗುತ್ತಿದೆ. ಇಷ್ಟೆಲ್ಲಾ ಆದರೂ ವೆಂಕಟೇಶ್ ಒಮ್ಮೆಯೂ ಮನೆಕಡೆ ತಿರುಗಿ ನೋಡಿಲ್ಲ. ಹೆಂಡತಿ ಒತ್ತಟ್ಟಿಗಿರಲಿ ಇಬ್ಬರು ಮುದ್ದು ಮಕ್ಕಳನ್ನು ನೋಡುವುದಕ್ಕೂ ಆತ ಬಂದಿಲ್ಲವೆಂದರೆ ಅವನು ಅದಿನ್ನೆಂತಹ ಕಲ್ಲೆದೆಯವನಿರಬೇಡ.

ಸಾರ್ವಜನಿಕರಿಗೆ ರಕ್ಷಣೆ ನೀಡೋದು ನಮ್ಮ ಕರ್ತವ್ಯ ಎನ್ನುವ ಪೊಲೀಸ್ ಇಲಾಖೆಯೊಳಗೇ ಇಂಥಾ ಕ್ರಿಮಿ ಇದ್ದಾಗ್ಯೂ ಹಿರಿಯ ಅಧಿಕಾರಿಗಳು ಕೈಕಟ್ಟಿ ಕೂತಿರೋದು ಇಲಾಖೆಯ ವಿಶ್ವಾಸಾರ್ಹತೆಯನ್ನೇ ಮಣ್ಣುಪಾಲು ಮಾಡುತ್ತಿದೆ. ಈಗಲಾದರು ಪೊಲೀಸ್ ಇಲಾಖೆ ವೆಂಕಟೇಶನಿಗೆ ತಕ್ಕ ಶಾಸ್ತಿ ಮಾಡಿ ಅಮಾಯಕ ಆಶಾಳ ಪರವಾಗಿ ನಿಲ್ಲದಿದ್ದರೆ ಬಳ್ಳಾರಿ ಪೊಲೀಸರ ಮಾನ ಮೂರು ಕಾಸಿಗೆ ಹರಾಜಾಗುವುದರಲ್ಲಿ ಡೌಟೇ ಇಲ್ಲ.

■ ವರದಿಗಾರ



...ಶ್ವನಾಥ್


ಸಾಲಿನಲ್ಲೇ ಸಿಎಂ ಪುತ್ರ ಡಾಕ್ಟರ್ ಯತೀಂದ್ರ, ಎಚ್.ಸಿ. ಮಹದೇವಪ್ಪನ ಮಗ ಬೋಸ್ ಮಿಂಚುತ್ತಿದ್ದುದ್ದು ವಿಪರೀತ ತಳಮಳ ತಂದಿಟ್ಟಿರಲಿಕ್ಕೂ ಸಾಕು.


ಮೊನ್ನೆ ಪತ್ರಿಕಾಗೋಷ್ಠಿ ಕರೆದ ವಿಶ್ವನಾಥ್‌ರು ಅದನ್ನೆಲ್ಲ ಕಾರಿಕೊಂಡಿದ್ದಾರೆ. ಒನ್ಸ್ ಎಗೇನ್ ಸಿದ್ದರಾಮಯ್ಯನೇ ಅವರ ಟಾರ್ಗೆಟ್. "ಸಾಧನಾ ಸಮಾವೇಶದ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಶೇ.25ರಷ್ಟು ಮಾತ್ರ ನಿಜ ಹೇಳಿ, ಶೇ.75ರಷ್ಟು ಸುಳ್ಳು ಹೇಳಿದ್ದಾರೆ. ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಘೋಷಿಸಿದ್ದ 165 ಕಾರ್ಯಕ್ರಮಗಳಲ್ಲಿ 150 ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದಿದ್ದಾರೆ. ಆದರೆ ಆ ಯೋಜನೆಗಳ್ಯಾವುವು? 5 ವರ್ಷದಲ್ಲಿ ರೈತರಿಗೆ ಏನು ಕೊಟ್ಟಿದ್ದೀರಿ? ಭ್ರಷ್ಟಾಚಾರ ವಿರೋಧಿ ಹೋರಾಟ ಮಾಡಿ ನೀವು ಅಧಿಕಾರಕ್ಕೆ ಬಂದರೆ ರಾಜ್ಯದ ಖಜಾನೆಗೆ ಹಣ ವಾಪಸ್ ತರುತ್ತೇನೆ ಅನ್ನೋ ಪ್ರಮುಖ ಭರವಸೆಯ ಗತಿ ಏನಾಯ್ತು..." ಹೀಗೆ ಎಷ್ಟು ಸಾಧ್ಯವೋ ಅಷ್ಟು ಸಿದ್ದರಾಮಯ್ಯನ ಕಾಲು ಎಳೆದ ವಿಶ್ವನಾಥ್ ತಮ್ಮೊಳಗಿನ ತೀಟೆ ಇನ್ನೂ ಸರಿಯಾಗಿಲ್ಲ ಎಂಬುದನ್ನು ಸಾಬೀತು ಮಾಡಿಕೊಂಡಿದ್ದಾರೆ. ವಿಶ್ವನಾಥ್‌ರನ್ನು ಸಮಾರಂಭದಿಂದ ಹೊರಗಿಟ್ಟಿದ್ದನ್ನು ಸಮರ್ಥಿಸಿಕೊಳ್ಳುವುದಕ್ಕೆಂದೇ ಮಂತ್ರಿ ಮಹದೇವಪ್ಪನವರು ಚುನಾವಣೆಯಲ್ಲಿ ಜನರಿಂದ ಆಯ್ಕೆಯಾದವರಿಗೆ ಮಾತ್ರ ಸಮಾವೇಶಕ್ಕೆ ಆಹ್ವಾನ ನೀಡಲಾಗಿದೆ" ಎಂಬ ಸಬೂಬು ಕೊಟ್ಟಿದ್ದರು. ಆದರೆ ಸಿಎಂ ಪುತ್ರ ಯತೀಂದ್ರ ಮತ್ತು ಅವರ ಮಗ ಬೋಸ್ ಇಬ್ಬರೂ ಅಂತಹ ಅರ್ಹತೆಗಳನ್ನು ಹೊಂದಿದವರಲ್ಲ. ಅವರಿಗೆ ಮಣೆಗೆ ಸಿಕ್ಕು ವಿಶ್ವನಾಥ್‌ರಂತಹ ಸ್ಥಳೀಯ ಹಿರಿಯ ನಾಯಕರನ್ನು ಕಡೆಗಣಿಸಿದ್ದು ಅಷ್ಟು ಸಮಂಜಸವ್ವಾ ಅಲ್ಲ. ಹಾಗೊಮ್ಮೆ ಈಗೋ ಕ್ಲಾಶ್‌ಗಳನ್ನು ಹೊರಗಿಟ್ಟು ವಿಶ್ವನಾಥ್‌ರನ್ನು ಸಭೆಗೆ ಆಹ್ವಾನಿಸುವ ಪ್ರಯತ್ನವನ್ನು ಮಾಡಿದ್ದಿದ್ದರೆ ವಿಶ್ವನಾಥ್-ಸಿದ್ದು ನಡುವಿನ ಮುನಿಸಿಗೂ ಮಂಗಳ ಹಾಡಬಹುದಾಗಿತ್ತು. ಆದರೆ ಕಾಂಗ್ರೆಸ್ ಅಂಥಾ ಅವಕಾಶವನ್ನು ಕಳೆದುಕೊಂಡಿದೆ.


ಆದರೆ ಮುತ್ಸದ್ದಿತನದ ರಾಜಕಾರಣಿ ವಿಶ್ವನಾಥ್ ಕೂಡಾ ಈ ವಿಚಾರವನ್ನು ತೀರಾ ಎಳೆದು ತಮ್ಮ ವ್ಯಕ್ತಿತ್ವವನ್ನು ಕುಗ್ಗಿಸಿಕೊಳ್ಳುತ್ತಿದ್ದಾರೇನೊ ಅನ್ನಿಸುತ್ತಿದೆ. ಅದರಲ್ಲೂ ಸಾಧನಾ ಸಮಾವೇಶ ಮಾಡಿದ ಯಾವುದೇ ಸರ್ಕಾರ ವಾಪಸ್ ಅಧಿಕಾರಕ್ಕೆ ಬಂದಿಲ್ಲ ಎಂದು ತಮ್ಮದೇ ಪಕ್ಷದ ಸರ್ಕಾರವನ್ನು ಶಪಿಸುವ ಮೂಲಕ ತಮ್ಮ ಈರ್ಷ್ಯೆಯನ್ನು ತೋರಿಸಿದ್ದು ಅವರ ಘನತೆಗೆ ತಕ್ಕುದಾಗಿರಲಿಲ್ಲ ಎಂಬುದಂತೂ ಸತ್ಯ.

■ ಶರ










ಸಿದ್ದು ಚಾಣಾಕ್ಷ ತಂತ್ರ


ಬೆಂಗಳೂರಿನಿಂದ ಬಂದಿದ್ದ ಸಿದ್ದು ವಿರೋಧಿ ನಾಯಕರೆಲ್ಲರ ಮಾತನ್ನು ಸಮಾಧಾನವಾಗಿ ಕೇಳಿಸಿಕೊಂಡ ಸೋನಿಯಾ ಮೇಡಂ ಮಾರ್ಮಿಕವಾಗೇ ನಕ್ಕು ಹೇಳಿದರಂತೆ "ಆಪ್ ನೆ ಜೋ ಸೋಚ್ ರಹಾ ಹೈ ವೋ ಸಚ್ ನಹೀ ಹೈ. ರಾಷ್ಟ್ರ ಕಾ ಹಿತ ಮೇ ಭೀ ಆಪ್ ಕೋ ಸೋಚನಾ ಚಾಹಿಯೇ. ಕರ್ನಾಟಕ ಮೇ ದೇವೇಗೌಡಾ ಔರ್ ಬಿಜೆಪಿ ಕೆ ಬೀಚ್ ಮೆ ಕಾಫೀ distance ಮೆಂಟೇನ್ ಕರ್ನಾ present situation ಮೆ ಜರೂರಿ ಹೈ....!"


ಇದು ಮೊನ್ನೆಯಷ್ಟೇ ರಾಷ್ಟ್ರ ಕಾಂಗ್ರೆಸ್ ಅಧಿನಾಯಕಿ ಮೇಡಂ ಸೋನಿಯಾ ನಿವಾಸವಾದ ನಂಬರ್ 10 ಜನಪತ್‌ನಲ್ಲಿ ಸದ್ದಿಲ್ಲದೇ ನಡೆದುಹೋದ ಕ್ಷೀಣ ಪ್ರಹಸನ. ಹಾಗೆ ಮುಖ್ಯಮಂತ್ರಿ ಸಿದ್ದು ವಿರುದ್ಧ ಸೋನಿಯಾ ಬಳಿ ದೂರು ತಂದಿದ್ದ ಸೋಕಾಲ್ಡ್ ಕಾಂಗ್ರೆಸ್ ನಾಯಕರ್‍ಯಾರೂ ರಾಜ್ಯ ಮಟ್ಟದ ನಾಯಕರೇನಲ್ಲ, ರಾಜ್ಯ ಕಾಂಗ್ರೆಸ್‌ನ ಎರಡನೆಯದ್ದೋ ಮೂರನೆಯದ್ದೋ ಹಂತದ ಈ ಮರಿನಾಯಕರೆಲ್ಲ ಮೇಲುನೋಟಕ್ಕೆ ಡಿಕೆಶಿಗೆ ರಾಜ್ಯ ಕಾಂಗ್ರೆಸ್ ಸಾರಥ್ಯ ತಪ್ಪಿದ್ದರ ವಿರುದ್ಧ ಸಿಡಿದೆದ್ದು ದೇವೇಗೌಡರನ್ನು ಒಲೈಸಲೆಂದೇ ಸಿದ್ದು ಡೀಕೆಗೆ ಕೆಪಿಸಿಸಿ ಅಧ್ಯಕ್ಷಗಾದಿ ತಪ್ಪಿಸಿದರೆಂದೂ, ಈ ರೀತಿ ಸಿದ್ದು ಜೆಡಿಎಸ್ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ಹೋದರೆ ಮುಂದೊಮ್ಮೆ ರಾಜ್ಯದಲ್ಲಿ ಕಾಂಗ್ರೆಸ್ ಅಸ್ತಿತ್ವಕ್ಕೆ ಅಪಾಯವೆಂದೂ, ಕಾಂಗ್ರೆಸ್ ಮುಖ್ಯಮಂತ್ರಿಯಾಗಿ ಸಿದ್ದು ದೇವೇಗೌಡರ ಕೈಗೊಂಬೆಯಾಗಿದ್ದಾರೆಂದೂ ಮೇಡಂ ಮನೆತನಕ ದೂರು ತಂದವರ್‍ಯಾರೂ ಡೀಕೆ ಬೆಂಬಲಿಗರಾಗಲಿ ಜವಾಬ್ದಾರಿಯುತ ಕಾಂಗ್ರೆಸ್ ನಾಯಕರಾಗಲಿ ಅಲ್ಲವೆಂಬುದು ನೋಡಿದಾಕ್ಷಣವೇ ಅರ್ಥವಾಗುವಂತಿತ್ತು, ಸಿದ್ದು ಸಂಪುಟದ ಲಿಂಗಾಯತ ಮಂತ್ರಿಯೊಬ್ಬರ ಕೃಪಾಪೋಷಿತ ತಂಡವಾಗಿದ್ದ ಇವರ ಉದ್ದೇಶವೇ ಡೀಕೆ ಬೆಂಬಲಿಗರ ಹೆಸರಲ್ಲಿ ಸಿದ್ದು ಮತ್ತು ದೇವೇಗೌಡರನ್ನು ಪರಸ್ಪರ ದೂರವಿರುವಂತೆ ಮಾಡುವ ಬಿಜೆಪಿ ತಂತ್ರ-


ಬಹುತೇಕರ ನಿರೀಕ್ಷೆ ತಲೆಕೆಳಗಾಗುವಂತೆ ಡೀಕೆಗೆ ರಾಜ್ಯ ಕಾಂಗ್ರೆಸ್ ಸಾರಥ್ಯ ತಪ್ಪಿಹೋಗಿದೆ ನಿಜ. ರಾಜ್ಯ ಕಾಂಗ್ರೆಸ್ ಪುನರಚನೆಗಿನ್ನೂ ಯಾವುದೇ ಅವಕಾಶವಿಲ್ಲದಂತೆ ಮತ್ತೆ ಪರಮೇಶ್ವರ್‌ರನ್ನೇ ಮುಂದುವರೆಸುವ ಮೂಲಕ ಅದೇ ರಾಗ ಅದೇ ಹಾಡು ಎಂಬಂಥ ಯಥಾಸ್ಥಿತಿಗೇ ಕೆಪಿಸಿಸಿ ಅಂಟಿಕೊಂಡಂತೆ ಯಾರಿಗಾದರೂ ಅನ್ನಿಸಬಹುದು. ಪರಮೇಶ್ವರ್ ಬದಲು ಡಿಕೆಶಿಯಂಥ ಉತ್ಸಾಹಿ, ಡೈನಾಮಿಕ್, ಜಾತಿಯಿಂದ ಬಲಾಢ್ಯನಾದ ಅಧ್ಯಕ್ಷನಿದ್ದಿದ್ದರೆ ಜೆಡಿಎಸ್ ಓಟ್ ಬ್ಯಾಂಕಿನ ಒಂದಷ್ಟು ಒಕ್ಕಲಿಗರ ಮತಗಳಾದರೂ ಕಾಂಗ್ರೆಸ್ಸಿಗೆ ಬರುತ್ತಿತ್ತು, ಸಹಜವಾಗೇ ಡೀಕೆ ರಾಜ್ಯ ಕಾಂಗ್ರೆಸ್ ಸಾರಥಿಯಾಗಿ ಮುಂದಿನ ಒಕ್ಕಲಿಗ ಮುಖ್ಯಮಂತ್ರಿ ಎಂದು ಬಿಂಬಿಸಲ್ಪಟ್ಟಿದ್ದರೆ ದಕ್ಷಿಣ ಕರ್ನಾಟಕದ ಮಟ್ಟಿಗಾದರೂ ಬಿಜೆಪಿಯ ಲಿಂಗಾಯತ ನಾಯಕತ್ವದ ವಿರುದ್ಧ ಒಕ್ಕಲಿಗರು ಒಟ್ಟಾಗಿ ಡೀಕೆಯ ಬೆನ್ನಿಗೆ ನಿಲ್ಲುವ ಸಾಧ್ಯತೆಯಿತ್ತು.

ಡೀಕೆಗೆ ಕಾಂಗ್ರೆಸ್ ಸಾರಥ್ಯ ತಪ್ಪಿಸುವ ಮೂಲಕ ಸಿದ್ದು ತನ್ನ ಹಳೇಗುರು ದೇವೇಗೌಡರನ್ನು ಓಲೈಸಿದ್ದು ಸಹಜವಾಗೇ ಕಾಂಗ್ರೆಸ್ ಪಾಲಿಗೆ ಅಪಾಯಕಾರಿಯೆಂದು ಅನೇಕರಿಗನಿಸಿದ್ದುಂಟು. ಮೊದಮೊದಲು ಎಲ್ಲರೂ ಇದನ್ನೇ ಲೆಕ್ಕ ಹಾಕಿದ್ದರು. ಅದರಲ್ಲೂ ನಂಜನಗೂಡು ಮತ್ತು ಗುಂಡ್ಲುಪೇಟೆ ಉಪಚುನಾವಣೆಯ ನಂತರ ತನ್ನ ಗೃಹಕಚೇರಿಯಲ್ಲೇ ಪತ್ರಿಕಾಗೋಷ್ಠಿ ಕರೆದು ಕಾಂಗ್ರೆಸ್ ಗೆಲುವಿಗಾಗಿ ದೇವೇಗೌಡರು ಮತ್ತು ಕುಮಾರಸ್ವಾಮಿಗೆ ಸಿದ್ದು ವಿಶೇಷವಾಗಿ ಧನ್ಯವಾದ ಸಮರ್ಪಿಸಿದಾಗ ಇಂಥದೊಂದು ಅನುಮಾನ ಕಾಡಿದ್ದುಂಟು. ಆದರೆ ಪ್ರತಿಯೊಬ್ಬರೂ ಲೆಕ್ಕ ಹಾಕಿದ್ದು ಡೀಕೆಯನ್ನು ರಾಜ್ಯ ಕಾಂಗ್ರೆಸ್ ಸಾರಥ್ಯಕ್ಕೆ ತರುವ ಮೂಲಕ ಸಿದ್ದು ಜೆಡಿಎಸ್‌ನ ಭದ್ರಕೋಟೆಗೆ ಲಗ್ಗೆ ಹಾಕುತ್ತಾರೆಂದೇ.













ಇದು ಹುಸಿಯಾಗಿದ್ದು ಪರಮೇಶ್ವರ್ ಮತ್ತೆ ಮುಂದುವರಿಯುವ ಮೂಲಕ. ಪರಮೇಶ್ವರ್ ಕಾಂಗ್ರೆಸ್ ಸಾರಥ್ಯ ವಹಿಸಿದ ಮಾತ್ರಕ್ಕೇ ದಲಿತರೆಲ್ಲ ಮುಗಿಬಿದ್ದು ಕಾಂಗ್ರೆಸ್‌ಗೆ ಓಟು ಹಾಕುತ್ತಾರೆಂದಾಗಲಿ, ಅವರಿಲ್ಲವೆಂದು ರಾಜ್ಯದ ದಲಿತ ಸಮೂಹ ಕಾಂಗ್ರೆಸ್ ವಿರುದ್ಧ ತಿರುಗಿ ಬೀಳುತ್ತಾರೆಂದಾಗಲಿ ಯಾರೊಬ್ಬರೂ ನಂಬಿ ಕೂತಿಲ್ಲ, ಅಂಥಾದ್ದರಲ್ಲಿ ಮತ್ತೆ ಪರಮೇಶ್ವರ್‌ರನ್ನು ಮುಂದುವರೆಸಿ ಡೀಕೆಯಂಥ ದೈತ್ಯನನ್ನು ಅದುಮುವುದೆಂದರೆ ಹಕೀಕತ್ತೇ ಬೇರೆಯಿರಬೇಕೆಂದು ಅದು ದೇವೇಗೌಡರ ರಣತಂತ್ರವೆಂದೇ ರಾಜಕೀಯ ವಿಶ್ಲೇಷಕರೆಲ್ಲ ಹೇಳಿದ್ದೇ ಹೇಳಿದ್ದು.











ಬಹುಶಃ ರಾಜ್ಯ ಕಾಂಗ್ರೆಸ್ ಅಧ್ಯಕ್ಷಗಾದಿಯೆಂಬ ಕಲ್ಲಿನಲ್ಲಿ ಸಿದ್ದು ಕೆಡವಿದ ಐದಾರು ಹಕ್ಕಿಗಳ ಲೆಕ್ಕ ಬಿಜೆಪಿಗಲ್ಲದೆ ಬೇರೆ ಯಾರಿಗೂ ಅರ್ಥವಾಗಲಿಲ್ಲ, ಕಾಂಗ್ರೆಸ್ ಸಾರಥ್ಯವನ್ನು ತಪ್ಪಿಸುವ ಮೂಲಕ ಸಿದ್ದು ಮಾತ್ರವೇ ಅಲ್ಲ ಮೇಡಂ ಸೋನಿಯಾ ಬ... ಬಲವಾದ ಏಟನ್ನೇ ಹಾಕಿದ್ದರು. ಮುಂಬ... ಚುನಾವಣೆಯನ್ನು ಲೆಕ್ಕ ಹಾಕಿಯೇ ಯಡ್ಡಿ... ಮುಖ್ಯಮಂತ್ರಿ ಅಭ್ಯರ್ಥಿಯೆಂದು ಘೋಷಿಸಿದ್ದ ಬ... ಡೀಕೆಯಲ್ಲದೆ ರಾಜ್ಯ ಕಾಂಗ್ರೆಸ್ಸಿಗೆ ಮತ್ತೊಬ್ಬನಿಲ್ಲ ಎಂ... ನಿಕ್ಕಿಯಾಗಿತ್ತು, ಹೇಗೂ ಪರಮೇಶ್ವರ್‌ರನ್ನು ಅನಿವಾ... ಬದಲಿಸಲೇಬೇಕು. ಆಗ ದಲಿತರನ್ನು ಸಲೀಸಾಗಿ ಕಾ... ವಿರುದ್ಧ ಎತ್ತಿ ಕಟ್ಟಬಹುದು. ಅದಕ್ಕೆ ಪೂರಕವಾಗಿ ದ... ಮನೆಯೂಟದ ಕಾರ್ಯಕ್ರಮವನ್ನೂ ಬಿಜೆಪಿ ರೂಪಿಸಿಕೊ...

ಡೀಕೆ ಕೆಪಿಸಿಸಿಗೆ ಸಾರಥಿಯಾದರೆಂದರೆ ಸಹಜ... ಒಕ್ಕಲಿಗರ ಓಟು ಒಡೆಯುತ್ತದೆ. ಜೆಡಿಎಸ್ ಪಾಲಿನ ... ಅಥವಾ ಮೂರು ಪರ್ಸೆಂಟ್ ಮತಗಳು ಡೀಕೆಯ ಕಾ... ಕಾಂಗ್ರೆಸ್ ಬುಟ್ಟಿಗೆ ಬಿತ್ತೆಂದರೆ ಅದರ ಲಾಭವೇನಿ... ಬಿಜೆಪಿಗೇ. ಇದರ ಲಾಭ ಪಡೆದು 2018ರಲ್ಲಿ... ಮಿಷನ್ -150ಯನ್ನು ಸಾಕಾರಗೊಳಿಸುವ ರಣ... ರೂಪಿಸಿಯೇ ಯಡ್ಡಿ ದಲಿತರ ಮನೆ ಊಟದ ... ನಾಟಕ ಶುರುವಿಟ್ಟದ್ದು. ಹಾಗೊಮ್ಮೆ ಡೀಕೆಗೆ ಕೆಪಿಸಿ... ಪಟ್ಟ ಕಟ್ಟಿಬಿಟ್ಟದ್ದೇ ಆದರೆ ತಮ್ಮನ್ನು ಹಣಿಯ... ಸಿದ್ದು ಡೀಕೆಯನ್ನು ಛೂ ಬಿಟ್ಟದ್ದಾರೆಂದು ದೇವೇಗ... ಸಿಟ್ಟಿಗೇಳುತ್ತಾರೆ. ಇದು once again ಜೆಡಿಎಸ್ ... ದೇವೇಗೌಡರನ್ನು ಬಿಜೆಪಿಯತ್ತ ವಾಲಿಸುತ್ತದೆ. ಚುನಾವ... ನಂತರವಾದರೂ ಸೈ ಅದಕ್ಕೂ ಮೊದಲಾದರೂ ... ಜೆಡಿಎಸ್ ಮತ್ತು ಬಿಜೆಪಿ ಮಾನಸಿಕವಾಗಿ ಹತ್ತಿರ... ಕಾಂಗ್ರೆಸ್ ಮುಕ್ತ ಮಂತ್ರಕ್ಕೆ ಮಾವಿನಕಾಯಿ ಉದ... ಹಾಗೆಯೇ....


ಇಂಥದೊಂದು ಲೆಕ್ಕ ಹಾಕಿಯೇ ಬಿಜೆಪಿ ... ವಿರುದ್ಧದ ಡೀನೋಟಿಫಿಕೇಷನ್, ಗಣಿಗಾರಿಕೆ ... ಆದಾಯ ತೆರಿಗೆ ಸಂಬಂಧಿ ಹತ್ತಕ್ಕೂ ಅಧಿಕ ಪ್ರಕರಣಗ... ಪಟ್ಟಿ ಮಾಡಿಟ್ಟುಕೊಂಡಿತ್ತು, ಡೀಕೆ ಕೆಪಿಸಿಸಿಗೆ ಅಧ್ಯಕ್ಷರಾಗ... ಹಾಗೆಯೇ ಜಾರಿ ದಳವನ್ನು ಛೂಬಿಟ್ಟು ಕನಕಪ... ಕ್ವಾರಿಗಳ ಮೇಲೆ, ಬೆಂಗಳೂರಿನ ಸದಾಶಿವ ನಗರದ ... ಅಡ್ಡೆಗಳ ಮೇಲೆ ರೇಡು ಹಾಕಲು ಕತ್ತಿ ಮಸೆಯು... ಇತ್ತು, ಇದ್ಯಾವುದರ ಪರಿವೆಯೇ ಇಲ್ಲದೆ ತನ್ನನ್ನೇ ... ಕಾಂಗ್ರೆಸ್ ಸಾರಥಿಯಾಗಿಸಬೇಕೆಂದು ಇನ್ನಿಲ್ಲ... ಹೈಕಮಾಂಡ್ ಮೇಲೆ ಒತ್ತಡ ಹಾಕುತ್ತಿದ್ದ ಡೀಕೆ ತಾನ... ಕಾಂಗ್ರೆಸ್ಸಿಗೆ ಬೇರೆ ಗತಿಯೇ ಇಲ್ಲವೆಂಬಂತೆ ಮೆರೆ... ಮೆರೆದದ್ದು, ಇದರ ವಾಸನೆ ಹಿಡಿದ ಕೇಂದ್ರ ಹಣ... ಖಾತೆಯ ಹಿರಿಯ ಅಧಿಕಾರಿಯೊಬ್ಬರು ಮೇ ಮೊ... ವಾರದ ಹೊತ್ತಿಗೆ ರಹಸ್ಯ ಮಾಹಿತಿಯೊಂದನ್ನು ಮೆ... ಸೋನಿಯಾಗೆ ರವಾನಿಸಿದ್ದರು. ಅದು ಡೀಕೆ ವಿರು... ಹತ್ತಕ್ಕೂ ಅಧಿಕ ಪ್ರಕರಣಗಳಿಗೆ ಸಂಬಂಧಪಟ್ಟ ... ದಾಖಲೆಗಳನ್ನೂ ಜಾರಿ ನಿರ್ದೇಶನಾಲಯ ... ಹಾಕಿದೆಯೆಂದೂ ರಾಜ್ಯ ಕಾಂಗ್ರೆಸ್ ಅಧ್ಯಕ್ಷಗಾದಿಗೆ ಡೀಕೆಯ... ತಂದ ಮೂರೇ ತಿಂಗಳಲ್ಲಿ ಡೀಕೆ ಬ್ರದರ್ಸ್ ಆದ... ಮೇಲೆ ಐಟಿ ರೇಡ್ ಶತಸ್ಸಿದ್ಧವೆಂದೂ ಆ ಮೂ... ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್‌ನ ಮಾನ ಕಳೆದು ಡೀಕೆಯ... ಜೈಲಿಗಟ್ಟಲು ಬಿಜೆಪಿ ಹೆಣೆದ ಬಲೆಯ ಪಕ್ಕಾ ಮಾಹಿ...

ಇದು ಸೋನಿಯಾ ಮೇಡಂಗಷ್ಟೇ ಅಲ್ಲ, ರಾಹು... ಗಾಂಧಿಯ ಕಿವಿಗೂ ಮುಟ್ಟಿ ಆ ಮೂಲಕ ರಾಜ್ಯ ಕಾಂ... ಉಸ್ತುವಾರಿ ವೇಣುಗೋಪಾಲ್‌ಗೂ ಗೊತ್ತಾಗಿತ್ತು. ಆ... ಬಿಜೆಪಿಯ ಷಡ್ಯಂತ್ರವನ್ನೇ ಬುಡಮೇಲು ಮಾಡು... ಪ್ರತಿತಂತ್ರಕ್ಕೆ ಕಾರಣವಾಯಿತು. ಇಂಥಾದ್ದೊಂದು ಪ್ರತಿತಂ... ಕಾರಣವಾಗಿದ್ದು ಮುಖ್ಯಮಂತ್ರಿ ಸಿದ್ದುವೇ-

ಅದು ಒಂದೇ ಕಲ್ಲಿನಲ್ಲಿ ಹಲವು ಕಾಯಿಗಳುದುರಿಸ... ತಂತ್ರ. ಡೀಕೆಯನ್ನು ರಾಜ್ಯ ಕಾಂಗ್ರೆಸ್ ಸಾರಥಿ ಪ... ಕೈಬಿಟ್ಟ ಹಾಗೆಯೂ ಇರಬೇಕು ಮತ್ತು ಅದಕ್ಕೆ ... ಸಮಾನಾದ ಪರ್ಯಾಯ ಪೀಠವೊಂದನ್ನು ಕಲ್ಪಿಸುವ ಮೂ... ಡೀಕೆಯನ್ನು ಸಂತೈಸಿದಂತೆಯೂ ಕಾಣಬೇಕು. ಮೇ... ನೋಟಕ್ಕೆ ಡೀಕೆಗೆ ರಾಜ್ಯ ಕಾಂಗ್ರೆಸ್ ಪಟ್ಟ ತಪ್ಪಿಸಿದ... ಮಾಡಿ ತನ್ಮೂಲಕ ದೇವೇಗೌಡರಿಗೆ ಗಾಳ ಹಾಕುವು... ಆ ಮೂಲಕ ದೇವೇಗೌಡರು ಬಿಜೆಪಿಯತ್ತ ವಾಲದ ಹ... ಮಾಡುವುದು ಒಂದಾದರೆ, ಮತ್ತೊಂದೆಡೆ ಪರಮೇಶ್ವರ್... ಮುಂದುವರಿಯುವ ಮೂಲಕ 'ದಲಿತ ಸಿಎಂ' ಸಾಧ್ಯತೆಯ...


▶▶ 0

ಪರ್ಜನ್ಯ ಹಳ್ಳಕ್ಕೆ ತಾವೇ ಬಿದ್ದ ಚೆಡ್ಡಿಗಳು


ಪರ್ಜನ್ಯ ಯಜ್ಞದಲ್ಲಿ ... ಎಂ.ಬಿ. ಪಾಟೀಲ್

ಬಿಟ್ಟವನ ಮೇಲೆಯೇ ಬಾಣವನ್ನು ತಿರುಗಿಸುವ ಕಾಂಗ್ರೆಸ್‌ನ ಪರ್ಜನ್ಯ ತಂತ್ರಕ್ಕೆ ಬಿಜೆಪಿಗೆ ಬಿಜೆಪಿಯೇ ಬೆಪ್ಪುತಕ್ಕಡಿಯಾದ ಪ್ರಹಸನವಿದು. ಇನ್ನೊಂದರ್ಥದಲ್ಲಿ ಹಿಂದೂ ಓಟ್‌ಬ್ಯಾಂಕ್ ತಂತ್ರದ ಬುಡಕ್ಕೇ ಕೊಳ್ಳಿಯಿಡುವ ತಂತ್ರ ಕೂಡ!


ಕಾಂಗ್ರೆಸ್ಸೆಂದರೆ ಮುಸ್ಲಿಮರು, ದಲಿತರ ಪರ, ಹಿಂದೂಗಳಿಗದು ಯಾವತ್ತಿದ್ದರೂ ಮಲತಾಯಿಯೇ ಎಂಬಂತೆ ಬಿಜೆಪಿ ಟಿಪ್ಪು ಜಯಂತಿ, ಲವ್‌ಜಿಹಾದ್, ಗೋಹತ್ಯೆ, ಪಾಕಿಸ್ತಾನದ ಬೊಬ್ಬೆ ಹಾಕುತ್ತಲೇ ಬಂತು. ಮುಸ್ಲಿಂ ದ್ವೇಷವನ್ನು ಬಿತ್ತಿಬಿಟ್ಟರೆ ಸಾಕು ಸುಲಭವಾಗಿ ಅಧಿಕಾರ ಹಿಡಿಯಬಹುದೆಂಬ ಬಿಜೆಪಿಯ ಫ್ಯಾಸಿಸ್ಟ್ ತಂತ್ರಕ್ಕೆ ಎದುರೇಟು ಕೊಟ್ಟದ್ದು ನೀರಾವರಿ ಮಂತ್ರಿ ಎಂ.ಬಿ. ಪಾಟೀಲರ ಪರ್ಜನ್ಯ ಯಜ್ಞ. ಅತ್ತ ಕೃಷ್ಣಾ ಜಲಾಶಯದಲ್ಲೊಂದು ಕಾವೇರಿ ಕಣಿವೆಯಲ್ಲಿ ಮತ್ತೊಂದು ಪರ್ಜನ್ಯ ಯಜ್ಞವನ್ನು ರೂಪಿಸಿದ ಪಾಟೀಲರು, ಅದಕ್ಕೆಂದು ಕೇರಳದ ಪುರೋಹಿತರನ್ನು ಕರೆತಂದು ವ್ಯವಸ್ಥಿತವಾಗಿ ಅದು ಸುದ್ದಿಯಾಗುವಂತೆ ನೋಡಿಕೊಂಡರು. ಹಿಂದೂತ್ವದ ವಕ್ತಾರಿಕೆಯೇ ತನ್ನ ಗುತ್ತಿಗೆಯೆಂಬಂತೆ ಧರ್ಮಾಧಾರಿತ ರಣತಂತ್ರ ರೂಪಿಸಿಕೊಂಡೇ ಬಂದಿದ್ದ ಬಿಜೆಪಿಗಿದು ನುಂಗಲಾರದ ತುತ್ತು, ಹಿಂದೂ ಧರ್ಮ, ಹಿಂದೂ ದೇವತೆಗಳನ್ನು ನಂಬದ ಕಾರಣಕ್ಕೇ ಕಾಂಗ್ರೆಸ್‌ನಿಂದಾಗಿ ರಾಜ್ಯದಲ್ಲಿ ಬರಗಾಲ ಬಂದಿದೆ ಎಂದು ತಳಮಟ್ಟದಲ್ಲಿ ಬಿಜೆಪಿ ಹುಯಿಲೆಬ್ಬಿಸುತ್ತಲೇ ಇತ್ತಲ್ಲ.




ಮಳೆಗಾಗಿ ಪಕ್ಕಾ ವೈದಿಕಶೈಲಿಯಲ್ಲಿ ಪರ್ಜನ್ಯ ಯಜ್ಞಕ್ಕೆ ಮುಂದಾದ ಎಂ.ಬಿ. ಪಾಟೀಲರು ಮೊದಮೊದಲು ಅದನ್ನೊಂದು ಸರ್ಕಾರಿ ಕಾರ್ಯಕ್ರಮವೆಂಬಂತೆ ಬಿಂಬಿಸಿದ್ದರು. ಪರೋಕ್ಷವಾಗಿದು ಬಿಜೆಪಿಯ ಹಿಂದೂ ಕೋಟೆಗೆ ಲಗ್ಗೆಯಿಡುವ ಕಾಂಗ್ರೆಸ್ ತಂತ್ರವೆಂಬುದು ಚೆಡ್ಡಿಗಳಿಗೆ ಗೊತ್ತಾಗಲು ಎಷ್ಟು ಹೊತ್ತು? ಅದಕ್ಕೆ ತಕ್ಕಂತೆ ಬುದ್ಧಿಜೀವಿಗಳೂ ಸರ್ಕಾರದ ಮೌಢ್ಯವನ್ನು ಟೀಕಿಸಲಾರಂಭಿಸುತ್ತಿದ್ದಂತೆ ಕೆಲ ಚೆಡ್ಡಿ ಪತ್ರಕರ್ತರೂ ಕಾಂಗ್ರೆಸ್ ಮೌಢ್ಯವೆಂದು ಹುಯಿಲೆಬ್ಬಿಸತೊಡಗಿದರು. ಕಾಂಗ್ರೆಸ್ಸಿಗೂ ಇದೇ ಬೇಕಿತ್ತು. ಮುಖ್ಯಮಂತ್ರಿ ಸಿದ್ದು ಬಳಿ ಮೊದಲೇ ಬಾಣ ಸಿದ್ಧವಾಗಿತ್ತಲ್ಲ, ಅದು ಸರ್ಕಾರದ ಅಧಿಕೃತ ಕಾರ್ಯಕ್ರಮವಲ್ಲ ಸಚಿವ ಪಾಟೀಲರು ತಮ್ಮ ಸ್ವಂತ ಖರ್ಚಿನಲ್ಲಿ ಮಾಡಿದ ಯಜ್ಞವದು ಎಂದು ಮತ್ತೊಂದು ಬಾಣ ಬಿಟ್ಟರು. ಅದು ನೇರವಾಗಿ ಬಿಜೆಪಿಯ ಎದೆಗೇ ನಾಟಿದಂತೆ ಅಧಿವೇಶನದ ಮೊದಲ ದಿನವೇ ವಿರೋಧಿ ನಾಯಕ ಜಗದೀಶ್ ಶೆಟ್ಟರ್ "ಪಾಟೀಲರು ತನ್ನ ಸ್ವಂತ ಖರ್ಚಿನಲ್ಲಿ ಇಂಥಾದ್ದೊಂದು ಮೌಢ್ಯಾಚರಣೆ ಮಾಡಿದ್ದಾದರೆ ಅಂತವರನ್ನು ಸಂಪುಟದಲ್ಲಿ ಏಕಿಟ್ಟುಕೊಂಡಿದ್ದೀರಿ? ವಜಾ ಮಾಡಿ..." ಎಂದು ಬೊಬ್ಬೆಯಿಟ್ಟರು.

ಸಿದ್ದುವಿಗೂ ಇದೇ ಬೇಕಿತ್ತೇನೊ. ಡಿ.ಕೆ. ಶಿವಕುಮಾರ್ ಥರದವರು ಕೂಡ ಮಳೆಗಾಗಿ ದೇವರನ್ನು ಪೂಜಿಸುವುದರಲ್ಲಿ ತಪ್ಪೇನಿದೆ? ಎಂದು ಪ್ರಶ್ನಿಸಿದ್ದು ಒಂದೆಡೆಯಾದರೆ ಮತ್ತೊಂದೆಡೆ ಬಿಜೆಪಿಯ ಸಿ.ಟಿ. ರವಿಯಂಥ ಮರಿ ಮುತಾಲಿಕರೇ "ನಾವಿದನ್ನು ಬೆಂಬಲಿಸುತ್ತೇನೆ" ಎಂದು ಬಿಟ್ಟರು. ಅಲ್ಲಿಗೆ ಪರ್ಜನ್ಯ ಯಜ್ಞವೆಂದು ಕಾಂಗ್ರೆಸ್ ತೋಡಿದ ಹಳ್ಳಕ್ಕೆ ಬಿದ್ದು ಬಿಜೆಪಿಯೇ ಹೇಬಾಡುವಂತಾಯಿತು. ಬಿಜೆಪಿ ತೋಡಿದ ಹಿಂದೂತ್ವದ ಹಳ್ಳಕ್ಕೆ ಅದೇ ಬೀಳುವಂತೆ ಮಾಡಿದ ಸಿದ್ದು ತಲೆಗಾರಿಕೆ ಪರ್ಜನ್ಯಯಜ್ಞದ ಮೂಲಕ ಫಲ ಕಂಡಿತ್ತು, ತಮ್ಮ ಬಾಣವನ್ನು ತಮ್ಮ ವಿರುದ್ಧವೇ ತಿರುಗಿಸಿದ ಸಿದ್ದು ತಂತ್ರಕ್ಕೀಗ ಬಿಜೆಪಿಗಳು ಹಣೆ ಚಚ್ಚಿಕೊಳ್ಳುವುದೊಂದೇ ಬಾಕಿ!

ಕೊಡಗು: ಜಿಲ್ಲಾ ಕಾಂಗ್ರೆಸ್‌ಗೆ ಬೇಕಿದೆ ಹೊಸ ಮುಖಗಳು









ಎಐಸಿಸಿಯು ಕರ್ನಾಟಕದ ವೀಕ್ಷಕರಾಗಿ ವೇಣುಗೋಪಾಲ್ ನೇಮಕಾತಿಯು ನಂತರ ...ಟಕದಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಒಂದು ಸಂಚಲನ ...ಡಿದೆ. ಹಿಂದೆ ಇದ್ದಂತಹ ದಿಗ್ವಿಜಯ ಸಿಂಗ್ ...ರ್ಯಕರ್ತರ ಹಾಗೂ ನಾಯಕರುಗಳ ಅಹವಾಲುಗಳನ್ನು ...ಳುತ್ತಲೇ ಇರಲಿಲ್ಲ, ಕನಿಷ್ಠ ಕೆಪಿಸಿಸಿ ಕಚೇರಿಗೂ ...ತ್ತಿರಲಿಲ್ಲ ಎಂಬ ಆರೋಪ ಇತ್ತು. ವೇಣುಗೋಪಾಲ್ ...ರಾಜ್ಯದ ಮೂಲದವರಾಗಿದ್ದು, ಅವರಿಗೆ ರಾಜಕೀಯ ...ದು ರಕ್ತದಲ್ಲಿಯೇ ಬಂದಿರುವಂತಹ ಗುಣಗಳು ...ು ಹೇಳಬಹುದು. ರಾಜ್ಯದಲ್ಲಿ ಈಗ ಮೂರನೇ ...ಪ್ರವಾಸ ಮಾಡಿಕೊಂಡು ಸಾಕಷ್ಟು ಬದಲಾವಣೆಗಳನ್ನು ...ು ಮಾಡಿದ್ದಾರೆ.

ಅವರ ಈ ಬದಲಾವಣೆಗಳು ಕಾಂಗ್ರೆಸ್ ಪಕ್ಷವನ್ನು ...ಅಧಿಕಾರಕ್ಕೆ ತರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ...ೂ ಪಕ್ಷದ ಕಾರ್ಯಕರ್ತರಲ್ಲಿ ಹುರುಪು ಮೂಡಿದೆ. ...ಗು ಜಿಲ್ಲಾ ಕಾಂಗ್ರೆಸ್ ಸಮಿತಿ ಇದರಿಂದ ಹೊರತಾಗಿಲ್ಲ. ...ು ಮಾಜಿ ಶಾಸಕರೊಬ್ಬರ ಪ್ರಕಾರ ಅವರಿಗೆ ದಿಗ್ವಜಯ ...ಭೇಟಿ ಮಾಡಲು ಸಾಧ್ಯವೇ ಆಗಿರಲಿಲ್ಲವಂತೆ. ...ರೆ ಕೆಲವೇ ದಿನಗಳಲ್ಲಿ ಎರಡು ಬಾರಿ ...ುಗೋಪಾಲ್‌ರವರನ್ನು ಭೇಟಿಯಾಗಿ ಚರ್ಚಿಸಿದ್ದೇನೆ. ...ಾಯಗಳನ್ನು ತಿಳಿಸಿದ್ದೇನೆ. ಅವರು ಸ್ಪಂದಿಸುವ ಭರವಸೆ ... ಎಂದು ಹೇಳುತ್ತಾರೆ.

...ೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ವಿಚಿತ್ರವಾದ ...ತಿ ಇದೆ. ಇಲ್ಲಿಗೆ ಒಬ್ಬ ಕಾಯಂ ಅಧ್ಯಕ್ಷ ಸುಮಾರು ... ವರ್ಷಗಳಿಂದ ನೇಮಕವಾಗಿಲ್ಲ, ಹಿಂದೆ ಅಧ್ಯಕ್ಷರಾಗಿದ್ದ ....ಟಿ. ಪ್ರದೀಪ್‌ರವರು ಟಿಪ್ಪು ಜಯಂತಿಯಲ್ಲಿ ನಿರ್ಲಕ್ಷ್ಯ ...ದರಿಂದ ಅವರು ಪದಚ್ಯುತಗೊಂಡಾಗ ಅವರೇ ...ರವನ್ನು ಟಿ.ಪಿ.ರಮೇಶ್‌ರವರಿಗೆ ಹಸ್ತಾಂತರಿಸಿದ್ದರು. ...ಂದು ವಿಚಿತ್ರವಾದ ಬೆಳವಣಿಗೆಯಾಗಿತ್ತು. ...ನ್ಯವಾಗಿ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ...ವಾಗಿರುತ್ತಾರೆ. ಆದರೆ ಇಲ್ಲಿ ಕೆಪಿಸಿಸಿಯ ಸದಸ್ಯರಾದ ...ರಮೇಶ್‌ರವರಿಗೆ ಅಧಿಕಾರವನ್ನು ಹಸ್ತಾಂತರಿಸಲಾಗಿತ್ತು. ... ಇಂದಿಗೂ ಮುಂದುವರಿದುಕೊಂಡು ಬಂದಿದೆ. ...ಂ ಅಧ್ಯಕ್ಷರ ನೇಮಕಾತಿ ಕೆಪಿಸಿಸಿ ಅಧ್ಯಕ್ಷರ ...ಕಾತಿಗಿಂತಲೂ ಕಗ್ಗಂಟಾಗಿ ಉಳಿದಿದೆ.

...ದಕ್ಕೆ ಪ್ರಮುಖವಾದ ಕಾರಣ ಕಾಂಗ್ರೆಸಿನ ಮತದಾರ ... ಕೈಯಲ್ಲಿ ಅಧಿಕಾರ ಇಲ್ಲದಿರುವುದಾಗಿದೆ. ಕೊಡಗಿನ ... ಪ್ರಮುಖ ಜನಾಂಗವಾದ ಕೊಡವ ಮತ್ತು ಗೌಡ ...ಗದವರು ಪರಂಪರಾಗತವಾಗಿ ಬಿಜೆಪಿಯ ...ರರಾಗಿದ್ದಾರೆ. ಆದರೆ ಕಾಂಗ್ರೆಸಿನ ಅಧಿಕಾರ ಈ ... ಕೈಯಲ್ಲಿಯೇ ಇದೆ. ಕಾಂಗ್ರೆಸಿನ ಮತದಾರರು ...ೂಳ್ಳುವ ಅಲ್ಪಸಂಖ್ಯಾತ ವರ್ಗಕ್ಕಾಗಲಿ, ದಲಿತ ...ಗಲಿ ಯಾವುದೇ ಅಧಿಕಾರಗಳು ಸಿಗುವುದೇ ಇಲ್ಲ. ...ಈಗ ಕೊಡಗು ಕಾಂಗ್ರೆಸಿನಲ್ಲಿ ಚರ್ಚಿತ ವಿಚಾರವಾಗಿ ...ಕೊಂಡಿದೆ. ಇಲ್ಲಿಯವರೆಗೆ ಬಹಿರಂಗವಾಗಿ ಇತರೇ ...ಗಗಳು ಬೇಡಿಕೆಯನ್ನು ಇಡುತ್ತಿರಲಿಲ್ಲ. ಈಗ ...ಸಭೆಗೆ ಟಿಕೆಟನ್ನು ಅಲ್ಪಸಂಖ್ಯಾತರಿಗೆ ನೀಡಬೇಕು ... ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ನೀಡಬೇಕು ...ಬೇಡಿಕೆಯನ್ನು ಇಟ್ಟಿದ್ದಾರೆ.

...ಡಗು ಜಿಲ್ಲೆಗೆ ಕಾಂಗ್ರೆಸಿನ ವೀಕ್ಷಕರಾಗಿ ಆಗಮಿಸಿದ್ದ ...ಯ ಕಾರ್ಯದರ್ಶಿ ವಿಶ್ವನಾಥನ್‌ರವರ ಬಳಿ ... ಕಾರ್ಯಕರ್ತರು ಈ ವಿಚಾರವನ್ನು ಮಂಡಿಸಿದ್ದಾರೆ. ...ನಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ...ಲ್ಲದಿದ್ದರೂ, ಪ್ರಮುಖ ಜನಾಂಗವಾದ ಕೊಡವ ಹಾಗೂ ಗೌಡ ಜನಾಂಗಕ್ಕೆ ಮತ್ತು ಸ್ಥಳೀಯ ಸಂಸ್ಥೆಗಳ ವಿಧಾನ ಪರಿಷತ್ ಸ್ಥಾನಕ್ಕೆ ಲಿಂಗಾಯತ ಸಮುದಾಯದವರಿಗೆ ಅವಕಾಶವನ್ನು ನೀಡಲಾಗಿತ್ತು. ಹಾಗಾಗಿ ಮತ್ತೆ ವಿಧಾನಸಭೆಯಿಂದ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಅವಕಾಶ ಸಿಗದೇ ಇದ್ದಂತಹ ಜನಾಂಗಕ್ಕೆ ಅವಕಾಶವನ್ನು ನೀಡಬೇಕಾಗಿತ್ತು, ಆದರೆ ಕೊಡವ ಜನಾಂಗದ ವೀಣಾ ಅಚ್ಚಯ್ಯನವರಿಗೆ ಅವಕಾಶ ನೀಡುವ ಮೂಲಕ ಕಾಂಗ್ರೆಸ್ ಪಕ್ಷ ಇತರ ಜನಾಂಗಕ್ಕೆ ಅನ್ಯಾಯವನ್ನು ಮಾಡಿದೆ ಎಂದು ಪುಕಾರು ನೀಡಿದ್ದಾರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನಾದರೂ ಇತರರಿಗೆ ನೀಡಬೇಕು ಎಂಬ ಬೇಡಿಕೆಯನ್ನು ಇಟ್ಟಿದ್ದಾರೆ.

ಅಲ್ಪಸಂಖ್ಯಾತರ ಸಮಾವೇಶವೊಂದನ್ನು ಕುಶಾಲನಗರದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ನಡೆಸಿದಾಗ, ಚುನಾಯಿತ ಅಲ್ಪಸಂಖ್ಯಾತ ವರ್ಗದ ಯಾವುದೇ ವ್ಯಕ್ತಿ ವೇದಿಕೆಯಲ್ಲಾಗಲಿ ಅಥವ ಕಾರ್ಯಕ್ರಮದಲ್ಲಾಗಲಿ ಕಂಡುಬರಲಿಲ್ಲ, ತಮ್ಮನ್ನು ಯಾರೂ ಪಕ್ಷದಲ್ಲಿ ಗುರುತಿಸುತ್ತಿಲ್ಲ ಮತ್ತು ತಮ್ಮ ಅಹವಾಲನ್ನು ಆಲಿಸುತ್ತಿಲ್ಲ ಎಂಬುದು ಅವರ ಕೊರಗಾಗಿದೆ. ಟಿಪ್ಪು ಜಯಂತಿಯ ವೇಳೆಯಲ್ಲಿ ಕಾಂಗ್ರೆಸ್ ಪಕ್ಷ ಎರಡು ವರ್ಷವೂ ಕೊಡಗಿನಲ್ಲಿ ನಡೆದುಕೊಂಡ ರೀತಿಯ ಬಗ್ಗೆ ಕಾರ್ಯಕರ್ತರಲ್ಲಿ, ಅದರಲ್ಲೂ ವಿಶೇಷವಾಗಿ ಅಲ್ಪಸಂಖ್ಯಾತ ವರ್ಗದ ಕಾರ್ಯಕರ್ತರಲ್ಲಿ, ಅಸಮಾಧಾನ ಇದೆ. ವಿಚಿತ್ರವೆಂದರೆ ಈ ಅಲ್ಪಸಂಖ್ಯಾತ ಸಮಾವೇಶದಲ್ಲಿ ರಾಜ್ಯ ಸರಕಾರ ಆಯೋಜಿಸಿದ್ದ ಟಿಪ್ಪು ಜಯಂತಿಯನ್ನು ವಿರೋಧಿಸಿದ ಮತ್ತು ನಿರ್ಲಕ್ಷಿಸಿದ ವೀಣಾ ಅಚ್ಚಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಎಂ.ಆರ್.ಸೀತಾರಾಂ ಮುಂತಾದವರು ವೇದಿಕೆಯಲ್ಲಿ ಮುಂಚೂಣಿಯಲ್ಲಿದ್ದರು. ಇದನ್ನೇ ನೆಪವಾಗಿಸಿಕೊಂಡು ಎಸ್‌ಡಿಪಿಐನ ಸಭೆಯಲ್ಲಿಯೂ ಭಾಗವಹಿಸಿದ ಮಾಜಿ ಶಾಸಕ ಕೆ.ಎಂ. ಇಬ್ರಾಹಿಂ ಕೂಡ ಉಪಸ್ಥಿತರಿದ್ದರು. ಜಿಲ್ಲಾ ಪಂಚಾಯತಿಯ, ಗ್ರಾಮ ಪಂಚಾಯತಿಯ, ತಾಲೂಕು ಪಂಚಾಯತಿಯ ಅಲ್ಪಸಂಖ್ಯಾತ ವರ್ಗದ ಪ್ರತಿನಿಧಿಗಳಿಗೆ ಆಹ್ವಾನವೇ ಇರಲಿಲ್ಲ ಎಂದು ವೀಕ್ಷಕರಿಗೆ ಪುಕಾರು ನೀಡಿದ್ದಾರೆ.

ಕೊಡಗಿನಲ್ಲಿ ಕಾಂಗ್ರೆಸಿನ ಸ್ಥಿತಿ ಹೇಗಿದೆ ಎಂದರೆ ಚುನಾಯಿತ ಪ್ರತಿನಿಧಿಗಳಿಗೆ ಯಾವುದೇ ಗೌರವ ಎಂಬುದು ಇಲ್ಲ, ಏಕೆಂದರೆ ಸರಕಾರದ ಅನುದಾನಕ್ಕೆ ಕ್ರಿಯಾ ಯೋಜನೆ ರೂಪಿಸುವ ಜವಾಬ್ದಾರಿ ಅವರಿಗಾಗಲಿ, ಜಿಲ್ಲಾ ಕಾಂಗ್ರೆಸ್ ಸಮಿತಿಗಾಗಲಿ ಇಲ್ಲ, ಜಿಲ್ಲಾ ಉಸ್ತುವಾರಿ ಸಚಿವರಾದ ಸೀತಾರಾಂರವರ ಏಜೆಂಟ್ ಆಗಿರುವ ಹರೀಶ್ ಬೋಪಣ್ಣ ಇಲ್ಲಿಯ ಸರ್ವಸ್ವವಾಗಿದ್ದಾರೆ. ಆತ ಹೇಳಿದಂತೆ ಕ್ರಿಯಾಯೋಜನೆ ನಡೆಯುತ್ತದೆ. ಆತ ಕಮಿಷನ್ ಏಜೆಂಟನಂತೆ ದಂಧೆ ನಡೆಸುತ್ತಿರುವುದು ಬಹಿರಂಗವಾಗಿದೆ. ಜೊತೆಗೆ ವಿರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಕಾಂಗ್ರೆಸಿನ ಅಭ್ಯರ್ಥಿ ಎನ್ನುವ ರೀತಿಯಲ್ಲಿ ಕ್ಷೇತ್ರದಾದ್ಯಂತ ಪ್ರವಾಸ ಮಾಡುತ್ತಿದ್ದಾನೆ. ಈ ವ್ಯಕ್ತಿ ಸೀತಾರಾಂ ಉಸ್ತುವಾರಿ ಸಚಿವರಾಗುವ ಮುನ್ನ ಯಾವೂರ ದಾಸಯ್ಯ ಎಂಬುದು ಯಾರಿಗೂ ತಿಳಿದಿರಲಿಲ್ಲ. ಈಗ ಈತನದೇ ಎಲ್ಲಾ ಕಾರುಬಾರು. ಪಕ್ಷದಿಂದ ಚುನಾಯಿತರಾದ ಪ್ರತಿನಿಧಿಗಳು ಕೂಡ ತಮ್ಮ ಕ್ಷೇತ್ರದಲ್ಲಿ ಆಗಬೇಕಾದ ಕೆಲಸಕ್ಕೆ ಈತನನ್ನು ದುಂಬಾಲು ಬೀಳುವಂತಹ ಪರಿಸ್ಥಿತಿ ಇದ್ದು ಜಿಲ್ಲಾ ಕಾಂಗ್ರೆಸ್ ಸಮಿತಿ ಅಸಹಾಯಕರಂತೆ ನಡೆದುಕೊಳ್ಳುತ್ತಿದೆ.

ಇದಕ್ಕೆಲ್ಲಾ ಕಾರಣ ವಿಧಾನ ಪರಿಷತ್ ಸದಸ್ಯರಾಗಿರುವ ವೀಣಾ ಅಚ್ಚಯ್ಯನವರ ಸ್ವಜಾತಿ ಪ್ರೇಮ. ಅವರಿಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನವೂ ತಮ್ಮ ಜನಾಂಗಕ್ಕೆ ಸಿಗಬೇಕು; ಕಾಂಗ್ರೆಸಿನ ಪ್ರಮುಖ ಹುದ್ದೆಗಳೆಲ್ಲವೂ ತಮ್ಮ ಜನಾಂಗದವರಿಗೆ ಸಿಗಬೇಕು ಎನ್ನುವ ಅತೀವ ದುರಾಸೆ. ಜಿಲ್ಲೆಯ ಯಾವುದೇ ಕಾರ್ಯಗಳಿರಲಿ ಅವರ ಮೂಲಕ ಆಗದಿದ್ದರೆ, ಅವರು ಕೆಂಡಮಂಡಲವಾಗುತ್ತಾರೆ. ಆದರೆ ಅವರ ಕೈಯಿಂದ ಯಾವುದೇ ಕೆಲಸಗಳು ಆಗುತ್ತಿಲ್ಲ. ಆದರೂ ಹರೀಶ್ ಬೋಪಣ್ಣ ತನ್ನ ಜನಾಂಗದ ವ್ಯಕ್ತಿ ಎನ್ನುವ ಕಾರಣಕ್ಕೆ ಅವರು ಸುಮ್ಮನಿದ್ದಾರೆ.

ಕೊಡಗಿನಲ್ಲಿ ಕಾಂಗ್ರೆಸ್ ಪಕ್ಷವನ್ನು ಸಮರ್ಥವಾಗಿ ಕಟ್ಟಬಲ್ಲ ವ್ಯಕ್ತಿಗಳು ಹಲವರು ಇದ್ದಾರೆ. ಈ ಪೈಕಿ ವಿ.ಪಿ.ಶಶಿಧರ್ ಕೂಡ ಒಬ್ಬರು. ಅವರಿಗಾಗಿ ಕಾರ್ಮಿಕ ವಿಭಾಗ ಎಂಬುದನ್ನು ಆರಂಭಿಸಿ ಅವರನ್ನು ಮೂಲೆಗುಂಪು ಮಾಡಿ ಕೂರಿಸಲಾಗಿದೆ. ಕಾಂಗ್ರೆಸಿನಲ್ಲಿ ಪ್ರಗತಿಪರ ಚಿಂತನೆ ಹಾಗೂ ಹೋರಾಟದ ಮನೋಭಾವ ಇರುವಂತಹ ವ್ಯಕ್ತಿ ಇವರು. ಟಿಪ್ಪು ಜಯಂತಿಯ ವೇಳೆ ಇವರ ವಾಹನದ ಮೇಲೆ ಕಲ್ಲುತೂರಿದ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪುಕಾರು ನೀಡಿದರೆ ಪೊಲೀಸರು 'ಬಿ' ವರದಿಯನ್ನು ನೀಡಿದ್ದಾರೆ. ಶಶಿಧರ್ ಮೇಲೆ ಪ್ರತಿಯಾಗಿ ಬಿಜೆಪಿಯವರು ದೂರು ನೀಡಿದಾಗ, ಅವರನ್ನು ಮೊದಲ ಆರೋಪಿ ಎಂದು ಚಾರ್ಜ್‌ಶೀಟ್ ಸಲ್ಲಿಸಲಾಗಿದೆ. ಇದು ಕಾಂಗ್ರೆಸ್ ಸರಕಾರದ ಕಾರ್ಯವೈಖರಿ. ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ತನ್ನ ಕಾರ್ಯಕರ್ತರನ್ನು ನಡೆಸಿಕೊಳ್ಳುವ ರೀತಿಯಾಗಿದೆ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ವಿಚಾರ ಈಗ ಚರ್ಚೆಯಲ್ಲಿದೆ. ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ಬೆಂಗಳೂರಿನಲ್ಲಿ ಚರ್ಚೆಗಾಗಿ ವೀಕ್ಷಕರ ಸಮ್ಮುಖದಲ್ಲಿ ಕೊಡಗಿನ ಕಾಂಗ್ರೆಸಿನ ಪ್ರಮುಖರಾದ ಟಿ.ಪಿ. ರಮೇಶ್, ಅರುಣ್ ಮಾಚಯ್ಯ ವೀಣಾ ಅಚ್ಚಯ್ಯ ಕೆ.ಎಂ. ಲೋಕೇಶ್ ಹಾಗೂ ಚಂದ್ರಕಲಾರವರನ್ನು ಆಹ್ವಾನಿಸಲಾಗಿತ್ತು, ಎಂದಿನಂತೆ ವೀಣಾ ಅಚ್ಚಯ್ಯ ಕೊಡವ ಜನಾಂಗದವರಿಗೆ ಅಧ್ಯಕ್ಷ ಸ್ಥಾನವನ್ನು ನೀಡಬೇಕು ಎಂದಾಗ, ಚಂದ್ರಕಲಾ ಆಕ್ಷೇಪಿಸಿ, ಕೊಡಗಿನಲ್ಲಿ 24 ಬಾರಿ ಅಧ್ಯಕ್ಷರ ನೇಮಕಾತಿ ಆಗಿದ್ದು, 22 ಬಾರಿ ಕೊಡವ ಜನಾಂಗದವರಿಗೆ ನೀಡಲಾಗಿದೆ. ಹಾಗಾಗಿ ಇತರರಿಗೆ ನೀಡಬೇಕು ಎಂದು ಪಟ್ಟು ಹಿಡಿದರು. ಆದರೆ ವೀಣಾ ಅಚ್ಚಯ್ಯನವರ ಧ್ವನಿಯನ್ನು ಬೆಂಬಲಿಸಿದ ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ್ ಮಾಚಯ್ಯ, ಕೊಡವ ಜನಾಂಗದವರಿಗೆ ಕೊಡಗಿನಲ್ಲಿ ಬಿಟ್ಟು ಬೇರೆಲ್ಲೂ ಅವಕಾಶವಿಲ್ಲ ಎಂದು ಹೇಳಿದರು. ಕೊಡಗಿನಲ್ಲಿರುವ ಇತರ ಜನಾಂಗದವರ ಪರಿಸ್ಥಿತಿಯೂ ಅದೇ ಆಗಿದೆ ಎಂದಾಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಚರ್ಚೆಯನ್ನು ಮೌನವಾಗಿ ವೀಕ್ಷಿಸುತ್ತಿದ್ದರು.

ವೀಣಾ ಅಚ್ಚಯ್ಯನವರಿಗೆ ತನ್ನ ಜನಾಂಗದವರಿಗೆ ಅವಕಾಶ ಸಿಗಬೇಕು ಎಂಬ ವಿಚಾರವಿದ್ದರೂ ಅಂತಹ ವ್ಯಕ್ತಿ ತನಗಿಂತಲೂ ಎತ್ತರಕ್ಕೆ ಬೆಳೆಯಬಾರದು ಎಂಬ ವಿಚಾರವೂ ಇದೆ. ಹಾಗಾಗಿ ಅವರು ಹಿಂದಿನಿಂದಲೂ ಅಧ್ಯಕ್ಷ ಸ್ಥಾನಕ್ಕೆ ಜೆ.ಎ. ಕರುಂಬಯ್ಯ, ಶಿವು ಮಾದಪ್ಪ, ಬಿ.ಎಸ್. ತಮ್ಮಯ್ಯರಂತಹ ವ್ಯಕ್ತಿಗಳನ್ನು ಬಿಂಬಿಸುತ್ತಾ ಬಂದಿದ್ದರು. ಅವರು ಅಪ್ಪಿತಪ್ಪಿ ಕೂಡ ಅರುಣ್ ಮಾಚಯ್ಯನವರ ಹೆಸರನ್ನು ಶಿಫಾರಸ್ಸು ಮಾಡಲಿಲ್ಲ, ಇದರ ಜೊತೆಯಲ್ಲಿ ಮುಂದಿನ ವಿಧಾನಸಭೆಗೆ ವಿರಾಜಪೇಟೆಯಿಂದ ಅರೆಭಾಷೆ ಗೌಡ ಜನಾಂಗದ ಕೊಲ್ಯದ ಗಿರೀಶ್ ಹಾಗೂ ಮಡಿಕೇರಿ ಕ್ಷೇತ್ರಕ್ಕೆ ನಾಪಂಡ ಮುತ್ತಪ್ಪರವರನ್ನು ಅಭ್ಯರ್ಥಿಯನ್ನಾಗಿಸಬೇಕು ಎಂಬ ತಂತ್ರಗಾರಿಕೆಯನ್ನು ಮಾಡುತ್ತಿದ್ದಾರೆ.

ಇದರ ಉದ್ದೇಶ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬಹುಮತ ಬಂದರೆ, ಕೊಡಗಿನಿಂದ ದುರ್ಬಲ ಅಭ್ಯರ್ಥಿಗಳು ಕಣದಲ್ಲಿ ಇದ್ದು ಅವರಿಬ್ಬರೂ ಸೋತರೆ ಮುಂದೆ ಸರಕಾರ ನೇಮಿಸುವ ಸಂದರ್ಭದಲ್ಲಿ ತಾನು ಸಂಪುಟದಲ್ಲಿ ಸ್ಥಾನ ಪಡೆಯಬೇಕು ಮತ್ತು ಸಚಿವರಾಗಿ ಮೆರೆಯಬೇಕು ಎಂಬ ಹಗಲುಗನಸು. ನಾಪಂಡ ಮುತ್ತಪ್ಪ ದುರ್ಬಲ ಎಂಬುದು ಅವರ ಅಭಿಪ್ರಾಯವಾದರೂ, ಅವರು ಬಯಸಿದಷ್ಟು ದುರ್ಬಲರಾಗಿ ಮುತ್ತಪ್ಪ ಉಳಿದಿಲ್ಲ. ಬೇರೆ ಬೇರೆ ರೀತಿಯಲ್ಲಿ ಪಕ್ಷದ ಚಟುವಟಿಕೆಯನ್ನು ಅವರು ಮಾಡುತ್ತಾ ಬಂದಿದ್ದು ಚುನಾವಣೆಗೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆ.

ಈ ಎಲ್ಲಾ ಷಡ್ಯಂತ್ರಗಳ ಅರಿವು ಇರುವ ಅರುಣ್ ಮಾಚಯ್ಯ ವೀಣಾ ಅಚ್ಚಯ್ಯನವರಿಗೆ ಅವರ ಶೈಲಿಯಲ್ಲಿಯೇ ಬಲವಾದ ಏಟು ನೀಡಲು ನಿರ್ಧರಿಸಿ, ಹೇಗೂ ತನ್ನ ಹೆಸರನ್ನು ವೀಣಾ ಅಚ್ಚಯ್ಯ ಸೂಚಿಸುವುದಿಲ್ಲ; ಹಾಗಿರುವಾಗ ತಾನು ಅವರ ತಂತ್ರಕ್ಕೆ ಪ್ರತಿತಂತ್ರವನ್ನು ಹೂಡಬೇಕು ಎಂದು ತೀರ್ಮಾನಿಸಿ, ಅಧ್ಯಕ್ಷ ಸ್ಥಾನಕ್ಕೆ ಬೇರೊಬ್ಬರ ನೇಮಕಾತಿ ಬೇಡ, ಟಿ.ಪಿ. ರಮೇಶ್‌ರವರೇ ಮುಂದುವರೆಯಲಿ ಎಂದರು. ಆಗ ಸಿದ್ದರಾಮಯ್ಯ ತನ್ನ ಜೆಡಿಎಸ್‌ನ ಗೆಳೆಯ ಟಿ.ಪಿ.ರಮೇಶ್ ಅವರಿಗೆ ಸಹಮತವನ್ನು ವ್ಯಕ್ತಪಡಿಸಿದ್ದಾರೆ.

ಕಳೆದ ಎರಡು ವರ್ಷಗಳಿಂದ ಕಾಂಗ್ರೆಸಿನಲ್ಲಿ ಯಾವುದೇ ಚಟುವಟಿಕೆ ಟಿ.ಪಿ.ರಮೇಶ್‌ರವರ ನೇತೃತ್ವದಲ್ಲಿ ನಡೆಯದೇ ಇರುವುದರಿಂದ ಈ ಬೆಳವಣಿಗೆಯಿಂದ ಬೇಸತ್ತ ಕೊಡಗು ಕಾಂಗ್ರೆಸಿಗರು ರಮೇಶ್‌ರವರನ್ನು ಅಧ್ಯಕ್ಷರನ್ನಾಗಿ ನೇಮಿಸುವುದು ಕಾಂಗ್ರೆಸ್ ಆತ್ಮಹತ್ಯೆ ಮಾಡಿಕೊಂಡಂತೆ ಎಂದು ಬಹಿರಂಗವಾಗಿ ಹೇಳಿಕೊಂಡು, ವೇಣುಗೋಪಾಲ್ ಹಾಗೂ ಪರಮೇಶ್ವರ್ ಮತ್ತು ದಿನೇಶ್ ಗುಂಡೂರಾವ್‌ರವರನ್ನು ಭೇಟಿಯಾಗಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಹಾಗಾಗಿ ಕಾಯಂ ನೇಮಕಾತಿಯ ವಿಚಾರ ಸದ್ಯಕ್ಕೆ ಸ್ಥಗಿತಗೊಂಡಿದೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಕಾಯಕಲ್ಪ ನೀಡಬೇಕು ಎಂಬ ಇಚ್ಛೆ ಇದ್ದರೆ ಖಂಡಿತವಾಗಿಯೂ ಹೊಸ ಮುಖಕ್ಕೆ ಅವಕಾಶವನ್ನು ನೀಡಬೇಕು. ಕಾಂಗ್ರೆಸಿನ ನೀತಿ ಸಿದ್ಧಾಂತಗಳನ್ನು ಬೆಂಬಲಿಸುವ ವ್ಯಕ್ತಿಗಳಿಗೆ ಅವಕಾಶ ನೀಡಿದರೆ ಕಾಂಗ್ರೆಸ್ ಪಕ್ಷ ಮತ್ತೆ ಎರಡೂ ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇದೆ.


ಜಿಲ್ಲಾ ಮಟ್ಟದಲ್ಲಿ ಬಿಜೆಪಿಯ ಒಳಜಗಳ ಮತ್ತು ಜೆಡಿಎಸ್‌ನ ದಿವಾಳಿತನದ ಲಾಭವನ್ನು ಈ ಹಂತದಲ್ಲಿ ಕಾಂಗ್ರೆಸಿಗೆ ಪಡೆಯಲು ಸಾಧ್ಯವಿಲ್ಲ ಎಂದಾದರೆ, ಮುಂದೆಂದೂ ಇಂತಹ ಅವಕಾಶಗಳು ಕಾಂಗ್ರೆಸಿಗೆ ಬರುವುದು ಅಸಾಧ್ಯ.

■ ಬಿ.ಎನ್. ಮನುಶೆಣೈ

◀◀

...ವಾಗಿಟ್ಟು ನಂತರ ಓಟ್‌ಬ್ಯಾಂಕ್ ಭದ್ರಪಡಿಸುವುದು! ...ು ಸಿದ್ದು ಹಾಕಿದ ಚಾಣಾಕ್ಷ ಪಟ್ಟು. ಇದರಿಂದ ...ಮತ್ತೊಂದು ಲಾಭವಿತ್ತು, ಹೇಗೂ ಚುನಾವಣೆ ...ಲ್ಲಿದೆಯಾದ್ದರಿಂದ ಪರಮೇಶ್ವರ್ ಕಾಂಗ್ರೆಸ್ ಸಾರಥ್ಯ ...ದಿಂದಾಗಿ ಸಹಜವಾಗೇ ಮಂತ್ರಿಗಿರಿಗೆ ರಾಜಿನಾಮೆ ...ಕಾಗುತ್ತದೆ. ಅಲ್ಲಿಗೆ ಗೃಹಮಂತ್ರಿ ಹುದ್ದೆ ...ುತ್ತದೆ ಅಥವಾ ತೆರವಾದ ಖಾತೆಯನ್ನು ...ಹಿಸಿಕೊಳ್ಳಲೂ ಬಹುದು. ಹೆಚ್ಚೆಂದರೆ ...ಬೇಕಾದವರನ್ನೂ ತರಬಹುದು. ...ದಂಟ್ಟಿಗೆ ಪರಮೇಶ್ವರ್‌ರನ್ನು ...ಡಂತೆಯೂ ಆಯ್ತು, ಏಕೆಂದರೆ ...ದು ಸೃಷ್ಟಿಸಿರುವುದು ಕೆಪಿಸಿಸಿ ...ನಾದಿಗೆ ಪರ್ಯಾಯಪೀಠ. ಅಲ್ಲಿಗೆ ...ರ್ ಅಧಿಕಾರದ ಅರ್ಧವನ್ನು ದೀಕೆ ...ಂದಂತಾಯ್ತು, ಇದರರ್ಥ ದಲಿತ ಸಿಎಂ ...ಸೊಂದಿಗೆ ಒಕ್ಕಲಿಗರ ಸಿಎಂ ಸಾಧ್ಯತೆಯನ್ನು ...ನಾಗಿರುವುದು. ಹಾಗೆಂದು ದೇವೇಗೌಡರು ...ದ ಹಾಗೆಯೂ ನೋಡಿಕೊಳ್ಳುವುದು. ಅದೇ ... ಮುಖ್ಯಮಂತ್ರಿಯ ನೇತೃತ್ವದಲ್ಲೇ ಮುಂದಿನ ...ಣೆಯೆಂದು ಹೈಕಮಾಂಡ್ ಮೂಲಕ ...ಡಿಸುವುದು. ಒಮ್ಮೆ ಹೈಕಮಾಂಡ್ ಮುಖ್ಯಮಂತ್ರಿಯ ನೇತೃತ್ವದಲ್ಲೇ ಮುಂಬರುವ ಚುನಾವಣೆಯೆಂದು ಘೋಷಿಸಿತೆಂದರೆ ಅಲ್ಲಿಗೆ ಕೆಪಿಸಿಸಿ ಅಧ್ಯಕ್ಷಗಿರಿ ಮತ್ತು ಪ್ರಚಾರ ಸಮಿತಿಯ ಅಧ್ಯಕ್ಷಗಿರಿಯೆರಡೂ ನೇಪಥ್ಯಕ್ಕೆ ಸರಿದ ಹಾಗೆಯೆ.

ನಾಮಕಾವಸ್ಥೆಗೆ ಯಾರೇನೇ ಪದವಿ, ಪೀಠದಲ್ಲಿದ್ದರೂ ಹೈಕಮಾಂಡ್ ಅವಲಂಬಿಸಿರುವುದು ಮುಖ್ಯಮಂತ್ರಿಯನ್ನೇ ಎಂಬ ಸಂದೇಶವೊಂದು ಒಮ್ಮೆ ರವಾನೆಯಾಯಿತೆಂದರೆ ಬೇರೆಲ್ಲ ಶಕ್ತಿಕೇಂದ್ರಗಳ ಬಾಗಿಲು ಮುಚ್ಚಿದಂತೆಯೇ. ಖರ್ಗೆಯ ಮೂಲಕ ಸಾಮೂಹಿಕ ನಾಯಕತ್ವದಲ್ಲೇ ಮುಂದಿನ ಚುನಾವಣೆಯೆಂದು ಯಾರೆಲ್ಲ ಒಳಪಟ್ಟು ಹಾಕಲೆತ್ನಿಸಿದ್ದರೋ ಅವರೆಲ್ಲರ ಬಾಯನ್ನೂ ಈ ಮೂಲಕ ಸಿದ್ದು ಮುಚ್ಚಿಸಿದ್ದರು. ಇದೆಲ್ಲದರ ಹೊರತಾಗಿಯೂ ಸಿದ್ದು ಮಾಡಿದ ಮತ್ತೆರಡು ಸೂಕ್ಷ್ಮ ತಂತ್ರಗಳೆಂದರೆ ಕೆಪಿಸಿಸಿ ಅಧ್ಯಕ್ಷಗಾದಿಗಾಗಿ ಹಠಕ್ಕೆ ಬಿದ್ದಿದ್ದ ಕೋಲಾರದ ಮುನಿಯಪ್ಪನವರನ್ನು ವಿಶೇಷ ಆಹ್ವಾನಿತರೆಂಬ ತ್ರಿಶಂಕುಪೀಠಕ್ಕೆ ತಂದಿದ್ದು, ಮುನಿಸಿಕೊಂಡು ಇನ್ನೇನು ಜೆಡಿಎಸ್ ಸೇರುತ್ತಾರೆಂದೇ ಖಾತರಿಯಾಗಿದ್ದ ಮಹಾನ್ ಸಂಘಟನಾಕಾರ ಮತ್ತು ನೈಜ ಅಹಿಂದದ ರೂವಾರಿ ಸತೀಶ್ ಜಾರಕಿಹೊಳಿಯವರನ್ನು ಎಐಸಿಸಿಯ ಕಾರ್ಯದರ್ಶಿಯಾಗಿಸುವ ಮೂಲಕ ಕಟ್ಟಿಹಾಕಿದ್ದು.


ಎಂ.ಬಿ. ಪಾ...


ಇದು ರಾಜ್ಯ ಉಸ್ತುವಾರಿ ವೇಣುಗೋಪಾಲರನ್ನು ಮುಂದಿಟ್ಟುಕೊಂಡು ಸಿದ್ದು ಆಡಿದ ಚಾಣಾಕ್ಷ ರಣತಂತ್ರ. ಅಂದರೆ ಒಂದೇ ಕಲ್ಲಲ್ಲಿ ಹಲವು ಕಾಯಿಗಳನ್ನೆದುರಿಸುವ ತಂತ್ರ. ಪರಮೇಶ್ವರ್ ಮುಂದುವರಿಸುವ ಮೂಲಕ ದಲಿತರ ಮತಬ್ಯಾಂಕ್ ಭದ್ರಗೊಂಡಿತ್ತು. ಆ ಮೂಲಕ ದೇವೇಗೌಡರು ಮತ್ತು ಜೆಡಿಎಸ್ ಮಾನಸಿಕವಾಗಿ ಬಿಜೆಪಿಗೆ ಹತ್ತಿರವಾಗದ ಹಾಗೆ ನೋಡಿಕೊಂಡಂತಾಯ್ತು. ಹಾಗಂತ ಡೀಕೆಯನ್ನೂ ನಿರಾಶೆ ಮಾಡದೆ ಅಧ್ಯಕ್ಷಗಾದಿಗೆ ಪರ್ಯಾಯ ಪೀಠವೊಂದರಲ್ಲಿ ಪ್ರತಿಷ್ಠಾಪಿಸಿದಂತಾಗಿತ್ತು. ತನ್ಮೂಲಕ ಮುಂಬರುವ ಚುನಾವಣೆಗೆ ತನ್ನದೇ ನಾಯಕತ್ವವೆಂದು ಹೈಕಮಾಂಡ್ ಮೂಲಕ ಹೇಳಿಸಿಯಾಗಿತ್ತು, ಮತ್ತೊಂದೆಡೆ ಜಾರಕಿಹೊಳಿ ಮತ್ತು ಕೆ.ಹೆಚ್. ಮುನಿಯಪ್ಪನವರನ್ನೂ ತೃಪ್ತಿಪಡಿಸಿ ಬಿಜೆಪಿ ಏನೆಲ್ಲಾ ಲೆಕ್ಕ ಹಾಕಿತ್ತೋ ಅದೆಲ್ಲವನ್ನೂ ತಲೆಕೆಳಗು ಮಾಡಿದ್ದರು ಸಿದ್ದು. ಎತ್ತಿಂದೆತ್ತ ಲೆಕ್ಕ ಹಾಕಿದರೂ ಸಿದ್ದು ಕೈಯೇ ಮೇಲಾಗಿದೆ ಮತ್ತು ಆ ಮೂಲಕ ತನ್ನ ಬೇಳೆ ಬೇಯಿಸಿಕೊಳ್ಳುವ ಬಿಜೆಪಿಯ ಲೆಕ್ಕಾಚಾರಗಳೆಲ್ಲವೂ ತಲೆಕೆಳಗಾಗಿದೆ.

ಮೋದಿ ಮತ್ತು ಅಮಿತ್ ಷಾ ಏನೆಲ್ಲ ಗುಂಡಿ ತೋಡಿದ್ದರೋ ಅದೇ ಗುಂಡಿಗೀಗ ಬಿಜೆಪಿ ಬಿದ್ದು ತಲೆಚಚ್ಚಿಕೊಳ್ಳುತ್ತಿದೆ.

■ ರಾ. ಸೋಮನಾಥ್


ಶಿಕಾರಿಪುರದಲ್ಲಿ ಯಡ್ಡಿಗೆ ಬ್ರೇಕ್ ಹಾಕಲು ಸಂತೋಷ್‌ಜಿ ರಣತಂತ್ರ । ಸೊರಬದಲ್ಲಿ ಕುಮಾರನಿಗೆ ಟಿಕೆಟ್ ಕೊಟ್ರೆ ಸಾಗರದ ಗೋಪಾಲನಿಗೆ ತಾಮ್ರದ ಚೊಂಬು । ಕಾಗೋಡು ಸ್ಥಾನಕ್ಕೆ ಡಾಕ್ಟರ್ ಮಗಳ ಎಂಟ್ರಿ । ಭದ್ರಾವತಿ ಹಾಲಿ-ಮಾಜಿಗಳ ಲಾಕೌಟ್ ರಾಜಕಾರಣ । ಗ್ರಾಮಾಂತರಕ್ಕೆ ಸಿಂಪಥಿ ಶಾರದಮ್ಮನ್ನೇ ಗಟ್ಟಿ । ತೀರ್ಥಹಳ್ಳಿ ಕಿಮ್ಮನೆ ಮುಂದೆ ಆರಗ ಸುಮ್ಮನೆ

ತವರಲ್ಲೇ ಕಾದಿದೆ ಯಡ್ಡಿಗೆ ಕೇಸರಿ ಶಾಕು!




ಮೀಸೆ ಶಾಂತವೀರಪ್ಪ ಗೌಡ


ರಾಘು


ಸಂತೋಷ್


ಆರ್. ಪ್ರಸನ್ನ

ರಾಜ್ಯ ರಾಜಕಾರಣದಲ್ಲಿ ಶಿವಮೊಗ್ಗ ಪೊಲಿಟಿಕ್ಸ್‌ಗೆ ತನ್ನದೇ ಆದ ವರ್ಚಸ್ಸಿದೆ. ಒಂದುಕಾಲಕ್ಕೆ ಶಾಂತವೇರಿ ಗೋಪಾಲಗೌಡರ ಸಮಾಜವಾದದ ಕರ್ಮಭೂಮಿಯಾಗಿ ಕಾಗೋಡು ಸತ್ಯಾಗ್ರಹದಂತಹ ಹೋರಾಟಕ್ಕೆ ಸಾಕ್ಷಿಯಾಗಿದ್ದ ನೆಲ ಕಾಲಾಂತರದಲ್ಲಿ ಕೋಮುವಾದಿಗಳ ಕುಲುಮೆಯಾಗಿ ಸ್ಥಿತ್ಯಂತರಗೊಂಡಾಗ್ಯೂ ಅದರ ಪೊಲಿಟಿಕಲ್ ಖದರ್ ಕಮ್ಮಿಯಾಗಿಲ್ಲ. 2018ರ ಚುನಾವಣಾ ಕದನಕ್ಕೂ ಶಿವಮೊಗ್ಗ ಅದೇ ಹಳೇ ಖದರ್‌ನಲ್ಲೇ ರೆಡಿಯಾಗುತ್ತಿದೆ. ಸದ್ಯಕ್ಕೆ ಇಡೀ ಜಿಲ್ಲೆಯಲ್ಲಿ ಹೆಚ್ಚು ಸದ್ದು ಮಾಡುತ್ತಿರೋದು ಶಿಕಾರಿಪುರ ಕ್ಷೇತ್ರ. ಕೂಸು ಹುಟ್ಟುವುದಕ್ಕೂ ಮೊದಲೇ ಕುಲಾವಿ ಹೊಲಿಸಿದರು ಎಂಬಂತೆ ಬಿಜೆಪಿಯ ಯಡಿಯೂರಪ್ಪ ಆದಾಗಲೇ ತಾನೇ ಭವಿಷ್ಯದ ಮುಖ್ಯಮಂತ್ರಿ ಎಂಬ ಭ್ರಮೆಗೆ ಫಿಕ್ಸ್ ಆಗಿದ್ದಾರೆ. ಅನಂತ್‌ಕುಮಾರ್, ಈಶ್ವರಪ್ಪ, ಶೆಟ್ಟರ್‌ನಂತಹ ಮಗ್ಗುಲಮುಳ್ಳುಗಳ ಹೊರತಾಗಿಯೂ ಮಿಷನ್ 150ರ ಕಾಮಿಯಾಬಿಯಾ ಕನಸಿನಲ್ಲಿದ್ದಾರೆ. ಆದರೆ ವಾಸ್ತವದಲ್ಲಿ ಯಡ್ಡಿಗೆ ಶಿಕಾರಿಪುರದಲ್ಲೆ ತೊಡರುಗಾಲು ಹಾಕಲು ಬಿಜೆಪಿಯೊಳಗಿನ ಆರೆಸ್ಸೆಸ್ ಬಳಗ ಕಸರತ್ತು ನಡೆಸುತ್ತಿದೆ ಎಂಬ ಮಾಹಿತಿ ಕೇಸರಿ ಪಾಳೆಯದಿಂದಲೇ ಗುಟ್ಟಾಗಿ ಸೋರಿಬರುತ್ತಿದೆ. ಬಿಜೆಪಿಗೀಗ ಯಡ್ಡಿಯ ಲಿಂಗಾಯತ ಸಾಲಿಡ್ ಮತಗಳು ಬೇಕಿವೆಯೇ ಹೊರತು ಯಡ್ಡಿಯ ಸರ್ವಾಧಿಕಾರಿ ಧೋರಣೆಯಲ್ಲ. ಹಾಗಾಗಿ ರಾಜ್ಯಾದ್ಯಂತ ಯಡ್ಡಿಯ ಮುಖ ತೋರಿಸಿ ಮತ ಕಿತ್ತುಕೊಂಡು, ಶಿಕಾರಿಪುರದಲ್ಲೇ ಅವರ ವೇಗಕ್ಕೆ ಬ್ರೇಕ್ ಹಾಕಿ ಅಡ್ಡಡ್ಡ ಮಲಗಿಸುವ ಟ್ರಯಲ್ ಅಂಡ್ ಎರರ್ ಪ್ರಯೋಗದಲ್ಲಿದೆಯಂತೆ ಸಂಘ ಪರಿವಾರ. ಯಡಿಯೂರಪ್ಪ ಯಾವ ಸಂತೋಷ್‘ಜಿ’ಯ ವಿರುದ್ಧ ಕೆಂಡಕಾರಿದ್ದರೋ ಆ ಸಂತೋಷನೇ ಶಿವಮೊಗ್ಗದ ಆರೆಸ್ಸೆಸ್ ಪಾಳೆಯದಲ್ಲಿ ಪ್ರಭಾವಿ ಆಸಾಮಿ.

ಯಾಕೆಂದರೆ ತುಂಬಾ ದಿನಗಳ ಕಾಲ ಆತ ಶಿವಮೊಗ್ಗ ಸಂಘ ಸಂಚಾಲಕನಾಗಿ ಕೆಲಸ ಮಾಡಿದ್ದ. ಈಗಲೂ ಮಲೆನಾಡಿನ ಚೆಡ್ಡಿ ಪಾಳೆಯಕ್ಕೆ ಆತನೇ ಡಿಕ್ಟೇಟರ್. ಅವನ ಅನುಯಾಯಿಗಳೆಲ್ಲ ಸೇರಿಕೊಂಡು ಯಡ್ಡಿಗೆ ಸೈಲೆಂಟ್ ಸೈನೈಡ್ ಚುಚ್ಚಲು ರೆಡಿಯಾಗಿರುವ ವರ್ತಮಾನವಿದೆ.


ಯಡ್ಡಿಗೆ ಅಡ್ಡಗಾಲು

ಈ ತಂತ್ರಕ್ಕೆ ಈಶ್ವರಪ್ಪನ ಸಖತ್ ಸಾಥ್ ಕೂಡಾ ಸಿಕ್ಕಿದ್ದು ಈಗಾಗಲೇ ಯಡ್ಡಿಯ ಭಂಟ ಮೀಸೆ ಶಾಂತವೀರಪ್ಪ ಗೌಡನ ಮೂಲಕ ಮೊದಲ ಸುತ್ತಿನ ಕಹಳೆ ಮೊಳಗಿಸಲಾಗಿದೆ. ತಾನು ಶಿಕಾರಿಪುರದಿಂದಲೇ ಸ್ಪರ್ಧಿಸೋದು ಗ್ಯಾರಂಟಿ ಎಂದು ಯಡ್ಡಿ ಘೋಷಿಸಿದ ಕೆಲವೇ ದಿನಕ್ಕೆ ಪತ್ರಿಕಾಗೋಷ್ಠಿ ಕರೆದ ಶಾಂತವೀರಪ್ಪ “ಮುಂದಿನ ಎಲೆಕ್ಷನ್‌ನಲ್ಲಿ ಶಿಕಾರಿಪುರದ ಟಿಕೆಟ್ ಗ್ಯಾರಂಟಿ ಅಂದಿದ್ದರಿಂದಲೇ ನಾನು ಕಾಂಗ್ರೆಸ್ ಬಿಟ್ಟು ಬಿಜೆಪಿಗೆ ಬಂದೆ. ಹಾಗಾಗಿ ಟಿಕೆಟ್ ನನಗೇ ಕೊಡಬೇಕು” ಅಂತ ಅಬ್ಬರಿಸಿದ್ದರ ಹಿಂದೆ ಹಲವರ ಕೈವಾಡ ಇದ್ದಂತಿದೆ. ಯಾಕೆಂದರೆ ಶಾಂತವೀರಪ್ಪ ಶಿಕಾರಿಪುರದ ಮಟ್ಟಿಗೆ ಪರ್ಯಾಯ-ಯಡಿಯೂರಪ್ಪನ ವರ್ಚಸ್ಸು ಹೊಂದಿರುವಂತಹ ವ್ಯಕ್ತಿ. ಯಡ್ಡಿಯ ಜೊತೆಗಿದ್ದುಕೊಂಡೇ ತನ್ನ ಪಂಚಮಸಾಲಿ ಲಿಂಗಾಯತ ಮತಗಳನ್ನು ಗಟ್ಟಿ ಮಾಡಿಕೊಂಡಿರುವಾತ. ಮಾಜಿ ಮುಖ್ಯಮಂತ್ರಿಯ ಕುಟುಂಬ ರಾಜಕಾರಣದ ವಿರುದ್ಧ ಸಿಡಿದೆದ್ದು ಕಾಂಗ್ರೆಸ್ ಸೇರಿದ್ದ ಈತ 2013ರ ಎಲೆಕ್ಷನ್‌ನಲ್ಲಿ ಯಡ್ಡಿಗೆ ಹಾಗೂ 2014ರ ಉಪಚುನಾವಣೆಯಲ್ಲಿ ಪುತ್ರ ಬಿ.ವೈ. ರಾಘವೇಂದ್ರನಿಗೆ ಪ್ರಬಲ ಪೈಪೋಟಿ ಒಡ್ಡಿದ್ದ. ಉಪ ಚುನಾವಣೆಯಲ್ಲಂತು ರಾಘವೇಂದ್ರ ಸೋತೇ ಬಿಟ್ಟ ಎನ್ನುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಕಡೆಗೆ ಜುಜುಬಿ ಆರು ಸಾವಿರ ಮತಗಳ ಅಂತರದಲ್ಲಿ ಮಗನನ್ನು ಗೆಲ್ಲಿಸಿಕೊಂಡ ಯಡ್ಡಿ ನಿಟ್ಟುಸಿರು ಬಿಟ್ಟಿದ್ದರು.

ರಾಜ್ಯದ ಅಧಿಕಾರದ ಮೇಲೆ ಕಣ್ಣಿಟ್ಟ ಯಡಿಯೂರಪ್ಪ ಶಿಕಾರಿಪುರದಲ್ಲಿ ತನ್ನ ಲೈನ್ ಕ್ಲಿಯರ್ ಮಾಡಿಕೊಳ್ಳುವ ಸಲುವಾಗಿ ಶಾಂತವೀರಪ್ಪನನ್ನು ಬಿಜೆಪಿಗೆ ಕರೆತಂದು ಕ್ಷೇತ್ರದಲ್ಲಿ ಪರ್ಯಾಯ ರಾಜಕೀಯ ಅಸ್ತಿತ್ವವೇ ಇಲ್ಲದಂತೆ ಆಣಿ ಮಾಡಿಕೊಂಡಿದ್ದರು. ಆದರೆ ಈಗ ಅದೇ ಶಾಂತವೀರಪ್ಪ ಮತ್ತೆ ಟಿಕೆಟ್‌ಗಾಗಿ ಬಹಿರಂಗ ಕದನಕ್ಕೆ


ಅಪ್ಪಾಜಿ ಗೌಡ


ಬಿ.ಕೆ. ಸಂಗಮೇಶ್


ಎಂ.

ಇಳಿಯುತ್ತಾನೆಂದರೆ ಅದು ಯಡ್ಡಿಯ ನಿದ್ದೆಗೆಡಿಸದಿರದು. ಆಗ ಯಡಿಯೂರಪ್ಪನ ಗಮನ ಸ್ವಕ್ಷೇತ್ರಕ್ಕೆ ಸೀಮಿತವಾಗುತ್ತೆ ಅನ್ನೋ ಲೆಕ್ಕಾಚಾರದಲ್ಲೆ ಶಾಂತವೀರಪ್ಪನ ಬುಡ ಚಿವುಟಲಾಗಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಹಾಗೇನಾದರು ಆತ ಬಂಡಾಯವೆದ್ದು ಲಿಂಗಾಯತ ಮತಗಳನ್ನು ವಿಭಜಿಸುವುದಾದರೆ ಕುರುಬ ಮತ್ತು ದಲಿತರ ಮತಗಳನ್ನು ತೆಕ್ಕೆಗೆ ಇಳಿಸಿಕೊಳ್ಳಲು ಕಾಂಗ್ರೆಸ್ ಸಜ್ಜಾಗಿರೋದರಿಂದ ಯಡ್ಡಿಯ ಸೋಲು ಗ್ಯಾರಂಟಿ, ಜೊತೆಗೆ ಸಿಎಂ ರೇಸ್‌ನಿಂದ ದೂರವಿಡಲೂ ಅಸ್ತ್ರ ಸಿಕ್ಕಂತಾಗುತ್ತೆ ಎಂಬ ‘ಪರಮೇಶ್ವರ್ ಫಾರ್ಮುಲಾ’ಕ್ಕೆ (2013ರ ಕೊರಟಗೆರೆ ಫಲಿತಾಂಶ) ಸಂತೋಷ್ ಬ್ರಿಗೇಡ್ ಗಂಟುಬಿದ್ದಿದೆ.


ಲಿಂಗಾಯತ ವರ್ಸಸ್ ಕುರುಬ-ದಲಿತ


ಒಂದೊಮ್ಮೆ ನಿಗಮ ಮಂಡಳಿಯ ಅಥವಾ ಎಂಎಲ್ಸಿಗಿರಿಯ ಚಂದಮಾಮನ ಕತೆ ಹೇಳಿ ಶಾಂತವೀರಪ್ಪ ಗೌಡನನ್ನು ಸಮಾಧಾನ ಮಾಡಿದರೂ ಯಡ್ಡಿಗೆ ಮುಂದಿನ ಚುನಾವಣೆಯ ಗೆಲುವು ಸಲೀಸಾಗಿ ದಕ್ಕುವಂತಿಲ್ಲ. ಸಂಘ ಪರಿವಾರದ ಪಿತೂರಿಯ ಜೊತೆ ಕುರುಬ ಹಾಗೂ ದಲಿತ ಮತಗಳನ್ನು ಒಗ್ಗೂಡಿಸಲು ಕಾಂಗ್ರೆಸ್ ಸಜ್ಜಾಗಿರೋದು ಯಡ್ಡಿಯ ಸಿಎಂ ಹಾದಿಗೆ ಶಿಕಾರಿಪುರದಲ್ಲೇ ಬ್ರೇಕ್ ಹಾಕುವ ಸಾಧ್ಯತೆ ಇದೆ. ಈಗಾಗಲೇ ಶಿಕಾರಿಪುರದಲ್ಲಿ ತನ್ನ ಅಭ್ಯರ್ಥಿಯಾ[...] ಕಣಕ್ಕಿಳಿಸಲು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ಪ್ರಸನ್ನಕುಮಾರ್ ಎಂಬ ಆಯುಧವನ್ನು ಕೈ ಪಾ[...] ಸಾಣೆ ಹಿಡಿದು ಕೂತಿದೆ. ಈತ ಜಾತಿಯಲ್ಲಿ ಕುರುಬನಾದರೂ ಲಿಂಗಾಯತ ಲೀಡರ್‌ಗಳ ಜೊ[...] ಒಡನಾಟವನ್ನೂ ಉಳಿಸಿಕೊಂಡಿದ್ದಾರೆ. ಸಾಲದ್ದಕ್ಕೆ ಎಂಎಲ್ಸಿಯಾಗಿರುವ ಪ್ರಸನ್ನಕುಮಾರ್ ಈಗಾಗಲೇ[...] ಕ್ಷೇತ್ರದಲ್ಲಿ ಓಡಾಡಿಕೊಂಡು ಒಂದಿಷ್ಟು ಜನಪರಿ[...] ಸಂಪಾದಿಸಿಕೊಂಡಿದ್ದಾರೆ. ಆತ ಸ್ಪರ್ಧಿಸಿದ್ದೇ ಆದಲ್ಲಿ 2018ರ ಎಲೆಕ್ಷನ್‌ನಲ್ಲಿ ಲಿಂಗಾಯತ ಮತ್ತು ಶೂ[...] ಹಣಾಹಣಿಯಾಗಿ ಮಾರ್ಪಡುವುದರಲ್ಲಿ ಅನುಮಾ[...] ಇಲ್ಲ. ಇಂತಹದ್ದೊಂದು ಕದನ 1989ರಲ್ಲೇ ಶಿಕಾರಿಪುರದಲ್ಲಿ ನಡೆದಿತ್ತು. ಆ ವರ್ಷ ಯಡ್ಡಿಗೆ ಎದುರಾಳಿಯಾಗಿ ನಗರದ ಕುರುಬರ ಮಹದೇವ[...] ಸ್ಪರ್ಧಿಸಿದ್ದರು. ಕುರುಬ ಮತ್ತು ದಲಿತ ಮತಗಳು ಒಂದಾಗಿದ್ದರಿಂದ ಯಡ್ಡಿಗೆ ಸೋಲುವ ಭೀತಿ ಎದುರಾಗಿತ್ತು. ಒಂದು ಹಂತದಲ್ಲಿ ಮಹದೇವಪ್ಪ[...] ಬಿಟ್ಟರು ಎಂದು ಪಟಾಕಿಯನ್ನು ಸಿಡಿಸಲಾಗಿತ್ತು. ಕೊನೇ ಸುತ್ತಿನ ಎಣಿಕೆಯಲ್ಲಿ ಮೇಲುಗೈ ಸಾಧಿಸಿ[...] ಯಡ್ಯೂರಪ್ಪ ಎರಡು ಸಾವಿರ ಚಿಲ್ಲರೆ ಮತಗಳ ಹೀನಾಯ ಗೆಲುವು ಕಂಡು ವಿದುಸಿರುಬಿಟ್ಟಿದ್ದರು.. ಅಂತದ್ದೇ ಪರಿಸ್ಥಿತಿ ಮತ್ತೆ ನಿರ್ಮಾಣವಾದರೆ ಅಚ್ಚರಿಯಿಲ್ಲ. ಸಿದ್ದರಾಮಯ್ಯ ಸರ್ಕಾರ ತನ್ನ ಅಹಿಂ[...] ಅಜೆಂಡಾದ ಮೂಲಕ ತಳಸಮುದಾಯಗಳಲ್ಲಿ ಭರವಸೆಯನ್ನು ಮೂಡಿಸಿರೋದ್ರಿಂದ ಯಡ್ಡಿಯ ಮೂಲಕ ಲಿಂಗಾಯತರ ರಾಜಕಾರಣಕ್ಕೆ ಬೇಸತ್ತಿರು[...] ಶಿಕಾರಿಪುರದ ಕುರುಬ, ದಲಿತ ಮತಗಳು ಒಗ್ಗೂ[...] ಸಾಧ್ಯತೆ ಇದೆ. ಹಾಗಾದರೆ ಯಡ್ಡಿ 1989ರ ನಿದ್ರೆಯಿರದ ರಾತ್ರಿಗಳನ್ನು ಮತ್ತೆ ಕಳೆಯಬೇಕಾಗುತ[...]

ರಾಣೆಬೆನ್ನೂರಿಗೆ ರಾಘವೇಂದ್ರ?

ಇನ್ನು ಯಡಿಯೂರಪ್ಪ ಶಿಕಾರಿಪುರದಲ್ಲಿ ಸ್ಪರ್ಧಿಸುವುದಾದರೆ ಮಗ ರಾಘವೇಂದ್ರನ ಭವಿಷ್ಯ[...] ಎಂಬ ಚರ್ಚೆಗಳೂ ನಡೆಯುತ್ತಿವೆ. ಯಾಕೆಂದರೆ ಆತನನ್ನು ಮತ್ತೆ ಶಿವಮೊಗ್ಗ ಸಂಸದ ಎಲೆಕ್ಷನ್‌ಗೆ ನಿಲ್ಲಿಸುವ ಚಾನ್ಸು ತುಂಬಾ ಕಮ್ಮಿ. ಅದಕ್ಕೆ ಎರಡು[...] ಕಾರಣಗಳುಂಟು. ಮೊದಲನೆಯದಾಗಿ ಡಿಕ್ಟೇಟರ್ ಮೋದಿಯ ನೆರಳಿರೋ ಕೇಂದ್ರದಲ್ಲಿ ತನಗೇ ಭವಿಷ್ಯವಿಲ್ಲವೆಂದ ಮೇಲೆ ತನ್ನ ಮಗನಿಗೂ ಜಾಗ[...] ಅನ್ನೋದು ಯಡ್ಡಿಗೆ ಅರ್ಥವಾಗಿದೆ. ಹಾಗಾಗಿ ದಿಲ್ಲಿ[...] ಕಳಿಸಿ ಮಗನನ್ನು ಡಮ್ಮಿ ಪೀಸ್ ಮಾಡಲು ಇಷ್ಟ[...] ರಾಜ್ಯ ರಾಜಕಾರಣದ ನೊಗ ಕಟ್ಟಿ ಎಳೆದಾಡಿದರೆ


ಈಶ್ವರಪ್ಪ


ರುದ್ರೇಗೌಡ


ಕೆ.ಬಿ. ಪ್ರಸನ್ನ

ಮುಂದೆ ಆತನಿಗೆ ಭವಿಷ್ಯವಿರಲಿದೆ. ಅದು ...ಾಗಬೇಕೆಂದರೆ ಆತ ಎಂಎಲ್ಎ ಆಗಿ ಇರಬೇಕೆ ... ಎಂಪಿಯಾಗಿ ಅಲ್ಲ. ಇನ್ನು ಎರಡನೇ ...ವಂದರೆ, ಯಡಿಯೂರಪ್ಪ ಈಗಾಗಲೇ ...ೊಗ್ಗ ಎಂಪಿ ಕದನಕ್ಕೆ ರುದ್ರೇಗೌಡ ಎಂಬ ... ಹರಕೆಯ ಕುರಿಯನ್ನು ರೆಡಿ ...ಕೊಂಡಿದ್ದಾರೆ. ಹಾಗಾಗಿ ರಾಘವೇಂದ್ರನನ್ನು ...ಾಗಿ ಪ್ರತಿಷ್ಠಾಪಿಸಲು ಹೊಸದೊಂದು ಕ್ಷೇತ್ರದ ...ಹಾಟದಲ್ಲಿದ್ದಾರೆ.

... ಮೊದಲು ಈಶ್ವರಪ್ಪನಿಗೆ ಶಿವಮೊಗ್ಗ ನಗರದ ... ತಪ್ಪಿಸಿ ಅದನ್ನು ತಮ್ಮ ಕುಟುಂಬದ ಕಬ್ಜಾ ...ಕೊಳ್ಳಲು ಯಡ್ಡಿ ಪ್ಲಾನ್ ಹಾಕಿದ್ದುಂಟು. ಇದರ ... ಪಿಡಿದ ಈಶ್ವರಪ್ಪ ಬ್ರಿಗೇಡ್ ಕಟ್ಟಿಕೊಂಡು ... ಕೊಟ್ಟ ತನ್ನ ಟಿಕೆಟ್ ಖಾತ್ರಿ ...ಕೊಂಡಿರೋದ್ರಿಂದ ಹೊಸ ಕ್ಷೇತ್ರ ಹುಡುಕುವ ...ರ್ಯತೆ ಎದುರಾಗಿದೆ. ಸದ್ಯ ಯಡ್ಡಿಯ ಕಣ್ಣು ... ರಾಣೆಬೆನ್ನೂರು ಕ್ಷೇತ್ರದ ಮೇಲೆ ಬಿದ್ದಿದೆ. ಸದ್ಯ ...ನ ಕೆ.ಬಿ.ಕೋಳಿವಾಡರು ಶಾಸಕರಾಗಿರುವ ಇಲ್ಲಿ ...ಗೆ ಹೇಳಿಕೊಳ್ಳುವಂತಹ ಮುಖವಿಲ್ಲ. 2013ರ ...ನಲ್ಲಿ ಬಿಜೆಪಿ ಇಲ್ಲಿಂದ ಗಳಿಸಿದ್ದು ಕೇವಲ ... ಮತಗಳನ್ನು ಮಾತ್ರ. ಹಾಗೆ ನೋಡಿದರೆ ...ಯ ಕೆಜೆಪಿಗೆ 26,570 ಮತಗಳು ...ಬಂದಿದ್ದವು. ಹಾಗಾಗಿ ಲಿಂಗಾಯತ ...ಟಕ್ಸ್‌ನ ಪ್ರಭಾವವಿರುವ ರಾಣೆಬೆನ್ನೂರಿನಿಂದ ...ನ್ನು ಅಭ್ಯರ್ಥಿಯಾಗಿಸಲು ಯಡಿಯೂರಪ್ಪ ...ರಿ ಮಾಡಿಕೊಳ್ಳುತ್ತಿದ್ದಾರೆ.

...ಗೆ ಕಾದಿದೆ ಮತ್ತೊಂದು ಸೋಲು!

...ಳೆದ ಚುನಾವಣೆಯಲ್ಲಿ ಯಡಿಯೂರಪ್ಪ-ಈಶ್ವರಪ್ಪ ...ಕುಸ್ತಿ ಮತ್ತು ಬ್ರಾಹ್ಮಣ ಮತಗಳ ಕಾಂಗ್ರೆಸ್ ...ಕರಣದಿಂದಾಗಿ ಅಚ್ಚರಿಯ ಫಲಿತಾಂಶವನ್ನು ...ದ್ದ ಶಿವಮೊಗ್ಗ ನಗರ ಕ್ಷೇತ್ರ ಈ ಸಲವೂ ...ರು ರಿಸಲ್ಟ್ ಕೊಡುವ ಸೂಚನೆ ...ಗಿಡವುತ್ತಿದೆ. ಈ ಕ್ಷೇತ್ರದಲ್ಲಿ ಲಿಂಗಾಯತರಷ್ಟೇ ...ಯಕ ಮತಗಳೆಂದರೆ ಅವು ಬ್ರಾಹ್ಮಣ ...ು. ಕೋಮುವಾದದ ಕಾರಣಕ್ಕೆ ಅವು ಬಿಜೆಪಿ ...ರುತ್ತಿದ್ದರಿಂದ ಈಶ್ವರಪ್ಪ ಮತ್ತೆಮತ್ತೆ ಗೆದ್ದು ...ದ್ದರು. ಆದರೆ ಯಾವಾಗ ಯಡಿಯೂರಪ್ಪ ...ಕಟ್ಟಿಕೊಂಡು ಹೊರನಡೆದು ರುದ್ರೇಗೌಡನಂತಹ ...ನನ್ನು ಕಣಕ್ಕಿಳಿಸಿದರೋ ಆಗ ಬ್ರಾಹ್ಮಣ ...ು ಒಂದು ಗುಪ್ತ ನಿರ್ಣಯಕ್ಕೆ ಬಂದು ...ವು. ತಾವು ಬಿಜೆಪಿಗೆ ಮತ ಹಾಕಿದರೂ ...ಯುತ ಮತಗಳು ಕೆಜೆಪಿಗೆ ಹೋಗೋದರಿಂದ ...ಪ್ಪ ಗೆಲ್ಲೋದು ಡೌಟು. ಹಾಗಿದ್ದ ಮೇಲೆ ... ಯಾಕೆ ಮತಗಳನ್ನು ವೇಸ್ಟ್ ...ೂಳ್ಳಬೇಕು. ಅದರ ಬದಲು ಕಾಂಗ್ರೆಸ್‌ನಿಂದ ...ವ ನಮ್ಮವನೇ ಆದ ಕೆ.ಬಿ. ಪ್ರಸನ್ನಕುಮಾರ್‌ಗೆ ...ಹಾಕಿ ಗೆಲ್ಲಿಸಿಕೊಂಡರೆ ನಮ್ಮವನೊಬ್ಬ ಶಾಸಕ ...ಗುತ್ತ ಎಂಬ ನಿರ್ಣಯ ಅದಾಗಿತ್ತು. ಅದೇ ... ಪ್ರಸನ್ನಕುಮಾರ್ ಕೆಜೆಪಿಯ ರುದ್ರೇಗೌಡರ ... ಕೇವಲ 200 ಚಿಲ್ಲರೆ ಮತಗಳ ...ನ್‌ನಲ್ಲಿ ಗೆಲ್ಲಲು ಸಾಧ್ಯವಾದದ್ದು.

...ಕಮಾಂಡ್ ಸಂಧಾನಕ್ಕೆ ಮಣಿದು ಈಶ್ವರಪ್ಪನಿಗೆ ... ಕೊಟ್ಟರೂ ಆತನನ್ನು ಸೋಲಿಸುವ ಫರ್ಮಾನೇ ...ಯೂರಪ್ಪನ ಅಂಗಳದಿಂದ ಹೊರಬೀಳುವುದರಲ್ಲಿ ...ನವೇ ಇಲ್ಲ. ಅದೂಅಲ್ಲದೆ ಕಾಂಗ್ರೆಸ್‌ನ ಹಾಲಿ ...ಕೆ.ಬಿ.ಪ್ರಸನ್ನಕುಮಾರ ತಮ್ಮ ಬ್ರಾಹ್ಮಣ ...ದರ ನಂಬುಗೆ ಗಿಟ್ಟಿಸಿಕೊಂಡಿದ್ದಾರೆ. ಜೊತೆಗೆ ...ವಿರುದ್ಧ ಕೆರಳಿರುವ ಮುಸ್ಲಿಂ ಮತಗಳನ್ನೂ ... ಸೆಳೆದುಕೊಂಡಿದ್ದಾರೆ. ಇನ್ನು ಸಿದ್ದು ಕಾರಣಕ್ಕೆ ...ಲು ಅಹಿಂದಾ ಮತಗಳು ಕಾಂಗ್ರೆಸ್‌ಗೇ ... ಬರಲಿವೆ. ಈಶ್ವರಪ್ಪ ಸೋಲಲು ಇದಕ್ಕಿಂತ ...ಬೇಕಾ?

...ಮಾಂತರದಲ್ಲಿ ಜೆಡಿಎಸ್ ಸ್ಟ್ರಾಂಗು

... ಮೊದಲು ಹೊಳೆಹೊನ್ನೂರು ಕ್ಷೇತ್ರವಾಗಿದ್ದ ...ಗ್ಗ ಗ್ರಾಮಾಂತರದಲ್ಲಿ ಸದ್ಯಕ್ಕಂತು ಹಾಲಿ ... ಶಾಸಕಿ ಶಾರದಾ ಪೂರ್ಯಾನಾಯ್ಕರದ್ದೇ ಮೇಲುಗೈ ಇದೆ. ಎಸ್ಸಿ ಮೀಸಲು ಕ್ಷೇತ್ರವಾಗಿರೋ ಇಲ್ಲಿ ಕಳೆದ ಸಲ ಶಾರದಾ ಗೆದ್ದದ್ದು ಸಿಂಪಥಿ ಅಲೆಯಲ್ಲಿ. ಅವರ ಗಂಡ ಪೂರ್ಯಾನಾಯ್ಕ ಕಾಂಗ್ರೆಸ್ ರಾಜಕಾರಣದಲ್ಲಿ ಹೆಸರು ಮಾಡಿದ್ದಾತ. ಹೊನ್ನಾಳಿ ಕ್ಷೇತ್ರದಲ್ಲಿ ಚಿರಪರಿಚಿತ ಮುಖ. ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದ ಟಿಕೆಟ್‌ಗಾಗಿ ಕಸರತ್ತು ನಡೆಸಿದ್ದ ಆತ ಹೈಕಮಾಂಡ್ ಎಡತಾಕಿ ಬಿಫಾರ್ಮ್ ತರಲು ದಿಲ್ಲಿಗೆ ಹೋಗಿದ್ದ. ಆದರೆ ಟಿಕೆಟ್ ಹಳೇ ಹುಲಿ ಕರಿಯಣ್ಣನ ಪಾಲಾಯ್ತು. ವಾಪಸಾಗುವ ದಾರಿ ಮಧ್ಯದಲ್ಲೇ ಅಪಘಾತವಾಗಿ ಪೂರ್ಯಾನಾಯ್ಕ ಶಿವನಪಾದ ಸೇರಿದ್ದ. ಈ ಸಿಂಪಥಿಯನ್ನು ವರ್ಕ್‌ಔಟ್ ಮಾಡಿಕೊಳ್ಳುವ ಸಲುವಾಗಿ ಆತನ ಮಡದಿ ಶಾರದಮ್ಮನಿಗೆ ಟಿಕೆಟ್ ಕೊಟ್ಟು ಕಣಕ್ಕಿಳಿಸಿದ ಜೆಡಿಎಸ್‌ನ ಲೆಕ್ಕಾಚಾರ ತಪ್ಪಾಗಲಿಲ್ಲ.

ಕಳೆದ ಚುನಾವಣೆಯಲ್ಲಿ ಕೆಜೆಪಿಯಿಂದ ಸ್ಪರ್ಧಿಸಿದ್ದ ಜಿ. ಬಸವಣ್ಣೆಪ್ಪ ಎರಡನೇ ಸ್ಥಾನ ಗಳಿಸಿದ್ದರು. ಈ ಸಲ ಕೆಜೆಪಿ, ಬಿಜೆಪಿ ಒಂದಾಗಿರೋದ್ರಿಂದ ಗೆಲುವಿನ ರುಚಿ ನೋಡಲು ಕೇಸರಿ ಪಾಳೆಯ ತುದಿಗಾಲಲ್ಲಿ ನಿಂತಿದೆ. ಆದರೆ ಹಾಲಿ ಶಾಸಕಿ ಶಾರದಮ್ಮನ ಜನಪ್ರಿಯತೆ ಮುಂದೆ ಆ ಕನಸು ಈಡೇರುವುದು ಡೌಟು ಎನ್ನುವ ವಾತಾವರಣವಿದೆ. ಸದಾ ಕ್ಷೇತ್ರದ ಮತದಾರರೆದುರು ಕಾಣಿಸಿಕೊಳ್ಳುವ, ಕೈಗೆ ಸಿಗುವ, ಜನರಿಗೆ ಸ್ಪಂದಿಸುವ ಸರಳತನ 2018 ಮತ್ತೆ ಆಕೆಗೆ ಶುಭವಾರ್ತೆ ನೀಡುವ ಲಕ್ಷಣವಿದೆ. ಇನ್ನು ಕಾಂಗ್ರೆಸ್‌ನಲ್ಲಿ ಅಭ್ಯರ್ಥಿಗಳ ಕೊರತೆ ಎದ್ದು ಕಾಣುತ್ತಿದೆ. ಕಳೆದ ಸಲ ನಿಂತು ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟ ವೃದ್ಧ ರಾಜಕಾರಣಿ ಕರಿಯಣ್ಣನಿಗೆ ಟಿಕೆಟ್ ಸಿಗುವುದು ಹೆಚ್ಚೂಕಮ್ಮಿ ಅನುಮಾನ. ಹಾಗಾಗಿ ಹೊಸ ಮುಖಗಳಿಗೆ ತಲಾಷ್ ನಡೆಯುತ್ತಿದೆ.

ರವಿಕುಮಾರ, ಪಲ್ಲವಿ, ಬಲದೇವ ಕೃಷ್ಣ ಎಂಬ ಮೂರು ಹೆಸರುಗಳು ಕೈ ಪಾಳಯದಲ್ಲಿ ಹರಿದಾಡುತ್ತಿವೆ. ಎಸ್ಸಿ ಮೀಸಲು ಕ್ಷೇತ್ರವಾದ ಇಲ್ಲಿ ಮಾದಿಗ ಮತಗಳೇ ನಿರ್ಣಾಯಕ. ಟಿಕೆಟಿಗಾಗಿ ಪ್ರಯತ್ನಿಸುತ್ತಿರುವ ರವಿಕುಮಾರ ಬೋವಿ ಸಮುದಾಯಕ್ಕೆ ಸೇರಿದವನು. ಇಲ್ಲಿ ಬೋವಿ ಮತಗಳು ತುಂಬಾ ಕಮ್ಮಿ. ಇದು ಅವನಿಗೆ ಟಿಕೆಟ್ ತಪ್ಪಿಸಬಹುದು. ಇನ್ನು ಪಲ್ಲವಿ ಮಾದಿಗ ಸಮುದಾಯದವರಾಗಿದ್ದು ಜೆಡಿಎಸ್‌ನ ಹಾಲಿ ಶಾಸಕಿ ವಿರುದ್ಧ ಮತ್ತೊಬ್ಬ ಮಹಿಳೆಯನ್ನು ಕಣಕ್ಕಿಳಿಸುವ ಸಾಹಸಕ್ಕೆ ಕಾಂಗ್ರೆಸ್ ಕೈ ಹಾಕಬಹುದಾದರು ಅದಕ್ಕೆ ಮಾಜಿ ಜಿಲ್ಲಾಧಿಕಾರಿ ಬಲದೇವ ಕೃಷ್ಣ ಅಡ್ಡಗಾಲು ಹಾಕಬಹುದು. ಐಎಎಸ್ ಹುದ್ದೆಯಲ್ಲಿ ನೌಕರಿಗಿಂತ ರಾಜಕಾರಣಕ್ಕೇ ಹೆಚ್ಚು ಸಮಯ ಮೀಸಲಿಟ್ಟ ಈತ ಚುನಾವಣೆಗೆಂದೇ ಭರ್ಜರಿ ರೊಕ್ಕ ಮಾಡಿದವ. ಕೈ ಪಡಸಾಲೆಯಲ್ಲಿ ರೊಕ್ಕದ ಬಲ ಪ್ರದರ್ಶನಕ್ಕಿಳಿದಿರುವ ಈತ ಟಿಕೆಟ್ ಖರೀದಿಸುವ ಉಮೇದಿಯಲ್ಲಿದ್ದಾನೆ. ಹಾಗೊಮ್ಮೆ ಹಣಬಲಕ್ಕೆ ಕಾಂಗ್ರೆಸ್ ಮಣೆಹಾಕಿದರೆ ಆತ ಅಭ್ಯರ್ಥಿಯಾಗಬಲ್ಲ. ಆತನ ಹಣ ಶಾಸಕಿ ಶಾರದಾರ ಜನಪ್ರಿಯತೆಯನ್ನು ಓವರ್‌ಟೇಕ್ ಮಾಡುವುದು ಡೌಟಿನ ವಿಷಯವಾದರೂ ಕುರುಡು ಕಾಂಚಾಣದ ಆಟ ಏನು ಬೇಕಾದರು ಮಾಡಬಹುದು.

ಭದ್ರಾವತಿಯ ಲಾಕೌಟ್ ರಾಜಕಾರಣ

ಕಳೆದ ಚುನಾವಣೆಯಲ್ಲಿ ಸಿದ್ದರಾಮಯ್ಯನ ಮಿತ್ರ ವ್ಯಾಮೋಹದಿಂದಾಗಿ ಭದ್ರಾವತಿ 'ಕೈ'ಬಿಟ್ಟು ಹೋಗಿತ್ತು. ಹಾಲಿ ಕೈ ಶಾಸಕ ಸಂಗಮೇಶ್‌ಗೆ ಟಿಕೆಟು ತಪ್ಪಿಸಿದ ಸಿದ್ದರಾಮಯ್ಯ ಜನತಾ ಪರಿವಾರದ ಮಿತ್ರ ಸಿ.ಎಂ.ಇಬ್ರಾಹಿಂಗೆ ಟಿಕೆಟು ಕೊಡಿಸಿದ್ದರು. ಇಬ್ರಾಹಿಂನ ಅಣ್ತಮ್ಮಂದಿರ ಕುಟುಂಬ ಭಾನ್ಗಡಿಯನ್ನು ಮರೆತಿರದ ಜನ ಇಬ್ರಾಹಿಂಗೆ ಬೆನ್ನುಮಾಡಿ ಜೆಡಿಎಸ್‌ನ ಅಪ್ಪಾಜಿಗೌಡನಿಗೆ ಮತ ಒತ್ತಿದ್ದರು. ಇಬ್ರಾಹಿಂ ಬರೋಬ್ಬರಿ 50,000 ಮತಗಳ ಅಂತರದಿಂದ ಸೋತದ್ದು ಆತನಿಗಿರುವ ಜನಪ್ರಿಯತೆ ಸಾಕ್ಷಿ! ಇಬ್ರಾಹಿಂ ಕೇವಲ 22,329 ಮತ ಗಳಿಸಿದರೆ, ಟಿಕೆಟ್ ತಪ್ಪಿದ ಸಿಟ್ಟಿಗೆ ಬಂಡಾಯವೆದ್ದು ಪಕ್ಷೇತರನಾಗಿ ಸ್ಪರ್ಧಿಸಿದ್ದ ಸಂಗಮೇಶ್ 34,271 ಮತ ಗಳಿಸಿದ್ದ!!

ಭದ್ರಾವತಿಯಲ್ಲಿ ಬಿಜೆಪಿ ರಾಜಕಾರಣಕ್ಕೆ ಅಸ್ತಿತ್ವವೇ ಇಲ್ಲ. ಇಲ್ಲೇನಿದ್ದರೂ ಕಾಂಗ್ರೆಸ್ ಮತ್ತು ಜನತಾ ಪರಿವಾರದ ನಡುವೆ ಕದನವಷ್ಟೆ. ಕ್ಷೇತ್ರದ ಆರ್ಥಿಕ ಜೀವನಾಡಿಯಂತಿದ್ದ ವಿಶ್ವೇಶ್ವರಯ್ಯ ಕಬ್ಬಿಣ ಕಾರ್ಖಾನೆ ಮತ್ತು ಎಂಪಿಎಂ ಪೇಪರ್ ಕಾರ್ಖಾನೆಗಳು ನೆಲಕಚ್ಚಿದ್ದು ಭದ್ರಾವತಿಯನ್ನು ದಿವಾಳಿಯಂಚಿಗೆ ತಳ್ಳುತ್ತಿವೆ. ಇದನ್ನೇ ಬಂಡವಾಳ ಮಾಡಿಕೊಂಡು ಇಲ್ಲಿ ಬೇರೂರಲು ಬಿಜೆಪಿ ಯತ್ನಿಸುತ್ತಿದೆ. ಕಂಪನಿಗಳ ಸಮಸ್ಯೆಯನ್ನು ಕಾರ್ಮಿಕರ ನಡುವೆ ಚರ್ಚೆಗೆ ತಂದು, ಹಾಲಿ ಮತ್ತು ಹಿಂದಿನ ಶಾಸಕರ ಹೊಣೆಗೇಡಿತನವೇ ಇದಕ್ಕೆ ಕಾರಣ ಎಂಬ ಪ್ರಚಾರದ ಮೂಲಕ ಧರ್ಮಪ್ರಸಾದ್ ಎಂಬ ಚೆಡ್ಡಿಯನ್ನು ನಾಟಿ ಮಾಡಲು ಕೇಸರಿ ಪಡೆ ಕಸರತ್ತು ನಡೆಸುತ್ತಿದೆ. ಅಸಲಿ ಸಂಗತಿಯೇನೆಂದರೆ ಇವೆರಡು ಕಾರ್ಖಾನೆಗಳು ದುಸ್ಥಿತಿಗೆ ತಲುಪಲು ಬಿಜೆಪಿಯೇ ಕಾರಣ. ತಾನು ಅಧಿಕಾರದಲ್ಲಿದ್ದಾಗ ಗಣಿ ರೆಡ್ಡಿಗಳ ವ್ಯವಹಾರಕ್ಕೆ ಅನುಕೂಲ ಮಾಡಿಕೊಡಲೆಂದು ಕಂಡಕಂಡ ಗಣಿ ಗುತ್ತಿಗೆಯನ್ನೆಲ್ಲ ಅವರಿಗೇ ಕೊಟ್ಟಿದ್ದರಿಂದ ಸರ್ಕಾರಿ ಕಬ್ಬಿಣದ ಕಾರ್ಖಾನೆಗೆ ಅದಿರು ಇಲ್ಲದೆ ಅದು ಸೊರಗಬೇಕಾಯ್ತು. ಇನ್ನು ಬಿಜೆಪಿಯ ಆರಗ ಜ್ಞಾನೇಂದ್ರನೇ ಎಂಪಿಎಂ ಕಾರ್ಖಾನೆಯ ಅಧ್ಯಕ್ಷನಾಗಿದ್ದಾಗ ಅದರ ಏಳ್ಗೆಗೆ ಏನೂ ಮಾಡದೆ ಪೇಪರ್ ಫ್ಯಾಕ್ಟರಿಯ ಶವಪೆಟ್ಟಿಗೆಗೆ ಕೊನೆ ಮೊಳೆ ಹೊಡೆದದ್ದು ಕೂಡಾ ಬಿಜೆಪಿ. ಹೀಗಿದ್ದರೂ ಈಗ ಕಾರ್ಖಾನೆಗಳ ಅವನತಿಯನ್ನು ಪೊಲಿಟಿಕ್ಸ್‌ಗೆ ಲಿಂಕ್ ಮಾಡಿ ಭದ್ರಾವತಿಯಲ್ಲಿ ಅಸ್ತಿತ್ವ ಹುಡುಕುವ ಹಗಲುಗನಸು ಕಾಣುತ್ತಿದೆ. ಇನ್ನು ಇದೇ ವಿಚಾರವನ್ನು ಮುಂದಿಟ್ಟುಕೊಂಡು ಹಾಲಿ ಶಾಸಕ ಅಪ್ಪಾಜಿಗೌಡ ಮತ್ತು ಮಾಜಿ ಶಾಸಕ ಸಂಗಮೇಶ್ ಪರಸ್ಪರ ಕೆಸರೆರಚಾಟ ನಡೆಸುತ್ತಿದ್ದರೆ ಇಬ್ರಾಹಿಂ ಸಾಹೇಬರು ಫ್ರೇಮ್‌ನಲ್ಲೇ ಇಲ್ಲದೆ ನಾಪತ್ತೆಯಾಗಿದ್ದಾರೆ.

ಸಾಗರ-ಸೊರಬದಲ್ಲಿ ಪಕ್ಷಾಂತರಿ ಗೋಜಲು

ಸಾಗರ-ಸೊರಬ ಕ್ಷೇತ್ರಗಳ ಟಿಕೆಟ್ ಹಂಚಿಕೆಯಲ್ಲಿ ಪಕ್ಷಾಂತರಿ ಪರ್ವದ ಗೋಜಲು ಕಾಣಿಸುತ್ತಿದೆ. ಯಾಕೆಂದರೆ ಕಳೆದ ಸಲ ಸಾಗರದ ಜೆಡಿಎಸ್ ಅಭ್ಯರ್ಥಿಯಾಗಿದ್ದ ಬೇಳೂರು ಗೋಪಾಲಕೃಷ್ಣ ಬಿಜೆಪಿಗೆ ಬಂದಿದ್ದಾರೆ. ಅದೇರೀತಿ ಸೊರಬದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಕುಮಾರ್ ಬಂಗಾರಪ್ಪನೂ ಬಿಜೆಪಿ ಪಡಸಾಲೆಯಲ್ಲಿ ನೆಲೆ ಕಂಡುಕೊಂಡಿದ್ದಾರೆ. ಇದರಿಂದಾಗಿ ಬಿಜೆಪಿ ಟಿಕೆಟ್ ಹಂಚಿಕೆಯಲ್ಲಿ ಒಂದಷ್ಟು ಗೊಂದಲಗಳು ತಲೆಯೆತ್ತಿವೆ. ಈ ಹಿಂದೆ ತನ್ನ ಅಪ್ಪ ಬಂಗಾರಪ್ಪ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದಾಗ ಕಾಂಗ್ರೆಸ್‌ನಲ್ಲೇ ಉಳಿದು ಪಕ್ಷನಿಷ್ಠೆ ಮೆರೆದು ಕುಟುಂಬ ಕಂದಕಕ್ಕೆ ಕಾರಣವಾಗಿದ್ದ ಕುಮಾರ ಈಗ ಬಿಜೆಪಿಗೆ ಹೋಗಿರೋದು ಟಿಕೆಟ್ ಖಾತ್ರಿಯ ಮೇಲೆ. ಹಾಗಾಗಿ ಸೊರಬದ ಬಿಜೆಪಿ ಟಿಕೆಟ್ ಕುಮಾರನಿಗೆ ಒಲಿಯಲಿದೆ.

ಹಾಗಾದಾಗ ಯಡ್ಡಿಯ ಪರಮ ಅನುಯಾಯಿ ಪರಸತಿಸಂಗದ ಗೆಂಡೆತಿಮ್ಮ ಹರತಾಳು ಹಾಲಪ್ಪನಿಗೆ ಬೇರೆ ಕಡೆ ಟಿಕೆಟ್ ಹೊಂದಾಣಿಕೆ ಮಾಡಬೇಕಾಗುತ್ತೆ. ಆತನನ್ನು ಸೊರಬದಿಂದ ತಂದು ಸಾಗರದಲ್ಲಿ ಕಸಿ ಮಾಡಲು ಯಡಿಯೂರಪ್ಪ ತಂತ್ರ ರೂಪಿಸಿದ್ದಾರೆ ಎಂಬ ಮಾತುಗಳಿವೆ. ಆಗ ಸಹಜವಾಗಿಯೇ ಸಾಗರದ ಬೇಳೂರು ಗೋಪಾಲಕೃಷ್ಣನಿಗೆ ಬಿಜೆಪಿ ಟಿಕೆಟ್ ತಪ್ಪಲಿದೆ. ಅದರ ಬಗ್ಗೆ ಯಡ್ಡಿ ಹೆಚ್ಚೇನು ತಲೆ ಕೆಡಿಸಿಕೊಳ್ಳುವುದಿಲ್ಲ. ಯಾಕೆಂದರೆ ಈ ಬೇಳೂರು ಯಾವತ್ತೂ ಯಡ್ಡಿಯ ಬೆಂಬಲಿಗನಾಗಿ ನಿಂತವನೇ ಅಲ್ಲ. ಬಿಜೆಪಿ ಸರ್ಕಾರವಿದ್ದಾಗ ರೇಣುಕಾಚಾರ್ಯನ ಜೊತೆ ಸೇರಿ ಮಂತ್ರಿಗಿರಿಗಾಗಿ ರೆಸಾರ್ಟ್ ರಾಜಕಾರಣದ ಬ್ಲ್ಯಾಕ್‌ಮೇಲ್ ಮಾಡಿ ತಲೆತಿಂದಿದ್ದ ಈತ ಬಿಜೆಪಿ ಇಬ್ಭಾಗವಾದಾಗ ಎರಡನ್ನೂ ಬಿಟ್ಟು ಮೂರನೆಯ ಜೆಡಿಎಸ್ ತೆನೆ ಹೊತ್ತಿದ್ದ. ಇಂಥಾ ಸಮಯಸಾಧಕನ ಕೈಗೆ ತಾಮ್ರದ ಚೊಂಬು ಕೊಡಲು ಯಡ್ಡಿಗೆ ಯಾವ ಮುಲಾಜೂ ಇದ್ದಂತಿಲ್ಲ. ಹಾಗಾಗಿ ಸೊರಬದಲ್ಲಿ ಜೆಡಿಎಸ್‌ನ ಮಧು ಬಂಗಾರಪ್ಪ ವಿರುದ್ಧ ಕುಮಾರನನ್ನು ಕಣಕ್ಕಿಳಿಸಿ ಸಹೋದರರ ಸವಾಲ್‌ನ ಮಜಾ ನೋಡಿದರೆ, ಸಾಗರದಲ್ಲಿ ಕಾಗೋಡು ತಿಮ್ಮಪ್ಪನ ಎದುರು ರೇಪಿಸ್ಟ್ ಆಪಾದಿತ ಹಾಲಪ್ಪನನ್ನು ಅಖಾಡಕ್ಕೆ ತಳ್ಳುವುದು ಯಡ್ಡಿಯ ಪ್ಲಾನು.

ಇನ್ನು ಮುಂದಿನ ಎಲೆಕ್ಷನ್‌ಗೆ ಸಾಗರದಲ್ಲಿ ವೃದ್ಧ ಕಾಗೋಡು ತಿಮ್ಮಪ್ಪನವರೇ ನಿಲ್ಲುತ್ತಾರೊ ಅಥವಾ ತಮ್ಮ ಮಗಳು ಡಾ. ನಂದಿನಿಯನ್ನು ಅಭ್ಯರ್ಥಿಯಾಗಿಸುತ್ತಾರೊ ಎಂಬ ಬಗ್ಗೆ ಸ್ಪಷ್ಟತೆಗಳಿಲ್ಲ. ಮಗಳ ರಾಜಕಾರಣವನ್ನು ಕಾಗೋಡು ತಳ್ಳಿಹಾಕಿದರೂ ಸ್ಥಳೀಯ ಕಾರ್ಯಕ್ರಮಗಳಲ್ಲಿ ನಂದಿನ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದು ಗುಸುಗುಸು ಚರ್ಚೆ ಹುಟ್ಟುಹಾಕಿದೆ. ಸಮಾಜವಾದಿ ಸಿದ್ಧಾಂತಿಯಂತೆ ಮಾತನಾಡುವ ಕಾಗೋಡು ತಿಮ್ಮಪ್ಪನ ಸರ್ವಾಧಿಕಾರಿ ವರಸೆ ಕ್ಷೇತ್ರದ ಮತದಾರರಿಗೆ ಬೇಸರ ತರಿಸಿರುವುದು ಸುಳ್ಳಲ್ಲ. ಕಂದಾಯ ಮಂತ್ರಿಯಾದ ಮೇಲೆ ಬಗರ್‌ಹುಕುಂ ವಿಷಯದಲ್ಲಿ ಕಾಗೋಡು ಸದ್ದು ಮಾಡುತ್ತಿದ್ದಾರಾದರು ಅದು ಶ್ರೀಮಂತ ದೀವರ ಪಾಲಿಗೆ ಅನುಕೂಲವಾಗುವ ಅಜೆಂಡಾ ಎಂಬುದು ಬಡ ಕೃಷಿಕರಿಗೆ ಅರ್ಥವಾಗಿಹೋಗಿದೆ. ಅಲ್ಲದೇ ಜಿಲ್ಲೆಯ ದಿಗ್ಗಜ ರಾಜಕಾರಣಿ ಬಂಗಾರಪ್ಪನ ಇಬ್ಬರು ಪುತ್ರರ ನಡುವೆ ಜಗಳ ಭುಗಿಲೇಳುವಂತೆ ಮಾಡುತ್ತಿರುವುದರ ಹಿಂದೆಯೂ ಕಾಗೋಡು ಕೈವಾಡವಿದೆ ಎಂಬ ಪ್ರಚಾರವೂ ಜೋರಾಗಿಯೇ ಹರಡುತ್ತಿದೆ.

ಅದೇನೇ ಇರಲಿ, ಎದುರಾಳಿಯಾಗಿ ಬಿಜೆಪಿಯಿಂದ ಹರತಾಳು ಹಾಲಪ್ಪ ನಿಂತರೆ ಕಾಗೋಡು ಅಥವಾ ಅವರ ಮಗಳ ಗೆಲುವು ಸುಲಭವಾಗುವುದರಲ್ಲಿ ಅನುಮಾನವೇ ಇಲ್ಲ. ಯಾಕೆಂದರೆ ಟಿಕೆಟ್ ತಪ್ಪಿದ ಸಿಟ್ಟಿಗೆ ಕಾಗೋಡು ತಿಮ್ಮಪ್ಪನ ಸೋದರಳಿಯ ಬೇಳೂರು ಗೋಪಾಲಕೃಷ್ಣ ಬಂಡಾಯ ಸ್ಪರ್ಧೆಯೊಡ್ಡಿ ಬಿಜೆಪಿ ಮತಗಳನ್ನು ಛಿದ್ರ ಮಾಡಲಿದ್ದಾನೆ. ಹತಾಶ ಗೋಪಾಲನ ಪಾಳೆಯದಿಂದ ಅಂತಹುದೇ ವರ್ತಮಾನ ತೇಲಿಬರುತ್ತಿದೆ.

ತೀರ್ಥಹಳ್ಳಿಗೆ ಕಿಮ್ಮನೆಯೇ ಕಿಂಗು


ತೀರ್ಥಹಳ್ಳಿ ಮಟ್ಟಿಗೆ ಕಿಮ್ಮನೆ ರತ್ನಾಕರ್ ಕಾರಣಕ್ಕೆ ಕೈ ಪಾರ್ಟಿಯ ಗೆಲುವು ತುಂಬಾ ಸುಲಭ. ಮಾಜಿ ಮಂತ್ರಿ ಕಿಮ್ಮನೆಯ ನಿಷ್ಕಳಂಕ ರಾಜಕಾರಣ ತೀರ್ಥಹಳ್ಳಿ ಮತದಾರನಿಗೆ ಇಷ್ಟವಾಗಿದೆ. ಮಂತ್ರಿಗಿರಿ ಕಳೆದುಕೊಂಡಾಗಲೂ ಅವರು ತೋರಿದ ಮುತ್ಸದ್ದಿತನದ ಮುಂದೆ ಬಿಜೆಪಿಯ ಆರಗ ಜ್ಞಾನೇಂದ್ರನ ಐಲಾಟಗಳು ಬರ್ಕತ್ತಾಗುವುದಿಲ್ಲ. ನಂದಿತಾ ಆತ್ಮಹತ್ಯೆ ಪ್ರಕರಣಕ್ಕೆ ಕೋಮುಬಣ್ಣ ಬಳಿದು ಎಳೆದಾಡಿದ ಆರಗನ ರೊಚ್ಚೆಯನ್ನು ಕಂಡು ರೋಸಿಹೋಗಿರುವ ಮತದಾರ ಬಿಜೆಪಿಯ ಅಸ್ತಿತ್ವವನ್ನೇ ಅಳಿಸಿಹಾಕಿದ್ದಾನೆ. ಸಾಮಾನ್ಯರ ಕೈಗೆ ಸುಲಭವಾಗಿ ಎಟುಕುವ ಸರಳ ವ್ಯಕ್ತಿತ್ವದ ಕಿಮ್ಮನೆಯ ಎದುರು ಬಿಜೆಪಿ ಏನೇ ಕಸರತ್ತು ಮಾಡಿದರು ಗೆಲುವು ದೂರದ ಮಾತು.


■ ಟಿ.ಎನ್.ಷಣ್ಮುಖ



ಡಾ. ನಂದಿನಿ


ಬೇಳೂರು ಗೋಪಾಲಕೃಷ್ಣ


ಹರತಾಳ್ ಹಾಲಪ್ಪ


ಕಾಗೋಡು ತಿಮ್ಮಪ್ಪ


ಕುಮಾರ್ ಬಂಗಾರಪ್ಪ



ಮಧು ಬಂಗಾರಪ್ಪ


ಕಿಮ್ಮನೆ ರತ್ನಾಕರ್


ಆರಗ ಜ್ಞಾನೇಂದ್ರ



ಶಾರದಾ ಪೂರ್ಯಾನಾಯ್ಕ

ಮೋದಿ ಸರ್ಕಾರದ ಯದ್ವಾತದ್ವಾ ವಿದೇಶಾಂಗ ನೀ



ಇದುವರೆಗೆ ಅನುಸರಿಸಿಕೊಂಡು ಬಂದಿರುವ ತನ್ನ ಅನನ್ಯ ವಿದೇಶಾಂಗ ನೀತಿಯ ಫಲವಾಗಿ ಭಾರತ ದಕ್ಷಿಣ ವಿಶ್ವದಲ್ಲಿ (ಆಫ್ರಿಕಾ, ಲ್ಯಾಟಿನ್ ಅಮೆರಿಕ ಮತ್ತು ಮಧ್ಯಪ್ರಾಚ್ಯ ಸೇರಿದಂತೆ ಏಷಿಯದ ಅಭಿವೃದ್ಧಿಶೀಲ ರಾಷ್ಟ್ರಗಳು; ತೃತೀಯ ಜಗತ್ತು) ಒಂದು ಪ್ರಮುಖ ಸ್ವತಂತ್ರ ಧ್ವನಿಯಾಗಿ ಹೊರಹೊಮ್ಮಿತ್ತು. ಆದರೆ ಮೋದಿ ಸರ್ಕಾರದ ಮೂರು ವರ್ಷಗಳ ಆಡಳಿತ ಭಾರತದ ವಿದೇಶಾಂಗ ನೀತಿಯನ್ನು ದೊಡ್ಡದೊಂದು ಗೊಂದಲದ ಗೂಡಾಗಿಸಿದೆ. ಬಹು ಎಚ್ಚರಿಕೆಯಿಂದ ರೂಪಿಸಿ ಬಹು ಜತನದಿಂದ ಕಾಪಾಡಿಕೊಂಡು ಬಂದಂತಹ ಹಿಂದಿನ ನೀತಿಯನ್ನು ಕಸದಬುಟ್ಟಿಗೆಸೆದಿರುವ ಮೋದಿ ಸರ್ಕಾರ ಇಂದು ಭಾರತವನ್ನು ಅಮೆರಿಕ, ಇಸ್ರೇಲ್‌ಗಳಿಗೆ ಒತ್ತೆ ಇಟ್ಟಿದೆ. ಮತ್ತೊಂದು ಕಡೆ ನಮ್ಮ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಚೀನಾ ಮತ್ತು ನೇಪಾಳಗಳ ವಿಷಯದಲ್ಲಿ ಸಾಕಷ್ಟು ಯೋಚಿಸದೆ, ಸರಿಯಾದ ಪೂರ್ವತಯಾರಿಗಳಿಲ್ಲದೆ ಕೆಲವೊಂದು ಉಪಕ್ರಮಗಳನ್ನು ಕೈಗೊಂಡುದರ ಪರಿಣಾಮವಾಗಿ ಆ ಮೂರೂ ದೇಶಗಳ ಜತೆಗಿನ ಸಂಬಂಧಗಳು ತೀರ ಹದಗೆಟ್ಟಿವೆ. ಸಾಲದುದಕ್ಕೆ ಮೋದಿ ಸರ್ಕಾರ ಇಂದು ದೊಡ್ಡ ಸದ್ದುಗದ್ದಲಗಳೊಂದಿಗೆ ಸೇನಾಬಲದ ಪ್ರದರ್ಶನ ಮಾಡುತ್ತಾ ಯುದ್ಧಕ್ಕೆಳಸುವ ಹಾಗೆ ತೋರಿಸಿಕೊಳ್ಳುತ್ತಿದೆ. ಆದರೆ ಸಣ್ಣಪುಟ್ಟ ದೇಶಗಳು ಭಾರತದ ಮಿಲಿಟರಿ ಬೆದರಿಕೆಗಳಿಗೆ ಜಗ್ಗುತ್ತವೆಂದು ಭಾವಿಸುವುದು ಅಜ್ಞಾನದ ಪರಮಾವಧಿ. ಭಾರತದ ವಿಫಲ ನೀತಿಗಳ ಪರಿಣಾಮವಾಗಿ ಇಂದು ಆ ಮೂರೂ ನೆರೆ ರಾಷ್ಟ್ರಗಳು ಭಾರತದಿಂದ ಭಾರಿ ದೂರ ಸರಿದಿವೆ. ಮಗುದೊಂದು ಕಡೆ ದಿಲ್ಲಿ ಸೇರಿದಂತೆ ದೇಶದ ವಿವಿಧೆಡೆ ಆಫ್ರಿಕದ ವಿದ್ಯಾರ್ಥಿಗಳ ಮೇಲೆ ನಡೆದ ಜನಾಂಗ ದ್ವೇಷದ ಹಲ್ಲೆಗಳಿಗೆ ಮೋದಿ ಸರ್ಕಾರದ ಹೃದಯಹೀನ, ಅಸಭ್ಯ ಪ್ರತಿಕ್ರಿಯೆಯಿಂದಾಗಿ ಆಫ್ರಿಕಾದ ರಾಷ್ಟ್ರಗಳೊಂದಿಗಿನ ಸಂಬಂಧಗಳೂ ಕೆಟ್ಟುಹೋಗಿವೆ. ಇವೆಲ್ಲವೂ ದೀರ್ಘಕಾಲೀನ ಪರಿಣಾಮಗಳನ್ನು ಉಂಟುಮಾಡುವಂತಹ ಪ್ರಕ್ರಿಯೆಗಳಾಗಿವೆ. ಒಟ್ಟಾರೆಯಾಗಿ ನೋಡಿದರೆ ಜಗತ್ತಿನ ದೃಷ್ಟಿಯಲ್ಲಿ ಭಾರತವನ್ನು ಪಾಕಿಸ್ತಾನದ ಮಟ್ಟಕ್ಕೆ ಇಳಿಸಿರುವುದೆ ಮೋದಿ ಸರ್ಕಾರದ 'ಸಾಧನೆ' ಎನ್ನಬಹುದು.

2014ರಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರದಲ್ಲಿ ಆಡಿಗಡಿಗೆ ವಿದೇಶಗಳಿಗೆ ಭೇಟಿ ನೀಡುವುದು ಮೋದಿಯ ವೈಶಿಷ್ಟವಾಗಿಬಿಟ್ಟಿದೆ. ಇದರ ಪ್ರಧಾನ ಉದ್ದೇಶ ತನ್ನನ್ನು ತಾನು ವೈಭವೀಕರಿಸುವುದರೊಂದಿಗೆ ಫೇಸ್‌ಬುಕ್, ಟ್ವಿಟರ್‌ಗಳಲ್ಲಿ ತನ್ನ ತಥಾಕಥಿತ ಸಾಧನೆಗಳನ್ನು ಕೊಚ್ಚಿಕೊಳ್ಳುತ್ತಾ ಹೆಚ್ಚೆಚ್ಚು ಮತದಾರರನ್ನು ತನ್ನ ತೆಕ್ಕೆಗೆ ಸೆಳೆದುಕೊಳ್ಳುವುದಾಗಿದೆ ಎಂದೇ ತೋರುತ್ತಿದೆ. ವಿದೇಶಾಂಗ ಮಂತ್ರಿಯನ್ನು ಮೂಲೆಗೊತ್ತಿ ತಾನೇ ಖುದ್ದು ವಿದೇಶಗಳಿಗೆ ಭೇಟಿ ನೀಡುವುದನ್ನು ಇನ್ನಾವ ರೀತಿಯಲ್ಲಿ ವಿಶ್ಲೇಷಿಸಬಹುದು? ವಿದೇಶಗಳ ಆಗ್ರ ನಾಯಕರನ್ನು ತಬ್ಬಿಕೊಳ್ಳುವ ಚಟಕ್ಕೆ ಬಿದ್ದಿರುವ ಮೋದಿ ಇಂತಹ ಆಲಿಂಗನಗಳ ಮೂಲಕ ಸ್ವದೇಶದಲ್ಲಿರುವ ತನ್ನ ಭಕ್ತರಿಗೆ ತಾನೂ ವಿದೇಶಿ ನಾಯಕರಿಗೆ ಸರಿಸಮನಾದ ಓರ್ವ ಜಾಗತಿಕ ಮಟ್ಟದ ನಾಯಕ ಎಂದು ತೋರಿಸಿಕೊಳ್ಳಲು ಯತ್ನಿಸುತ್ತಿರುವಂತಿದೆ. ಅತ್ತ ವಿದೇಶಗಳಲ್ಲಿ ಸಿಕ್ಕಿಹಾಕಿಕೊಂಡ ಭಾರತೀಯರನ್ನು ಬಚಾಯಿಸುವುದಷ್ಟಕ್ಕೆ ಸೀಮಿತವಾಗಿರುವಂತಿರುವ ಬಡಪಾಯಿ ವಿದೇಶಾಂಗ ಮಂತ್ರಿಯ ಪಾಡನ್ನು ಕಂಡು ಯಾರಿಗಾದರೂ ಅನುಕಂಪ ಉಕ್ಕಿಬರದಿರದು! ಮೋದಿ ವಿದೇಶ ಸಚಿವಾಲಯವನ್ನು ಪೂರ್ತಿಯಾಗಿ ಕಡೆಗಣಿಸಿ ವೃತ್ತಿಪರ ರಾಜತಂತ್ರಜ್ಞರನ್ನು ಮೂಲೆಗೆ ತಳ್ಳಿದ್ದಾನೆ. ಪರಿಣಾಮವಾಗಿ ಇಂದು ವಿದೇಶೀ ನಾಯಕರೊಂದಿಗಿನ ಮಾತುಕತೆಗಳಿಗೆ ಮುನ್ನ ಯಾವುದೇ ಪೂರ್ವಸಿದ್ಧತೆಗಳು ಆಗುತ್ತಿಲ್ಲ. ಮೋದಿಯ ವಿದೇಶ ಭೇಟಿಗಳ ವೇಳೆ ಗಂಭೀರ ಚರ್ಚೆಗಳು ನಡೆಯದಿರಲು ಇದೇ ಕಾರಣ. ಎಲ್ಲ ಕಾರ್ಯಕ್ರಮಗಳೂ ಮೋದಿ ಕೇಂದ್ರಿತವಾಗಿದ್ದು ಅಲ್ಲಿರುವುದು ಬರೀ ಆಡಂಬರದ ಮಾತುಗಳು, ದೊಡ್ಡ ಮಾಧ್ಯಮ ಉತ್ಸವಗಳು ಮತ್ತು ಗದ್ದಲ ಮಾತ್ರ. ಹೋದಲ್ಲೆಲ್ಲಾ ಮಿಲಿಟರಿ ಸಾಮಗ್ರಿಗಳನ್ನು ಖರೀದಿಸುವುದೆ ಮೋದಿಯ ವಿದೇಶಿ ಭೇಟಿಗಳ ವೈಶಿಷ್ಟವಾಗಿದೆ. ವಿದೇಶ ನೀತಿ ಎಂದರೆ



ಕೇವಲ ಭದ್ರತೆಗೆ ಸಂಬಂಧಪಟ್ಟದ್ದು ಎಂಬ ಸಂಕುಚಿತ ಅರ್ಥವನ್ನು ನೀಡಲಾಗಿದೆ. ಆದುದರಿಂದಲೆ ಹೆಚ್ಚಿನ ಭೇಟಿಗಳ ವೇಳೆ 'ಭಯೋತ್ಪಾದನೆ ವಿರುದ್ಧ ಜಂಟಿ ಹೋರಾಟ' ಎಂಬ ಅದೇ ಹಳಸಲು ಹಾಡನ್ನು ಹಾಡಲಾಗುತ್ತಿದೆ.

ಅಮೆರಿಕ, ಇಸ್ರೇಲ್‌ಗಳ ಬಾಲಬಡುಕ

ಮೋದಿ ಸರ್ಕಾರ 2015ರಲ್ಲಿ ಅಮೆರಿಕದ ಜತೆ ಮಾಡಿಕೊಂಡಿರುವ 10 ವರ್ಷಗಳ ರಕ್ಷಣಾ ಒಪ್ಪಂದ ಭಾರತವನ್ನು ಸ್ಪಷ್ಟವಾಗಿ ಯುದ್ಧಾಕಾಂಕ್ಷಿ ರಾಷ್ಟ್ರಗಳ ಸಾಲಿಗೆ ಸೇರಿಸುತ್ತದೆ. ಈ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿದ ನಂತರದಲ್ಲಿ 'ಸೇನಾ ಚಟುವಟಿಕೆಗಳಿಗೆ ನೆರವಿನ ಒಪ್ಪಂದ', 'ಸಂವಹನ ಮತ್ತು ಮಾಹಿತಿ ಭದ್ರತೆಯ ಅನೌಪಚಾರಿಕ ಒಪ್ಪಂದ', 'ಸೇನಾ ಚಟುವಟಿಕೆಗಳ ವಿನಿಮಯದ ಅನೌಪಚಾರಿಕ ಒಪ್ಪಂದ' ಎಂಬ ಇನ್ನೂ ಮೂರು ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ಇವೆಲ್ಲದರ ಅಂತಿಮ ಪರಿಣಾಮವೆಂದರೆ ಅಮೆರಿಕದ ಸೇನೆಗೆ ಅಗತ್ಯವೆನಿಸಿದಾಗ ಭಾರತ ತನ್ನ ಬಂದರು, ವಿಮಾನನಿಲ್ದಾಣ ಮತ್ತು ವೈಮಾನಿಕ ನೆಲೆಗಳನ್ನು ಅದರ ಉಪಯೋಗಕ್ಕೆ ಬಿಟ್ಟುಕೊಡಬೇಕು. ಅಷ್ಟು ಮಾತ್ರವಲ್ಲ ತನ್ನ ಯುದ್ಧ ಸಾಮಗ್ರಿಗಳನ್ನು "ಎರವಲು" ನೀಡಬೇಕು. ಅಧಿಕಾರ ಮತ್ತು ನಿಯಂತ್ರಣಗಳು ಅಮೆರಿಕದ ಮಿಲಿಟರಿಯ ಕೈಲಿರುತ್ತವೆ. ಒಪ್ಪಂದದ ಪ್ರಕಾರ ಎರಡೂ ಸೇನೆಗಳ ಬಳಕೆಗಾಗಿರುವ ಯುದ್ಧ ಸಾಮಗ್ರಿಗಳನ್ನು ಭಾರತವೆ ಅಮೆರಿಕದಿಂದ ಖರೀದಿಸಬೇಕಾಗುತ್ತದೆ. ಉದಾಹರಣೆಗೆ ಭಾರತ ಇಂದು ಎರಡೂ ನೌಕಾಸೇನೆಗಳ ಸಲುವಾಗಿರುವ, 1 ಬಿಲಿಯ ಡಾಲರ್ ಬೆಲೆಯ ನಾಲ್ಕು ಪಿ81 ಯುದ್ಧವಿಮಾನಗಳನ್ನು ಖರೀದಿಸಬೇಕಾಗಿ ಬಂದಿದೆ. ಈ ಒಪ್ಪಂದಗಳಿಂದಾಗಿ ವಿಶ್ವದ ಈ ಭಾಗದಲ್ಲಿ ಅಮೆರಿಕದ ಸೇನೆಯ ದುಸ್ಸಾಹಸದ ಕೃತ್ಯಗಳಿಗೆ ಭಾರತ ಒಂದು ನೆಲೆಯಾಗಲಿದೆ. ಸಾಂಪ್ರದಾಯಿಕ ಮಿಲಿಟರಿ ಒಪ್ಪಂದಗಳನ್ನು ಮೀರಿ ಮಾಡಲಾಗಿರುವ ಈ ಒಪ್ಪಂದಗಳು ನಿಜಕ್ಕೂ ಭಾರತದ ಹಿತಾಸಕ್ತಿಗಳಿಗೆ ದ್ರೋಹ ಬಗೆಯುತ್ತವೆ. ಸ್ವತಂತ್ರ ಭಾರತದ ಇತಿಹಾಸದಲ್ಲಿ ಇಂಥಾ ಒಂದು ದೇಶವಿರೋಧಿ ಕೃತ್ಯ ಯಾವತ್ತೂ ನಡೆದಿಲ್ಲ. ಭಾರತವನ್ನು ಅಮೆರಿಕದ ಮಿತ್ರರಾಷ್ಟ್ರವನ್ನಾಗಿ ಮಾಡಲಾಗಿದೆ ಎಂದು ಕೊಚ್ಚಿಕೊಳ್ಳುವವರು ಭಾರತ ಅಮೆರಿಕಕ್ಕೆ ಸರಿಸಮಾನವಾಗಿರದೆ ತೀರ ಗೌಣ ಸ್ಥಾನದಲ್ಲಿ ಇರುವ ವಾಸ್ತವವನ್ನು ಗಮನಿಸಬೇಕು.

ಮೋದಿ ಸರ್ಕಾರ ಮಾಡಿರುವ ಮತ್ತೊಂದು 'ಘನ' ಕಾರ್ಯವೆಂದರೆ ರಕ್ಷಣಾ ಕ್ಷೇತ್ರದಲ್ಲಿ ನೂರು ಪ್ರತಿಶತ ವಿದೇಶಿ ನೇರ ಹೂಡಿಕೆಗೆ ಅವಕಾಶ ಕಲ್ಪಿಸಿರುವುದು. ಇಲ್ಲಿ ತಂತ್ರಜ್ಞಾನವನ್ನು ವರ್ಗಾಯಿಸಬೇಕೆಂಬ ನಿಯಮವನ್ನು ವಿಧಿಸಲಾಗಿಲ್ಲ. ಹೀಗಾಗಿ ಅಮೆರಿಕದ ಯುದ್ಧೋಪಕರಣ ಕಂಪೆನಿಗಳು ಭಾರತದಲ್ಲಿ ತಮ್ಮ ಅಂಗ ಸಂಸ್ಥೆಗಳನ್ನು ತೆರೆದು ಅಮೆರಿಕದ ಉತ್ಪನ್ನಗಳನ್ನೆ ಭಾರತದ್ದೆಂದು ಹೇಳಿಕೊಂಡು ಮಾರಾಟ ಮಾಡಬಹುದಾಗಿದೆ. ಇದರರ್ಥ ಏನೆಂದರೆ ಇನ್ನು ಮುಂದೆ ನಾವು ಸಂಪೂರ್ಣವಾಗಿ ವಿದೇಶೀ ತಂತ್ರಜ್ಞಾನ ಮತ್ತು ಸಾಮಗ್ರಿಗಳನ್ನೆ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಲಿದೆ.

ಕಳೆದ ವರ್ಷ ಭಾರತ, ಅಮೆರಿಕ ಮತ್ತು ಜಪಾನ್ ಒಟ್ಟಾಗಿ ಜಪಾನ್ ಸಮುದ್ರದಲ್ಲಿ ಮಲಬಾರ್ ಯುದ್ಧ ಕಸರತ್ತುಗಳನ್ನು ನಡೆಸಿದವು. ಇದು ಮೇಲುನೋಟಕ್ಕೆ ಕಾಣಿಸುವಷ್ಟು ಸರಳವಲ್ಲ. ವಾಸ್ತವದಲ್ಲಿ ಇದು ದಕ್ಷಿಣ ಚೀನಾ ಸಮುದ್ರ ಕುರಿತಂತೆ ಚೀನಾ, ವಿಯೆಟ್ನಾಂ ಮತ್ತು ಫಿಲಿಪ್ಪೈನ್ಸ್ ನಡುವೆ ಎದ್ದಿರುವ ವಿವಾದದಲ್ಲಿ ತಲೆಹಾಕುವ ಯತ್ನವಾಗಿತ್ತು.

ನೆರೆರಾಷ್ಟ್ರಗಳೊಂದಿಗಿನ ಸಂಬಂಧ

ಮೋದಿ ಸರ್ಕಾರದಡಿ ನೆರೆಯ ನೇಪಾಳ, ಚೀನಾ, ಪಾಕಿಸ್ತಾನಗಳ ಜತೆಗಿನ ಸಂಬಂಧಗಳಿಗೆ ಬದ್ದಿರುವ ಏಟಿನ ಪರಿಣಾಮಗಳು ದೀರ್ಘ ಕಾಲದವರೆಗೆ ಮುಂದುವರಿಯಲಿವೆ. ಪಾಕ್ ರಾಯಭಾರಿ ಹುರಿಯತ್ ನಾಯಕರನ್ನು ಭೇಟಿ ಮಾಡಿದರೆಂಬ ಕಾರಣಕ್ಕೆ ಭಾರತ ಪಾಕಿಸ್ತಾನಗಳ ವಿದೇಶಾಂಗ ಕಾರ್ಯದರ್ಶಿಗಳ ಸಭೆಯನ್ನು ರದ್ದುಗೊಳಿಸಲಾಯಿತು. ಮೋದಿ ಲಾಹೋರ್‌ಗೆ ದೌಡಾಯಿಸಿ ಪಾಕ್ ಪ್ರಧಾನಿಯನ್ನು ಆಲಂಗಿಸಿ ವಾಪಸ್ಸಾಗುತ್ತಿದ್ದಂತೆ ಪಠಾಣ್‌ಕೋಟ್‌ನಲ್ಲಿ ಉಗ್ರರ ದಾಳಿ ನಡೆಯಿತು. ಇದಕ್ಕೆ ಪ್ರತಿಯಾಗಿ ಭಾರತೀಯ ಸೇನೆ ಎಂದಿನಂತೆ ಮಾಮೂಲಿಯಾಗಿ ಗಡಿಪ್ರದೇಶದಲ್ಲಿ ನಡೆಸಿದ ಕಾರ್ಯಾಚರಣೆಗೆ 'ಸರ್ಜಿಕಲ್ ದಾಳಿ' ಎಂಬ ಆಕರ್ಷಕ ಹೊಸ ಹೆಸರಿಟ್ಟ ಮೋದಿ ಸರ್ಕಾರ ಇಂತಹ ದಾಳಿ ಇದೇ ಪ್ರಥಮ ಬಾರಿಗೆ ಆಗುತ್ತಿರುವ ಹಾಗೆ ಬಿಂಬಿಸಿತು. ಇದು 56 ಇಂಚಿನ ಎದೆಗಾರಿಕೆ ಎಂದು ಮೋದಿಭಕ್ತರು ಆನಂದಾತಿಶಯದಿಂದ ಕುಣಿದದ್ದೇ ಕುಣಿದದ್ದು! ಇನ್ನು ಪಾಕ್ ತನಿಖಾ ತಂಡದ ಭೇಟಿಗಳ ವೇಳೆ ನಡೆದ ಅಧ್ವಾನಗಳು ಅದರದೆ ಆದ ಕತೆಯನ್ನು ಹೇಳುತ್ತವೆ.

ದೇಶದೆಲ್ಲೆಡೆ ಒಂದು ಉತ್ಕಟ ರಾಷ್ಟ್ರೀಯವಾದದ ವಾತಾವರಣವನ್ನು ಸೃಷ್ಟಿಸಲಾಗಿದೆ. ಉಭಯ ದೇಶಗಳ ನಡುವೆ ಶಾಂತಿಗಾಗಿ ಕರೆ ನೀಡುವುದನ್ನು ದೇಶದ್ರೋಹದ ಕೃತ್ಯವೆಂದು ಕರೆಯಲಾಗುತ್ತಿದೆ. ತುತ್ತೂರಿ ಮಾಧ್ಯಮಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುವ ಮೂಲಕ ಸಮಾಜದಲ್ಲಿ ಯುದ್ಧೋನ್ಮಾದವನ್ನು ಸೃಷ್ಟಿಸಲಾಗುತ್ತಿದೆ. ಭಾ... ಪಾಕಿಸ್ತಾನಗಳೆರಡೂ ಭಯಾನಕ ಅಣ್ವಸ್ತ್ರಗ... ಪೇರಿಸಿಟ್ಟಿರುವುದನ್ನು ಮರೆತಿರುವಂತೆ ವರ್ತಿಸುತ್ತಿರು... ಸನ್ನಿವೇಶದಲ್ಲಿ ಯುದ್ಧವೇನಾದರೂ ಸಂಭವಿಸಿತೆಂದ... ಆದರ ಅಂತಿಮ ಪರಿಣಾಮ ಏನೆಂದು ವಿವರಿ... ಆಗತ್ಯವಿಲ್ಲ. ಪಾಕಿಸ್ತಾನದೊಂದಿಗಿನ ವ್ಯವಹಾರಗಳಲ್ಲಿ ... ಧೋರಣೆ ಅನುಸರಿಸಿದರೆ ಅದು ಶಾಂತಿಸ್ಥಾ... ಒಪ್ಪಬಹುದೆಂದು ಯೋಚಿಸಲಾಗುತ್ತಿದೆ. ಇದು ಮೋದ... ಇನ್ನೊಂದು ಬೂಸಿ. ನಿಜ ಹೇಳಬೇಕೆಂದರೆ 56 ... ಸರ್ಕಾರದಡಿ ಉಗ್ರರ ದಾಳಿಗಳು, ಗಡಿ ಸಂಘರ್ಷ... ಯೋಧರ ಸಾವುಗಳು ಇನ್ನಷ್ಟು ಹೆಚ್ಚಾಗಿವೆ.

ಯುರೋಪ್, ಏಷಿಯಾ, ಆಫ್ರಿಕಾ ಖಂ... ದೇಶಗಳನ್ನು ಜೋಡಿಸಲಿರುವ ಚೀನಾದ ಒಂದು ವ... ಒಂದು ರಸ್ತೆ ಯೋಜನೆಯನ್ನು (ONE BELT O... ROAD) ಹೆಚ್ಚುಕಮ್ಮಿ 100 ದೇಶಗಳು ಬೆಂಬ... ಆದರೆ ಭಾರತ ಈ ಯೋಜನೆಯನ್ನು ತಿರಸ್ಕರಿಸಿ ಆದ... ದೂರ ಉಳಿದಿದೆ. ಮೊದಮೊದಲು ಭಾರತವನ್ನು ... ಲಿಸಿದ ಅಮೆರಿಕವೂ ಇದೀಗ ತಿರುಗಿಬಿದ್ದಿದೆ. ಯೋಜ... ಸಂಬಂಧಿಸಿದಂತೆ ಇತ್ತೀಚೆಗೆ ಬೀಜಿಂಗ್‌ನಲ್ಲಿ ... ಅಂತಾರಾಷ್ಟ್ರೀಯ ಸಭೆಯಲ್ಲಿ ಅಮೆರಿಕದ ಪ್ರತಿನಿಧಿ... ಭಾಗವಹಿಸಿದ್ದಾರೆ! ಭಾರತ, ಚೀನಾ ಸಂಬಂಧಗಳು ವಿ... ಹಾಳಾಗಲು ಪ್ರಧಾನ ಕಾರಣಗಳೆಂದರೆ ಲಡಾಕ್ ... ಭಾರತ, ಅಮೆರಿಕ, ಜಪಾನ್ ನಡೆಸಿದ ಜಂಟಿ ನೌಕಾ... ಕಾರ್ಯಾಚರಣೆ; ದಕ್ಷಿಣ ಚೀನಾ ಸಮುದ್ರ ಕುರಿತ ಅಮೆ... ನಿಲುವಿಗೆ ಭಾರತದ ಬೆಂಬಲ; ಪರಮಾಣು ಸಾ... ಪೂರೈಕೆದಾರರ (ಎನ್‌ಎಸ್‌ಜಿ) ಗುಂಪಿನ ಸದಸ್ಯತ್ವಕ್ಕೆ ... ದಿಂದ ಅಡ್ಡಿ; ಚೀನಾ ಮಸೂದ್ ಅಜರ್‌ನನ್ನು ಭಯೋ... ದಕನೆಂದು ಕರೆಯಲು ನಿರಾಕರಿಸಿದುದಕ್ಕೆ ಪ್ರತಿಯಾಗಿ ... ಉಯ್ಘರ್‌ನ ಭಯೋತ್ಪಾದಕನಿಗೆ ಆಹ್ವಾನ ನೀಡಿದ ... ಅರುಣಾಚಲ ಪ್ರದೇಶ ಭೇಟಿ ನೀಡುವಂತೆ ಭಾರತ ದ... ಲಾಮಾಗೆ ಉತ್ತೇಜನ ನೀಡಿರುವುದು ಇತ್ಯಾದಿ. ... ವೇಳೆ ಚೀನಾದಿಂದ ಆಗುತ್ತಿರುವ ಆಮದಿನ ಪ್ರಮಾ... ಯಾವುದೇ ಧಕ್ಕೆಯಾದಂತೆ ಕಾಣುತ್ತಿಲ್ಲ. ಭಾರಿ ... ವಿಷಯವೆಂದರೆ ಮೋದಿಭಕ್ತರು ಫೇಸ್‌ಬುಕ್, ... ಇತ್ಯಾದಿಗಳ ಮೂಲಕ ಚೀನಾದ ಮೇಲೆ ಬೈಗಳು ಸು... ಬಳಸುವ ಮೊಬೈಲ್‌ಗಳಲ್ಲಿ ಹೆಚ್ಚಿನವು ಚೀನಾದ ಉ... ಆಗಿವೆ!

ನೇಪಾಳದ ಮಾದೇಶಿಗಳ ಬೆಂಬಲಕ್ಕೆ ನಿಂತು ... ದಿಗ್ಬಂಧನಕ್ಕೆ ಸಹಕರಿಸಿದ ಮೋದಿ ಸರ್ಕಾರ ನ... ದೊಂದಿಗಿನ ಉತ್ತಮ ಬಾಂಧವ್ಯಕ್ಕೆ ಕೊಡಲಿಯೇಟು ನ... ಸಾಲದುದಕ್ಕೆ ಯೋಗಿ ಆದಿತ್ಯನಾಥನಂಥವರು ನೇಪಾ... ರಾಜಾಡಳಿತವನ್ನು ಮತ್ತೆ ಸ್ಥಾಪಿಸಬೇಕೆಂದು ಹೇಳಿರು... ಪರಿಸ್ಥಿತಿಯನ್ನು ಇನ್ನಷ್ಟು ಬಿಗಡಾಯಿಸಿದೆ.

ದಮನಿತ ರಾಷ್ಟ್ರಗಳ ಸ್ವಾತಂತ್ರ್ಯ ಚಳವಳಿಗ... ಬೆಂಬಲಿಸುವ ನೀತಿಯನ್ನು ಭಾರತ ಕೈಬಿಟ್ಟಿದೆ. ಹಿಂದ... ಪ್ಯಾಲೆಸ್ತೇನಿಯರ ಹೋರಾಟದೊಂದಿಗೆ ಗುರುತಿಸಿಕೊ... ಭಾರತ ಪ್ಯಾಲೆಸ್ತೇನಿಯರ ಭೂಮಿಯನ್ನು ಆಕ್ರಮಿಸಿ ಅ... ಸ್ವಾತಂತ್ರ್ಯ ನೀಡಲು ನಿರಾಕರಿಸುತ್ತಿರುವ ಇಸ್ರೇಲಿ ನೀತಿ... ಖಂಡಿಸುತ್ತಿತ್ತು. ಆದರೆ ಮೋದಿ ಸರ್ಕಾರ ಇದಕ್ಕೆ ... ವಿರುದ್ಧವಾದ ನಿಲುವನ್ನು ತಾಳಿದೆ. ಅದಿಂದು ಇ... ಜೊತೆ ಸ್ನೇಹಸಂಬಂಧಗಳನ್ನು ಇನ್ನಷ್ಟು ಗಟ್ಟಿಗೊ... ಮುಂದಾಗಿದೆ. ಇಸ್ರೇಲ್‌ನ ಬರಕ್ ಕ್ಷಿಪಣಿಗಳ ಪೂರೈ... ಭಾರಿ ವಿಳಂಬವಾಗುತ್ತಿದ್ದರೂ ಮತ್ತೆ ಅದೇ ಕ... 2.63 ಬಿಲಿಯ ಡಾಲರು ಮೊತ್ತದ ಹೊಸಾ ಆರ್ಡರ್... ನೀಡಲಾಗಿದೆ. ಇಸ್ರೇಲ್‌ನಿಂದ 10 ಬಿಲಿಯ ಡಾಲರ್‌ಗ... ಅಧಿಕ ಮೌಲ್ಯದ ಯುದ್ಧ ಸಾಮಗ್ರಿಗಳನ್ನು ಖರೀದಿಸು... ಭಾರತ ಇಂದು ಇಸ್ರೇಲ್ ವಸ್ತುಗೆ ... ಯುದ್ಧೋಪಕರಣಗಳ ಅತ್ಯಂತ ದೊಡ್ಡ ಖರೀದಿದಾರ...

ಸ್ವತಂತ್ರ ನೀತಿಯನ್ನು ಕೈಬಿಟ್ಟಿರುವುದರಿಂದ ... ಇಂದು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ತನ್ನ ಧ್ವನಿ... ಕಳೆದುಕೊಂಡಿದೆ. ಇತಿಹಾಸದ ಪುಟಗಳಲ್ಲಿ ಮೋ... ಹೆಸರು ಅಲಿಪ್ತ ರಾಷ್ಟ್ರಗಳ ಶೃಂಗಸಭೆಗೆ ಹಾಜರಾಗದ ... ಭಾರತೀಯ ಪ್ರಧಾನಿ ಎಂಬುದಾಗಿ ಶಾಶ್ವತ... ದಾಖಲಿಸಲ್ಪಟ್ಟಿವೆ. ಭಾರತದ ರಾಷ್ಟ್ರೀಯ ಚಳವಳಿಯ ... ಚಹ್ನೆಯಾಗಿದ್ದುದು ಸಾಮ್ರಾಜ್ಯಶಾಹಿಗೆ ವಿರೋಧ. ... ಇಂದಿನ ಮೋದಿ ಸರ್ಕಾರ ಹುಟ್ಟುಹಾಕಿರುವ ... ಶಬ್ದಾಡಂಬರದ ಮತ್ತು ಭಾವೋತ್ತೇಜಕ ಮಾತುಗಳ ... ರಾಷ್ಟ್ರೀಯವಾದದಲ್ಲಿ ಸಾಮ್ರಾಜ್ಯಶಾಹಿಗೆ ವಿರ... ಇಲ್ಲದಿರುವುದನ್ನು ಗಮನಿಸಬೇಕು. ಇದಕ್ಕೆ ಅಮೆ... ಜತೆಗಿನ ರಕ್ಷಣಾ ಒಪ್ಪಂದವೆ ಸಾಕ್ಷಿ. ನಿಜ ಹೇಳಬೇ... ವಿದೇಶಾಂಗ ವ್ಯವಹಾರಗಳಲ್ಲಿ ಮೋದಿ ಸರ್ಕಾ... ಯಶಸ್ಸೇನಿದ್ದರೂ ಅದು ಕೇವಲ ಟಿವಿ ಸ್ಟೂಡಿಯೋಗ... ಸಾಮಾಜಿಕ ಜಾಲತಾಣಗಳಿಗೂ ಸೀಮಿತವಾಗಿದೆ!!

(ಪ್ರಬೀರ್ ಪುರಕಾಯಸ್ಥ ಅವರು ನ್ಯೂಸ್... ಇನ್'ನಲ್ಲಿ ಬರೆದ ಲೇಖನದ ಭಾವಾನು...

ರ್‍ಯಾಂಕ್ ಪಡೆದ ಧ್ಯಾನಚಂದ್ರ



ಈ ಬಾರಿ ಯುಪಿಎಸ್‌ಸಿಯಲ್ಲಿ 47ನೇ ರ್‍ಯಾಂಕ್ ಪಡೆದ ಧ್ಯಾನಚಂದ್ರ ನಮ್ಮ ಗೆಳೆಯರಾದ ...ಮರ್ ಹಾಲೇಶಪ್ಪನವರ ಮಗ. ಈ ...ಶಪ್ಪ ಹೊನ್ನಾಳಿ ಸೊಗಡಿನ ...ಗಾರಿಕೆಯಿಂದಲೇ ಎಂತಹವರನ್ನೂ ಆಕರ್ಷಿಸುವ ...ಇಂಜಿನಿಯರಿಂಗ್ ಓದಿ ಹಲವು ಹುದ್ದೆ ...ರಿಸಿದ್ದರೂ ಇವರ ಬಳಿ ಮಾತನಾಡುತ್ತಿದ್ದರೆ, ...ಳಿ ನೆಲದಲ್ಲಿ ನಿಂತು ಹೆಬ್ಬೆಟ್ಟಿನ ಕೃಷಿಕನೊಂದಿಗೆ ...ಾಡಿದಂತಾಗುತ್ತದೆ. ಆ ಪ್ರದೇಶದ ಬೈಗುಳ, ...ನಿರರ್ಗಳವಾಗಿ ಬರುತ್ತವೆ.

...ಮ್ಮ ಹಳ್ಳಿಯಲ್ಲಿ ಜಮೀನು ತೋಟವನ್ನೂ ...ರುವ ಹಾಲೇಶಪ್ಪ ಕೆಲವರ್ಷಗಳ ಹಿಂದೆ 500 ... ಕುರಿಗಳನ್ನು ಹೊಂದಿದ್ದರು. ಈಗ ...ಯಾಗಿವೆ. ಗೆಳೆಯರನ್ನು ತೋಟಕ್ಕೆ ಕರೆದರೆ ಕುರಿ ...ಗೆ ನುಗ್ಗಿ, ಕೊಬ್ಬಿದ ಕುರಿಯನ್ನು ಅನಾಮತ್ತು ...ಂಡು ಬಂದು, ತಾವೇ ಕುಯ್ದು, ಅಡುಗೆ ... ಹಾಕುತ್ತಿದ್ದರು. ಇದರಿಂದ ಹಾಲೇಶಪ್ಪ ...ಲ್ಲ ಇಷ್ಟವಾದ ವ್ಯಕ್ತಿ. ಬರ್ಮುಡ ಚೆಡ್ಡಿ ...ಂಡು ಮಾಂಸದಡಿಗೆ ಮಾಡುತ್ತಿದ್ದರೆ ...ನಗರದಲ್ಲಿದ್ದ ಭೀಮನನ್ನು ನೋಡಿದಂತಾಗುತ್ತಿತ್ತು. ...ಊಟದ ಸಮಯದಲ್ಲಿ ಧ್ಯಾನಚಂದ್ರ ಮದ್ಯಪಾನ ...ಗೆ ಸೋಡಾ ಹಾಕಿ ಡ್ರಿಂಕ್ಸ್ ಫಿಕ್ಸ್ ...ವುದು, ಕಳ್ಳುಬಾಡು ಸರಬರಾಜು ಮಾಡುವುದು ... ಮಾಡುತ್ತಿದ್ದ. ಈತನ ಕೆಲಸ ನೋಡುತ್ತಿದ್ದರೇ ...ಳಗೊಬ್ಬ ಐಎಎಸ್‌ನಲ್ಲಿ ರ್‍ಯಾಂಕ್ ಪಡೆಯುವ ...ವಂತ ವಿದ್ಯಾರ್ಥಿಯಿದ್ದಾನೆಂದು ಊಹಿಸಲು ...ರಲಿಲ್ಲ.

... ನಂತರ ಈತ ಮಣಿಪಾಲದಲ್ಲಿ ಸಿವಿಲ್ ...ಯರಿಂಗ್ ಓದುವಾಗ ಮದುವೆ, ತಿಥಿಗೆ ... ಬಂದೇಬಿಡುತ್ತಿದ್ದ. ಹಾಗೆ ಬಂದಾಗೊಮ್ಮೆ, ತಮ್ಮ ಜಮೀನಿನಲ್ಲಿ ಉರುಳಾಡುತ್ತ ವೇಸ್ಟಾಗುತ್ತಿದ್ದ ಬೂದುಕುಂಬಳ ಕಾಯಿಗಳನ್ನು ನೋಡಿ, ಭೂಮಿಯಿಂದ ಬೆಳೆದದ್ದ್ಯಾವುದೂ ವೇಸ್ಟಾಗಬಾರದೆಂದು ಟ್ರ್ಯಾಕ್ಟರ್‌ನಲ್ಲಿ ತುಂಬಿಕೊಂಡು ಕುಂದೂರು ಬಸ್ಟಾಂಡಿನಲ್ಲಿ ಕೂಗುತ್ತ ಅಗ್ಗದ ಬೆಲೆಯಲ್ಲಿ ಮಾರಿ ಬಂದಿದ್ದ. ಉಳಿದವನ್ನ ಹಾಸ್ಟಲುಗಳಿಗೆ ಹಂಚಿದ್ದ.

ಹೀಗೆ ಕೃಷಿ ಮೂಲದ ಕಸುಬನ್ನು ಇಷ್ಟಪಡುತ್ತಿದ್ದ ಧ್ಯಾನ್ ನಮಗೆಲ್ಲ ಇಷ್ಟವಾಗಲು ಕನ್ನಡ ಸಾಹಿತ್ಯದ ಬಗ್ಗೆ ಆತನಿಗಿರುವ ಆಸಕ್ತಿಯೇ ಕಾರಣ. ಶಿವಮೊಗ್ಗದ ಸಾಹಿತ್ಯ ಚಟುವಟಿಕೆಯಿಂದ ಪ್ರೇರಣೆಗೊಂಡ ಆತ ಐಚ್ಛಿಕ ವಿಷಯವಾಗಿ ಕನ್ನಡ ಸಾಹಿತ್ಯವನ್ನೇ ತೆಗೆದುಕೊಂಡಿದ್ದ. ಇದು ಆತನ ರ್‍ಯಾಂಕಿನಲ್ಲಿ ಪ್ರಧಾನ ಪಾತ್ರ ವಹಿಸಿರುವುದೊಂದು ವಿಶೇಷ.

ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಗೋಲ್ಡ್‌ಮೆಡಲ್ ಪಡೆದ ಆತ ರಾಜ್ಯ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 229 ಎಂಜಿನಿಯರ್‌ಗಳಲ್ಲಿ ಟಾಪರ್ ಆಗಿ ಕೆಲಸಕ್ಕೆ ಸೇರಿದ. "ಒಂದು ಪೈಸೆ ಲಂಚವಿಲ್ಲದೆ ಸಿಕ್ಕಿರುವ ಈ ಕೆಲಸದಲ್ಲಿ ನೀನೂ ಹಾಗೆ ಇರಬೇಕು" ಎಂದು ಹೇಳಿದ್ದೆ. ಆತನ ಜೊತೆ ಆಯ್ಕೆಯಾದವರು ತಾವು ಇಂಜಿನಿಯರಿಂಗ್ ಓದಿದ್ದೇ ಸುಲಿಗೆಗೋಸ್ಕರ ಎಂಬಂತೆ ವರ್ತಿಸುವುದನ್ನು ನೋಡಿ ದಂಗುಬಡಿದಿದ್ದೆ. ಬೆಂಗಳೂರಲ್ಲಿ ಇಂಜಿನಿಯರಿಂಗ್ ಕೆಲಸ ಸಿಗುವುದಕ್ಕೂ ಮೊದಲೇ ಯುಪಿಎಸ್‌ಸಿ ಪರೀಕ್ಷೆಗೆ ನೋಂದಾಯಿಸಿಕೊಂಡು ತರಬೇತಿಗಾಗಿ ದಿಲ್ಲಿಗೆ ಹೋಗಿದ್ದ ಧ್ಯಾನ್, ಅಲ್ಲಿ ತರಬೇತಿಗಾಗಿ ಬಂದವರ ಹಾವಭಾವಗಳು, ಅಹಂಕಾರಗಳನ್ನು ನೋಡಿ ಅಚ್ಚರಿಪಟ್ಟಿದ್ದ. ದಕ್ಷಿಣದಿಂದ ಬಂದಿದ್ದ ಇವನಂತವರನ್ನು ಅಸಡ್ಡೆಯಿಂದ ನೋಡುತ್ತಿದ್ದ ಉತ್ತರ ಭಾರತದವರ ಧಿಮಾಕು ಹೇಳತೀರದಾಗಿತ್ತು. ಆದರೆ ಪರೀಕ್ಷೆಯಲ್ಲಿ ಅಹಂಕಾರಿಗಳೆಲ್ಲಾ ಉದುರಿಹೋಗಿದ್ದಾರಂತೆ.

ಯುಪಿಎಸ್‌ಸಿ ಪರೀಕ್ಷೆಗೆ ತಯಾರಾಗುವ ನಮ್ಮ ಹುಡುಗರಿಗೆ ಧ್ಯಾನ್ ಹೇಳುವುದೇನೆಂದರೆ "ಪರೀಕ್ಷೆಗಾಗಿ ಎಷ್ಟು ಸಮಯ ಓದಬೇಕೆನ್ನುವುದಕ್ಕಿಂತಲೂ, ಓದಿದ್ದೆಷ್ಟು ನೆನಪಿನಲ್ಲುಳಿಯಿತು ಎಂಬುದು ಮುಖ್ಯ. ಪ್ರತಿಭಾವಂತರು ದಿನದಲ್ಲಿ ನಾಲ್ಕು ಗಂಟೆ ಓದಿದರೆ ಸಾಕು. ಆದರೆ ಇದು ಎಲ್ಲರಿಗೂ ಅನ್ವಯಿಸುವುದಿಲ್ಲ. ಸದಾ ವರ್ತಮಾನದಲ್ಲಿರಬೇಕಾದರೆ ದಿನಪತ್ರಿಕೆ ಓದಬೇಕು. ಜೊತೆಗೆ ಆಧುನಿಕ ವಿಜ್ಞಾನದ ಆವಿಷ್ಕಾರಗಳಾದ ಕಂಪ್ಯೂಟರ್ ಮತ್ತು ಮೊಬೈಲ್‌ನ ಅಂತರ್ಜಾಲವನ್ನು ಬಳಸಿಕೊಳ್ಳಬೇಕು. ನಾನು ಮನೆಯಲ್ಲಿದ್ದಾಗ ಕಂಪ್ಯೂಟರ್, ಹೊರಗೆ ಜರ್ನಿ ಮಾಡುವಾಗ ಮೊಬೈಲ್‌ನಲ್ಲೇ ಹಲವು ಪುಸ್ತಕ ಓದಿದ್ದೇನೆ. ಈ ಜಾಲದೊಳಗೆ ಕಳೆದುಹೋಗದೆ ನಮ್ಮ ರಾಜ್ಯ ಜಿಲ್ಲೆ ಊರುಗಳ ಬಗ್ಗೆ ತಿಳಿದುಕೊಂಡಿರಬೇಕು. ನಾನು ದೆಹಲಿಯಿಂದ ಬಂದನಂತರ ಬೆಂಗಳೂರಿನ ಇನ್‌ಸೈಟ್ಸ್ ಸಂಸ್ಥೆಯಲ್ಲಿ ತರಬೇತಿಗಾಗಿ ಸೇರಿಕೊಂಡೆ. ಆಗ ಅನ್ನಿಸಿದ್ದೇನೆಂದರೆ ಯುಪಿಎಸ್‌ಸಿಗೆ ದಿಲ್ಲಿಯಲ್ಲೇ ತರಬೇತಿ ಪಡೆಯಬೇಕೆಂಬ ನಿಯಮವೇನಿಲ್ಲ. ಅಲ್ಲಿನ ಸಂಸ್ಥೆಗಳಷ್ಟೇ ಬೌದ್ಧಿಕವಾಗಿ ಸಮರ್ಥವಾದ ಸಂಸ್ಥೆಗಳು ಬೆಂಗಳೂರಿನಲ್ಲಿವೆ. ಡೆಲ್ಲಿಗೆ ಹೋಗುವವರಿಗೆ ಕನ್ನಡ ಭವನ ಒಂದು ವರದಾನವಾಗಿದೆ. ಊಟ ವಸತಿಗೆ ಪ್ರತಿದಿನ ಕೇವಲ ನೂರು ರೂ. ಚಾರ್ಜ್ ಮಾಡುವ ಕನ್ನಡ ಭವನ ದೆಹಲಿಯಲ್ಲಿದ್ದುಕೊಂಡು ಪರೀಕ್ಷೆಗೆ ತಯಾರಾಗುವವರಿಗೆ ಅನುಕೂಲವಾಗಿದೆ. ಆದ್ದರಿಂದ, ದೆಹಲಿ ಎಂದಕೂಡಲೇ ಊಟ ವಸತಿಖರ್ಚಿಗಾಗಿ ಹೆದರುವ ಅಗತ್ಯವಿಲ್ಲ. ಆದರೆ ದೆಹಲಿಯ ಗೋಸುಂಬೆ ಹವಾಮಾನ ನಮ್ಮ ದೇಹದ ಮೇಲೆ ಪರಿಣಾಮ ಬೀರಬಹುದು. ಆದ್ದರಿಂದ ಬೆಂಗಳೂರಲ್ಲಿದ್ದುಕೊಂಡೆ ಪರೀಕ್ಷೆಗೆ ಸಿದ್ಧತೆ ನಡೆಸುವುದೊಳ್ಳೆಯದು" ಎಂಬುದು ಧ್ಯಾನಚಂದ್ರನ ಸಲಹೆ.

ಇದೆಲ್ಲಕ್ಕಿಂತ ಮುಖ್ಯವಾಗಿ, ಧ್ಯಾನಚಂದ್ರನ ಬುದ್ಧಿಶಕ್ತಿಯನ್ನು ಗ್ರಹಿಸಿದ್ದ ತಂದೆ ಹಾಲೇಶಪ್ಪ ಮತ್ತು ತಾಯಿ ಮಮತ ಆತ ಪ್ರೌಢಶಾಲೆಯಲ್ಲಿರುವಾಗಲೇ ಯುಪಿಎಸ್‌ಸಿ ಪರೀಕ್ಷೆಯ ಬಗ್ಗೆ ಹೇಳುತ್ತ ಮಗನನ್ನು ಸಜ್ಜುಗೊಳಿಸಿದ್ದು ಧ್ಯಾನ್ ಯಶಸ್ಸಿಗೆ ಕಾರಣವಾಗಿದೆ. ಈ ಹಾಲೇಶಪ್ಪ ಹುರಿದುಂಬಿಸುವುದರಲ್ಲಿ ಎತ್ತಿದ ಕೈ. ಒಮ್ಮೆ ಎಡೂರಪ್ಪನವರು ಮುಖ್ಯಮಂತ್ರಿ ಆಗುತ್ತೇನೊ ಇಲ್ಲವೊ ಎಂದು ಕುಮಾರಣ್ಣ ಮತ್ತು ದೇವೇಗೌಡರ ಬಗ್ಗೆ ಯೋಚಿಸುತ್ತ ಕುಳಿತಿದ್ದಾಗ "ಅದ್ಯಾಕೆದರತಿರಿ ಸಾರ್. ಮುಖ್ಯಮಂತ್ರಿ ನೀವಲ್ದೆ ಇನ್ಯಾರಾಯ್ತರೆ ಹೇಳಿ. ಮುಖ್ಯಮಂತ್ರಿ ಆಗೇ ಆಯ್ತಿರಿ. ನಾವೆಲ್ಲ ನಿಮ್ಮ ಜೊತೆ ಇರತಿವಿ. ಎದ್ದು ನಡಿರಿ" ಎಂದು ಹುರಿದುಂಬಿಸಿದ್ದರು. ಆಗ ಎಡೂರಪ್ಪನವರಿಗೆ ಅವರ ಆಪ್ತರಾರೂ ಇಂತಹ ಧೈರ್ಯ ತುಂಬಿರಲಿಲ್ಲ.

ಮುಂದೆ ಎಡೂರಪ್ಪ ಮುಖ್ಯಮಂತ್ರಿಯಾದಾಗ ಹಾಲೇಶಪ್ಪ ಅವರ ಮೆಚ್ಚಿನ ಇಂಜಿನಿಯರಾಗಿದ್ದರು. ಹಾಲೇಶಪ್ಪನವರ ಇನ್ನೊಂದು ವಿಷಯ ಹೇಳುವುದಾದರೆ ವಿನೋಬ ನಗರದಲ್ಲಿ ಒಬ್ಬ ಆರ್‌ಎಸ್‌ಎಸ್ ಕಾರ್ಯಕರ್ತನ ಮನೆ ಕೊಂಡರು. ಮಾರುವಾಗ ಆತ ಭಾವುಕನಾಗಿ "ನೋಡಿ ಈ ರೂಮಿನಲ್ಲಿ ಎಸ್.ಎಲ್. ಭೈರಪ್ಪ ಮಲಗಿದ್ದರು. ಇದರಲ್ಲಿ ಹಿರೇಮಗಳೂರು ಕಣ್ಣನ್, ಕೃಷ್ಣಭಟ್ಟರು, ಸಂಘದ ಸಂಚಾಲಕರೆಲ್ಲಾ ಮಲಗಿದ್ದರು. ಇಂತಹ ಐತಿಹಾಸಿಕ ಮನೆಯನ್ನ ನೀವು ಖರೀದಿಸಿದ್ದೀರಿ. ಚೆನ್ನಾಗಿ ಇಟ್ಟುಕೊಂಡಿರಿ" ಎಂದು ಹೋದ. ಆದರೆ ಹಾಲೇಶಪ್ಪ ಇಡೀ ಮನೆಯನ್ನು ಧ್ವಂಸ ಮಾಡಿ, ಅದರ ಅಡುಗೆಮನೆ ಮತ್ತು ಟಾಯ್ಲೆಟ್ ಉಳಿಸಿಕೊಂಡು, ಹೊಸ ಬಂಗಲೆ ನಿರ್ಮಿಸಿಕೊಂಡರು. ಮನೆ ಮಾರಿದ್ದ ಚೆಡ್ಡಿ ಆ ಕಡೆ ಬಂದಾಗ ಆ ಮನೆಯೇ ಅಂತರ್ಧಾನವಾಗಿ ಹೋಗಿತ್ತು. ವಾಸ್ತು ನಂಬುವ ಹಾಲೇಶಪ್ಪ ಆರ್‌ಎಸ್‌ಎಸ್ಸಿಗರು ಮಲಗಿದ್ದ ಜಾಗವನ್ನೇ ಅಳಿಸಿ ಹಾಕಿದ್ದರು!



ಹತ್ತಾರ ಜೊತೆಗಿರುವ ಧ್ಯಾನ್‌ಗೆ ಚಲುವೇಗೌಡರ ಅಭಿನಂದನೆ...


■ ಬಿ.ಚಂದ್ರೇಗೌಡ

ಬೀಫ್‌ಗೂ, ಬಿಜೆಪಿಗೂ ಏನು ಸಂಬಂಧ?

...ಲವು ತಿಂಗಳುಗಳ ಹಿಂದೆ ಕೇರಳದ ಮಲಪ್ಪುರಂ ...ಲ್ಲಿ ಒಂದು ಉಪ ಚುನಾವಣೆ ನಡೆಯಿತು. ಮುಸ್ಲಿಂ ...ಳ್ಳವಿರುವ ಈ ಪ್ರದೇಶದಲ್ಲಿ ಮುಸ್ಲಿಂಲೀಗ್ ಪಕ್ಷಕ್ಕೂ ... ಬೆಂಬಲವಿದ್ದುದರಿಂದ ಚುನಾವಣೆಯಲ್ಲಿ ...ಲೀಗಿನ ಅಭ್ಯರ್ಥಿಯೂ ಸ್ಪರ್ಧೆಯಲ್ಲಿದ್ದರು. ...ದಂತೆ ಸಿಪಿಐ, ಸಿಪಿಎಂ, ಕಾಂಗ್ರೆಸ್, ಬಿಜೆಪಿ ಎಂದು ...ಲ್ಲಾ ಪಕ್ಷಗಳ ಅಭ್ಯರ್ಥಿಗಳು ಸ್ಪರ್ಧೆಯಲ್ಲಿದ್ದರು. ...ಪಕ್ಷಗಳ ಮುಖಂಡರೂ ಇಲ್ಲಿ ಬಂದು ಭಾಷಣ ...ತ್ತಿದ್ದರು. ಬಿಜೆಪಿ ಪಕ್ಷದ ಮುಖಂಡರ ಭಾಷಣ ...ಚಿತ್ರವಾಗಿತ್ತು, ಅವರು ಹೀಗೆ ಭಾಷಣ ಮಾಡಿದರು.

"...ವು ನಿಮಗೆ ಒಳ್ಳೆಯ ಬೀಫ್ ಕೊಡುತ್ತೇವೆ. ಬಿಜೆಪಿಗೆ ...ನೀಡಿದರೆ ನಿಮಗೆ ಒಳ್ಳೆಯ ಬೀಫ್ ಸಿಗುತ್ತದೆ."

...ರ ಈ ಭಾಷಣ ಕೇಳಿದ ಮಲಯಾಳಿಗಳು ಹಾಗೂ ...ಳ ಪತ್ರಿಕೆಗಳು ಇವರನ್ನು ಸಾಕಷ್ಟು ಅಪಹಾಸ್ಯ ...ದರು. "ಒಳ್ಳೆಯ ಬೀಫ್ ಅಂದರೇನು? ಅದು ...ತ್ತದೆ?" ಎಂದು ಬೇಕಾದಷ್ಟು ಕುಟುಕಿದರು. "ಈ ... ಭಾರತದವರು ಮಲಯಾಳಿಗಳು ಬರೀ ಬೀಫ್ ...ಬದುಕುತ್ತಿದ್ದಾರೆ ಎಂದು ತಿಳಿದುಕೊಂಡರೇ? ನಾವು ...ಳೂ ಬೀಫ್ ತಿಂದೇ ಬದುಕುತ್ತೇವೆ ಎಂಬುದು ...ಚೋಣವೇ?" ಎಂದೆಲ್ಲ ಕೆಲವು ದಿನಗಳವರೆಗೆ ...ಮಾಧ್ಯಮದಲ್ಲಿ ಮತ್ತು ಟಿವಿ ಚಾನೆಲ್‌ಗಳಲ್ಲಿ ಉತ್ತರ ...ದವರನ್ನು ಅಪಹಾಸ್ಯ ಮಾಡಿದರು. ಉತ್ತರ ಭಾರತದ ...ಕಡೆಯಲ್ಲಿ ಆಡಿನ ಮಾಂಸವನ್ನು ಫ್ರಿಜ್‌ನಿಂದ ...ದು ಹೋಗಿ ಅದನ್ನು ಬೀಫ್ ಎಂದುಕೊಂಡು ...ನ ಯಜಮಾನನನ್ನು ಹೊಡೆದು ಕೊಲೆ ...ದ್ದು ಯಾರೂ ಮರೆತಿರಲಾರರು. ಇತ್ತೀಚೆಗೆ ... ಇಂತಹ ಘಟನೆಯಾಗಿದೆ. ದನವನ್ನು ಕಡಿದವನನ್ನು ಗುಜರಾತಿನಲ್ಲಿ ನೇಣಿಗೆ ಹಾಕಬೇಕೆಂದದ್ದು ಇತ್ತೀಚಿನ ವರದಿಯಾಗಿತ್ತು. ಈ ರೀತಿ ಬಂದೆಡೆಯಲ್ಲಿ ಬೀಫ್ ತಿಂದವರನ್ನೇ ಕೊಲೆ ಮಾಡಬೇಕೆನ್ನುವುದು, ಕೊಲೆ ಮಾಡುವುದು ಈ ಜನರ ತತ್ವವಾಗಿರುವಾಗ ಇನ್ನೊಂದು ಕಡೆಯಲ್ಲಿ "ನಮಗೆ ಮತ ನೀಡಿದರೆ ನಿಮಗೆ ಒಳ್ಳೆಯ ಬೀಫ್ ಕೊಡುತ್ತೇವೆ" ಎನ್ನುವುದರ ಅರ್ಥವೇನು? ಈ ಜನರು ಯಾವ ಸಂದರ್ಭದಲ್ಲೂ ತಮ್ಮ ಮನೋಭಾವವನ್ನು ಹೇಗೆ ಬೇಕಾದರೂ ಬದಲಾಯಿಸಿಕೊಳ್ಳಬಹುದು ಎಂಬುದು ಅರ್ಥವೇ?



ಅದೇ ಸಂದರ್ಭದಲ್ಲಿ ಕೇರಳದಲ್ಲಿ ಇನ್ನೊಂದು ಘಟನೆಯೂ ನಡೆದಿದೆ. ನಾನು ಟಿವಿ ಚಾನೆಲ್‌ನಲ್ಲಿ ಕೇರಳದ ಮಲೆಯಾಳ, ಮತ್ತಿತರ ಕಾರ್ಯಕ್ರಮಗಳನ್ನು ನೋಡುವ ಹವ್ಯಾಸ ಬೆಳೆಸಿಕೊಂಡಿದ್ದೆ. ಆ ದಿನ ನಾನು ಕೇರಳದ ಸುದ್ದಿ ಚಾನೆಲ್ ನೋಡುತ್ತಿದ್ದಾಗ 'ಶಿವಸೇನೆ' ಎಂಬ ದೊಡ್ಡ ಬ್ಯಾನರ್ ಹಿಡಿದುಕೊಂಡು ಹಲವು ಜನರು 'ಭಾರತ ಮಾತಾಕಿ ಜೈ' ಎಂದು ಘೋಷಣೆ ಕೂಗುತ್ತಾ ಮೆರವಣಿಗೆ ಹೋಗುತ್ತಿದ್ದರು. ಕೆಲವರ ಕೈಯಲ್ಲಿ ಲಾಠಿಗಳೂ ಇದ್ದವು. ಕೇರಳದಲ್ಲಿ ಮಹಾರಾಷ್ಟ್ರದ ಶಿವಸೇನೆ ಹೇಗೆ ಬಂತು? ಎಂದು ನಾನು ಆಶ್ಚರ್ಯಪಡುತ್ತಿದ್ದಂತೆ ಈ ಜನರು ಕೋಜಿಕ್ಕೋಡಿನ ಬೀಚ್‌ಗೆ ತಲುಪಿದರು. ಈ ಸಂಧ್ಯಾ ಸಮಯದಲ್ಲಿ ಕೆಲವು ಯುವಕರು ಯುವತಿಯರೂ ಕುಳಿತುಕೊಂಡು ಮಾತನಾಡುತ್ತಿದ್ದರು. ಈ ಜನರು ಅವರ ಮಧ್ಯ ನುಸುಳಿಕೊಂಡು ತಮ್ಮ ಕೈಗಳಲ್ಲಿದ್ದ ಲಾಠಿ ಬೀಸಿ ಅವರನ್ನು ಅಲ್ಲಿಂದ ಓಡಿಸತೊಡಗಿದರು. ಹೆಣ್ಣು ಮಕ್ಕಳನ್ನೂ ಚೆನ್ನಾಗಿ ಹೊಡೆದು ಓಡಿಸಿದರು. ಕೇರಳದಲ್ಲಿ ಇಂತಹ ಹಿಂಸೆ ಆವರೆಗೆ ಕಂಡುಕೇಳಿಯೂ ಇರಲಿಲ್ಲ. ಯುವಕಯುವತಿಯರೂ ಒಂದೆಡೆ ಸೇರಬಾರದು ಎಂಬುದಕ್ಕಾಗಿ ಕರ್ನಾಟಕದ ಕೆಲವೆಡೆಗಳಲ್ಲಿ ಇಂತಹ ಹಿಂಸೆಯನ್ನು ಕೆಲವು ಸೇನೆಗಳು ನಡೆಸುತ್ತಿವೆಯೆಂದು ಕೇಳಿದ್ದೇನೆ.

ಮಹಾರಾಷ್ಟ್ರದವರು ಕೇರಳದಲ್ಲಿ ಇಂತಹ ಹಿಂಸಾತ್ಮಕ ನಡವಳಿಕೆ ತೋರಲು ಇವರಿಗೆಷ್ಟು ಧೈರ್ಯ? ಅಲ್ಲಿನ ಕಮ್ಯುನಿಸ್ಟ್ ಸರ್ಕಾರವನ್ನು ಭಯಪಡಿಸುವ ಆಲೋಚನೆಯೇ? ಈ ಉಪಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚು ಓಟು ಬೀಳಲಿ ಎಂಬ ಆಲೋಚನೆಯೇ? ಸ್ವಲ್ಪ ಹೊತ್ತಿನಲ್ಲಿ ಅಲ್ಲಿಗೆ ಪೊಲೀಸರು ಬಂದು ಕೆಲವರನ್ನು ಬಂಧಿಸಿ ಕರೆದೊಯ್ದರು. ಮಹಾರಾಷ್ಟ್ರದ ಶಿವಸೇನೆ ಕೇರಳಕ್ಕೆ ಬಂದು ಅಲ್ಲಿನ ಯುವಜನರನ್ನು ಪರಸ್ಪರ ಬೆರೆಯದಂತೆ ಮಾಡಲು ಇವರ ಪ್ರಯತ್ನವೇ? ಕೇರಳದಲ್ಲಿ ಕಂಡೂಕೇಳರಿಯದ ಕೋಮುವಾದದ ಬೀಜ ಬಿತ್ತಿ ಬಿಜೆಪಿಯ ಬೆಳವಣಿಗೆಗೆ ಪ್ರಯತ್ನಿಸುತ್ತಿದ್ದಾರೆಯೇ? ಮಹಾರಾಷ್ಟ್ರದ ಶಿವಸೇನೆ ತಮ್ಮ ಕೇಸರಿ ಪತಾಕೆ ಬೀಸಿಕೊಂಡು, 'ಭಾರತ್ ಮಾತಾಕಿ ಜೈ' ಎನ್ನುತ್ತಾ ಕೇರಳಕ್ಕೆ ಹೇಗೆ ಕಾಲಿಟ್ಟಿತು ಎಂಬುದನ್ನು ನಾನು ಈಗಲೂ ಯೋಚಿಸುತ್ತಿದ್ದೇನೆ. ಹಾಗೆಯೇ ಒಳ್ಳೆಯ ಬೀಫ್‌ಗೂ, ಬಿಜೆಪಿಗೂ ಏನು ಸಂಬಂಧ ಎಂಬುದೂ ಒಂದು ಸಮಸ್ಯೆಯಾಗಿ ನನ್ನನ್ನು ಕಾಡುತ್ತಲೇ ಇದೆ!

■ ಸಾರಾ ಅಬೂಬಕ್ಕರ್

ವ್ಯಾಘ್ರನ ಕರ 8

ಇಂಗ್ಲಿಷ್ ಮೂಲ: ಆರ್ಥರ್ ಫೋವೆಲ್
ಕನ್ನಡಕ್ಕೆ: ವಸಂತ್ ನಡಹಳ್ಳಿ

ಭಾರತದ ಕಾಡುಕೋಣ

ಭಾರತದ ಕಾಡುಕೋಣ/ಕಾಡೆಮ್ಮೆಗಳನ್ನು ಇವತ್ತಿನ ಹೆಚ್ಚಿನ ಬೇಟೆಗಾರರು ನೋಡಿಲ್ಲ, ಅದನ್ನು ಬೇಟೆಯಾಡಿದವರಂತೂ ಇನ್ನು ಕಡಿಮೆ. ಕಳೆದ ಅರ್ಧಶತಮಾನದಲ್ಲಿ ಇವುಗಳ ಸಂಖ್ಯೆ ಬಹಳ ಕಡಿಮೆಯಾಗಿದೆ. ಇವುಗಳನ್ನು ಬೇಟೆಯಾಡಲು ಪ್ರತಿವರ್ಷ ಕೆಲವರಿಗೆ ಮಾತ್ರ ಒಪ್ಪಿಗೆ ಕೊಡಲಾಗುತ್ತದೆ. ಕಠಿಣ ಸಂರಕ್ಷಣಾ ಕ್ರಮಗಳಿಂದ ಇವುಗಳ ಸಂತತಿಯನ್ನು ಉಳಿಸಲಾಗಿದೆ. ಈ ಅದ್ಭುತ ವನ್ಯಮೃಗದ ಸಂತತಿಯನ್ನು ಉಳಿಸಲು ಇನ್ನೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳದಿದ್ದುದು ದುರದೃಷ್ಟಕರ.

ಕಾಡುಕೋಣಗಳನ್ನು ಬೇಟೆಯಾಡುವಾಗ ಬಹಳ ಅಪಾಯಗಳನ್ನು ಎದುರಿಸಬೇಕಾಗುತ್ತದೆ. ಹಾಗಾಗಿ ಇವುಗಳು ಬೇಟೆಗಾರನಿಗೆ ಸಿಗಬಹುದಾದ ದೊಡ್ಡ ಪುರಸ್ಕಾರ. ಇವುಗಳು ಜಗತ್ತಿನಲ್ಲೇ ಅತಿದೊಡ್ಡದಾದ ಕೋಡುಗಳನ್ನು ಹೊಂದಿರುತ್ತವೆ. ರುಡ್‌ಯಾರ್ಡ್ ಕಿಪ್ಲಿಂಗ್ ತನ್ನ ಪ್ರಸಿದ್ಧ ಪುಸ್ತಕ 'ಜಂಗಲ್ ಬುಕ್'ನಲ್ಲಿ ಹೇಳುತ್ತಾನೆ, "ಅದರ ಮೈಮೇಲಿನ ಚುಕ್ಕಿಗಳು ಚಿರತೆಯಂತೆ ಕಣ್ತುಂಬಿದರೆ ಅದರ ಕೋಡುಗಳ ಕೋಣದ ಘನತೆಯನ್ನು ಹೆಚ್ಚಿಸುತ್ತವೆ."

ಕತ್ತಿಯಂತಹ ಏಕರೂಪದ ಹಿಂದಕ್ಕೇ ಬಾಗಿರುವ ಕೋಡುಗಳುಳ್ಳ ಕಪ್ಪಾದ ದೈತ್ಯ ಪ್ರಾಣಿಯೊಂದನ್ನು ಕಲ್ಪಿಸಿಕೊಳ್ಳಿ. ಕೋಡುಗಳ ನಡುವಿನ ಅತಿಹೆಚ್ಚು ಅಂತರದ ದಾಖಲೆ 167 ಇಂಚುಗಳು ಮತ್ತು ಒಂದು ಕೋಡಿನ ಉದ್ದದ ದಾಖಲೆ 78 ಇಂಚುಗಳು!

ಇಂತಹ ಭಾರೀ ಗಾತ್ರದ ಕೋಡುಗಳೇ ಇವುಗಳಿಗೆ ಮಾರಕವಾಗಿರುವುದು ವಿಪರ್ಯಾಸ. ಗುಂಪಿನ ನಾಯಕತ್ವಕ್ಕಾಗಿ ಅಥವಾ ಒಂದು ಪ್ರದೇಶದ ಮೇಲಿನ ಪ್ರಭುತ್ವಕ್ಕಾಗಿ ಎರಡು ಕಾಡುಕೋಣಗಳು ಹೋರಾಡುವಾಗ ಈ ದೈತ್ಯ ಕೋಡುಗಳನ್ನು ಚುಚ್ಚಿ ಒಂದು ಇನ್ನೊಂದಕ್ಕೆ ಮಾಡುವ ಗಾಯಗಳಿಂದ ಎರಡೂ ಸಾವನ್ನಪ್ಪುತ್ತವೆ. ಜೊತೆಗೆ ಹೊಲ ತೋಟಗಳಿಗೆ ನುಗ್ಗುವ ಇವು ಮಾನವನ ವಿಷದ ಬಾಣಗಳಿಂದ ಅಪಾಯವನ್ನು ಎದುರಿಸುತ್ತವೆ. ಊರಿನ ದನಕರುಗಳು ಮೇಯುವ ಜಾಗದಲ್ಲಿ ಹಾದುಹೋಗುವಾಗ ಅಂಟಿಸಿಕೊಳ್ಳುವ ರೋಗಗಳಿಂದಲೂ ಕೆಲವೊಮ್ಮೆ ಕಾಡುಕೋಣಗಳ ಹಿಂಡುಗಳೇ ಸಾವನ್ನಪ್ಪುತ್ತವೆ.

ಹೊರದೇಶಗಳಿಂದ ಬರುವವರಿಗೆ ಇಲ್ಲಿನ ಕಾಡುಕೋಣಗಳ ಪೂರ್ಣ ಪರಿಚಯವಿರುವುದಿಲ್ಲ, ಇದಕ್ಕೆ ಒಂದು ತಮಾಷೆಯ ಕಥೆಯಿದೆ. ಒಬ್ಬ ಬ್ರಿಟಿಷ್ ಅಧಿಕಾರಿ ಊರಿನ ಬಳಿ ನೀರಿನ ಹೊಂಡಗಳಲ್ಲಿ ಬಿದ್ದುಕೊಂಡಿದ್ದ ಐದು ಎಮ್ಮೆಗಳನ್ನು ಬೆಳಗ್ಗೆಯ ತಿರುಗಾಟಕ್ಕೆ ಹೋದಾಗ ಗುಂಡುಹಾರಿಸಿ ಕೊಂದಿದ್ದ! ಕಾಡೆಮ್ಮೆಗಳನ್ನು ಬೇಟೆಯಾಡುವುದು ಎಷ್ಟು ಕಷ್ಟಕರ ಮತ್ತು ಅಪಾಯಕಾರಿ ಎಂದು ಎಲ್ಲರೂ ಏಕೆ ಹೇಳುತ್ತಾರೆ ಎಂದು ತನಗೆ ತಿಳಿಯುತ್ತಿಲ್ಲ, ತಾನು ಎಷ್ಟು ಸುಲಭವಾಗಿ ಅವುಗಳನ್ನು ಬೇಟೆಯಾಡಿದೆ ಎಂದು ತನ್ನ ಪೌರುಷವನ್ನು ಹೊಗಳಿಕೊಂಡಿದ್ದ. ಊರಿನ ಎಮ್ಮೆಗಳನ್ನು ಕೊಂದಿದ್ದಕ್ಕಾಗಿ ಅವನು ಆಮೇಲೆ ದೊಡ್ಡ ಮೊತ್ತದ ದಂಡವನ್ನು ತೆರಬೇಕಾಯಿತು! ಕೆಲವು ವಿದೇಶೀ ಪ್ರವಾಸಿಗರು ದೊಡ್ಡ ಕೋಡುಗಳುಳ್ಳ ಎಮ್ಮೆಗಳನ್ನು ಕೊಂದು ಕೋಡುಗಳನ್ನು ಸಂಗ್ರಹಿಸಿ ತಮ್ಮ ದೇಶದಲ್ಲಿ ಸ್ನೇಹಿತರಿಗೆ ಅದನ್ನೇ ತೋರಿಸಿ ಮೋಸಗೊಳಿಸಿರುವ ಸಾಧ್ಯತೆಗಳೂ ಇವೆ!

ಹಲವು ವರ್ಷಗಳು ಕಾದನಂತರ ಕೊನೆಗೂ ನನಗೆ ಕಾಡು ಕೋಣನ ಬೇಟೆಯಾಡಲು ಒಪ್ಪಿಗೆ ಸಿಕ್ಕಿತು. ಎರಡೂವರೆ ದಿನಗಳು ದಕ್ಷಿಣಕ್ಕೆ ರೈಲು ಪ್ರಯಾಣ ಮಾಡಿ ಅಲ್ಲಿಂದ ಒಂದು ಟ್ರಕ್‌ನ್ನು ಗೊತ್ತುಮಾಡಿಕೊಂಡು ನನ್ನ ಸರಂಜಾಮುಗಳು ಮತ್ತು ಜನರನ್ನು ತುಂಬಿಕೊಂಡು ಕಾಡುಕೋಣಗಳ ಅರಣ್ಯಕ್ಕೆ ಹೊರಟೆ. ಮೊದಲ ರಾತ್ರಿ ಕಾಡಿನ ಮಧ್ಯೆ ಬೆಂಕಿಹಾಕಿಕೊಂಡು ಟ್ರಕ್‌ನ ಸುತ್ತಲೂ ಮಲಗಿ ನಿದ್ದೆಹೋದೆವು. ಮರುದಿನ ಬೆಳಗ್ಗೆ ಎದ್ದಾಗ ಮಂಜು ತೊಟ್ಟಿಕ್ಕುತ್ತಿದ್ದು ಎಲ್ಲರೂ ಚಳಿಯಿಂದ ನಡುಗುತ್ತಿದ್ದೆವು. ಇಂತಹ ಆಹ್ಲಾದಕರ ವಾತಾವರಣದಲ್ಲಿ ದಟ್ಟ ಕಾನನದ ಮಧ್ಯೆ ಹೋಗುವಾಗ ಅಲ್ಲಲ್ಲಿ ಜಿಂಕೆಗಳು ಹಾದುಹೋಗುತ್ತಿದ್ದವು. ಮಾರ್ಗಮಧ್ಯದಲ್ಲಿ ಉದ್ದದ ಬಿದಿರುಗಳವೊಂದನ್ನು ಹಿಡಿದು ನಾಲ್ಕು ಜನ ಬುಡಕಟ್ಟು ಜನಾಂಗದ ಯುವತಿಯರು ರಸ್ತೆಗೆ ಅಡ್ಡಲಾಗಿ ನಿಂತಿದ್ದರು. ಸೊಂಟದ ಸುತ್ತ ಕೆಲವೇ ಇಂಚುಗಳ ಬಟ್ಟೆಯ ಹೊರತಾಗಿ ಪೂರ್ಣನಗ್ನರಾಗಿದ್ದ ಅವರನ್ನು ನೋಡಲು ದೆಹಲಿಯ ನನ್ನ ಅಡಿಗೆಯವನು ಟ್ರಕ್‌ನಿಂದ ಹಾರಿಬಂದ! ಅವರಿಗೆ ಎಂಟಾಣೆಯ ಕರವನ್ನು ನೀಡಿ ಮುಂದುವರೆದೆವು. ನಾವು ಬರುವ ಸುದ್ದಿ ಇವರ ಮೂಲಕ ಎಲ್ಲಾ ಕಡೆ ಹಬ್ಬಿದ್ದಕ್ಕಾಗಿ ಮಾರ್ಗದಲ್ಲಿ ಮತ್ತೆ ಕರಕ್ಕಾಗಿ ನಮ್ಮನ್ನು ತಡೆಯಲಾಯಿತು. ನಾವು ಉಳಿಯಬೇಕಾಗಿದ್ದ ಊರಿನಲ್ಲಿ ನಮ್ಮನ್ನು ಸ್ವಾಗತಿಸಲು ಬಿದಿರಿನ ಕಮಾನನ್ನು ದಾರಿಯಲ್ಲಿ ನಿಲ್ಲಿಸಿ ಅದನ್ನು ಕಾಡಿನ ಹೂವುಗಳಿಂದ ಶೃಂಗರಿಸಿದ್ದರು. ನಾಲ್ಕಾರು ಕೋಣೆಗಳಿದ್ದ ಗುಡಿಸಲನ್ನು ನಮ್ಮ ವಾಸ್ತವ್ಯಕ್ಕೆ ಸಿದ್ಧಪಡಿಸಿದ್ದರು. ಊರಿನವರೆಲ್ಲಾ ಸೇರಿ ನಮ್ಮನ್ನು ಸ್ವಾಗತಿಸಿದರು. ಮರಿಯ ಗೊಂಡ ಜನಾಂಗದ ಅವರ ಭಾಷೆ ಮಾತ್ರ ನನಗೆ ಅರ್ಥವಾಗುತ್ತಿರಲಿಲ್ಲ, ಅದೃಷ್ಟವಶಾತ್ ಊರಿನ ಪ್ರಮುಖ ದುಬಾಶಿಯಾಗಿ ಕೆಲಸ ಮಾಡಬಲ್ಲವನಾಗಿದ್ದ.

ಊರಿನವರ ಸ್ನೇಹಗಳಿಸಲು ನನ್ನ ಬಳಿಯಿದ್ದ ಗ್ರಾಮಾಫೋನ್‌ನಿಂದ ಹಿಂದಿಯ ಕೆಲವು ಹಾಸ್ಯ ನಾಟಕಗಳನ್ನು ಕೇಳಿಸಿದಾಗ ಅವರಲ್ಲಿ ಕಂಡುಬಂದ ಹರುಷ ಮತ್ತು ಉತ್ಸಾಹ ವರ್ಣಿಸಲಸದಳವಾಗಿತ್ತು. ಕೊನೆಗೆ ಒತ್ತಾಯದಿಂದ ಅವರನ್ನು ಮನೆಗೆ ಕಳಿಸಿದರೆ ಊಟಮಾಡಿ ಅವರು ಮತ್ತೆ "ಮಶೀನ್" ಕೇಳಲು ಹಾಜರಾಗಿದ್ದರು!

ಕಾಡುಕೋಣಗಳು ಇರಬಹುದಾದ ಸ್ಥಳವನ್ನು ಗುರುತಿಸಲು ಅಲ್ಲಿನ ಕೆಲವರನ್ನು ಮಾರ್ಗದರ್ಶಿಗಳಾಗಿ ನೇಮಿಸಿಕೊಂಡು ಎಲ್ಲಾ ದಿಕ್ಕಿಗೆ ಕಳಿಸಿದೆ. ಮರುದಿನ ಬೆಳಗ್ಗೆ ಏಳು ಮೈಲು ದೂರದ ಹಳ್ಳಿಯಲ್ಲಿ ಕಾಡುಕೋಣದ ಗುಂಪೊಂದು ಹೊಲಗಳಿಗೆ ನುಗ್ಗಿದ ಮಾಹಿತಿ ದೊರಕಿತು. ಗುಂಪಿನಲ್ಲಿ ಒಂದು ದೊಡ್ಡ ಕಾಡುಕೋಣ, ಒಂದು ಸಣ್ಣ ಕೋಣ ಮತ್ತು ಕೆಲವು ಕಾಡೆಮ್ಮೆಗಳು ಇತ್ತೆಂದು ತಿಳಿದುಬಂದಿತು. ಮರುದಿನ ಬೇಗನೆ ಹೊರಟು ಬೆಳಗಾಗುವಹೊತ್ತಿಗೆ ಕಾಡುಕೋಣ ನುಗ್ಗಿದ್ದ ಹೊಲದ ಬಳಿ ಬಂದೆವು. ಅಲ್ಲಿರುವ ವ್ಯಕ್ತಿಯಿಂದ ಕಾಡುಕೋಣ ಬಂದಿದ್ದ ಸಮಾಚಾರವನ್ನು ಖಚಿತಪಡಿಸಿಕೊಂಡು ಮಾರ್ಗದರ್ಶಿಗಳು ಅದರ ಹೆಜ್ಜೆಗುರುತುಗಳನ್ನ ಹುಡುಕಲು ತೊಡಗಿದರು. ಭಾರತದ ಕಾಡುಕೋಣಗಳ ಪಾದಗಳ ಅತ್ಯಂತ ದೊಡ್ಡದಾಗಿದ್ದು ನೋಡಿದರೆ ಮಾತ್ರ ನಂಬಲು ಸಾಧ್ಯ. ಇದರ ದೇಹವು ಭಾರೀ ಗಾತ್ರವನ್ನು ಹೊಂದಿರುವುದಲ್ಲದೆ ಇದು ತೇವಾಂಶವಿರುವ ಮೃದು ಪ್ರದೇಶಗಳಲ್ಲಿ ಹೆಚ್ಚಾಗಿ ಓಡಾಡುತ್ತದೆ. ಹಾಗಾಗಿ ಇಷ್ಟು ದೊಡ್ಡ ಪಾದ ಇವುಗಳಿಗೆ ಪ್ರಕೃತಿಯ ವರವಾಗಿ ಬಂದಿರುತ್ತದೆ.



ಅಲ್ಲಿದ್ದ ಅಸಂಖ್ಯ ಹೆಜ್ಜೆಗುರುತುಗಳ ನಡುವೆ ದೊಡ್ಡ ಹೆಜ್ಜೆಗುರುತೊಂದನ್ನು ಪತ್ತೆಹಚ್ಚಿದರು. ಅದನ್ನು ಹಿಂಬಾಲಿಸಿ ದಟ್ಟಕಾಡನ್ನು ಸೇರಿದೆವು. ಅಲ್ಲಿನ ಎತ್ತರದ ಹುಲ್ಲುಗಳ ಮಧ್ಯೆ ಹೆಜ್ಜೆಗುರುತುಗಳನ್ನು ಕರಾರುವಾಕ್ಕಾಗಿ ಪತ್ತೆಹಚ್ಚಿ ಮುಂದುವರೆಯುತ್ತಿದ್ದ ಈ ಕಾಡುಜನರ ಕೌಶಲ್ಯಕ್ಕೆ ನಾನು ಬೆರಗಾದೆ. ಸೊಂಟಕ್ಕೆ ಸುತ್ತಿದ್ದ ಲಂಗೋಟಿಯ ಹೊರತಾಗಿ ಬೆತ್ತಲಾಗಿದ್ದ ಅವರು ಮೈಮೇಲೆ ಬೀಳುತ್ತಿದ್ದ ಮಂಜಿನ ಹನಿಯಲ್ಲಿ ನಡುಗುತ್ತಲೇ ಕೆಲಸ ಮಾಡುತ್ತಿದ್ದರು. ನಿಶಬ್ದವಾಗಿ ಎಚ್ಚರಿಕೆಯಿಂದ ನಾವು ಮುಂದುವರೆಯುತ್ತಿದ್ದೆವು. ನಾನು ಕಾಡುಕೋಣದ ದೊಡ್ಡದೊಡ್ಡ ಕೋಡುಗಳನ್ನು ಪ್ರಥಮ ಬಾರಿಗೆ ನೋಡುವ ತವಕದಲ್ಲಿದ್ದೆ. ಹೆಜ್ಜೆಗುರುತುಗಳಲ್ಲದೆ ಮುರಿದ ರೆಂಬೆಗಳು, ಬಾಗಿದ ಹುಲ್ಲು, ಸ್ಥಳಾಂತರಗೊಂಡ ಕಲ್ಲುಗಳು ಮುಂತಾದ ಕುರುಹುಗಳ ಮೂಲಕ ಮುಂದುವರೆಯುತ್ತಿದ್ದ ಆ ಕಾಡುಜನಗಳನ್ನು ನೋಡುವುದೇ ಒಂದು ಹಬ್ಬವಾಗಿತ್ತು.

ಎರಡು ಗಂಟೆಗಳ ಹುಡುಕಾಟದ ನಂತರ ಸ್ವಲ್ಪ ಬಯಲು ಪ್ರದೇಶಕ್ಕೆ ಬಂದೆವು. ಇಲ್ಲಿ ಕಾಡುಕೋಣ ಸಣ್ಣ ವೃತ್ತಗಳಲ್ಲಿ ಹಲವಾರು ಬಾರಿ ಸುತ್ತಿ ಮತ್ತೆ ಮುಂದಿದ್ದ ಕಾಡಿನೊಳಗೆ ಹೋಗಿತ್ತು. ಅಲ್ಲಿ ಬಿದ್ದಿದ್ದ ಅದರ ಸೆಗಣಿಯಲ್ಲಿ ಒಬ್ಬ ತನ್ನ ಕಾಲುಬೆರಳನ್ನು ತೂರಿಸಿ ವಿಜಯದ ನಗೆ ನಕ್ಕ. ಬಹಳ ವರ್ಷಗಳ ಹಿಂದೆ ನನ್ನ ಸ್ನೇಹಿತ ಶಕ್ತು ಇದೇ ರೀತಿ ಮಾಡಿದ್ದನ್ನು ನಾನು ನೆನಪಿಸಿಕೊಂಡೆ.

ಕಾಡುಕೋಣಗಳ ವಾಸನಾಗ್ರಹಣ ಶಕ್ತಿ ಉತ್ತಮವಾಗಿರುವುದರಿಂದ ನಾವು ಎಚ್ಚರಿಕೆಯಿಂದ ಮುಂದುವರೆದೆವು. ಒಮ್ಮೆಲೆ ಒಬ್ಬ ಹುಡುಗ ನನ್ನ ಹೆಗಲ ಮೇಲೆ ಕೈಯಿಟ್ಟಾಗ ನಾನು ಮುಂದಿದ್ದ ಕಾಡುಗಳನ್ನು ದೃಷ್ಟಿಸಿ ನೋಡಿದೆ. ದೊಡ್ಡ ಕೋಡುಗಳನ್ನು ಹೊತ್ತಿದ್ದ ಕಾ... ನನಗೆ ಗುರಿಯಿಡಲು ಅವಕಾಶ ಕೊಡದೆ ಓಡಿಹೋ...

ನಾವು ಕಾಡುಕೋಣಕ್ಕೆ ಇದೊಂದು ಆಕಸ್ಮಿ... ಎಂದು ಮನವರಿಕೆ ಮಾಡಿಕೊಡಲು ತಕ್ಷಣ ಹಿಂಬಾ... ಬಿಸಿಲಿನಲ್ಲಿ ಇದು ಸ್ವಲ್ಪ ಹೊತ್ತಾದರೂ ... ನಿದ್ದೆಮಾಡುತ್ತದೆ, ಹಾಗಾಗಿ ಸಮಯ ಎಷ್ಟೇ ... ಅದನ್ನು ಹುಡುಕುತ್ತೇವೆ ಎಂದು ಮಾರ್ಗದ... ಆಶ್ವಾಸನೆಯಿತ್ತರು.

ನಾವು ನಡಿಗೆಯನ್ನು ಮುಂದುವರೆಸಿ ಕಾಡುಕೋಣ... ಪಡೆದಿದ್ದ ದೊಡ್ಡ ಮರದ ಬಳಿ ಬಂದೆವು. ಅಲ್ಲಿಂದ... ಅದು ದೊಡ್ಡ ಕೆರೆಯಂತಹ ಜೌಗು ಪ್ರದೇಶದ ಕಡೆ ... ಸುಮಾರು ಇಪ್ಪತ್ತು ಎಕರೆ ಜಾಗವನ್ನು ಆವರಿಸಿದ್ದ ... ಗಿಡಗಂಟಿಗಳಿಂದ ತುಂಬಿತ್ತು ಸುತ್ತಲೂ ದಟ್ಟವಾದ ... ಅಲ್ಲಿ ಮೂಡಿದ್ದ ಹೊಸದಾದ ಹೆಜ್ಜೆಗುರುತುಗಳು ಕಾ... ಕೆರೆಯೊಳಗೆ ಹೋಗಿರುವುದಕ್ಕೆ ಸೂಚನೆಯಾಗಿತ್ತು. ನೀ... ಮುಂದುವರೆಯಲು ಹಿಂಜರಿಯುತ್ತಿದ್ದ ಮಾರ್ಗದ... ನನ್ನ ಬಂದೂಕನ್ನು ಸಿದ್ಧವಾಗಿ ಹಿಡಿದುಕೊಂಡು ... ತುಂಬಿದೆ. ಸ್ವಲ್ಪ ಮುಂದುವರೆದಾಗ ಮಾರ್ಗದರ್ಶಿಗಳು... ನೀಡಿದರು. ನಮ್ಮಿಂದ ಸುಮಾರು 150 ಅಡಿ ... ಒಂದು ದೈತ್ಯ ಕಪ್ಪು ಕಾಡುಕೋಣ ಮೊಳಕಾಲೆತ್ತರದ... ನಿಂತಿತ್ತು, ಆಗಷ್ಟೇ ನೀರನ್ನು ಕುಡಿದಿದ್ದ ಅದು ಸುಂ... ಅತ್ತಿತ್ತ ನೋಡುತ್ತಿತ್ತು, ನಾನು ಗುರಿಯಿಡಲು ಸಿದ್ಧನಾ... ಅದು ನಿಧಾನವಾಗಿ ಚಲಿಸಿತು! ಅದು ಮುಂದ... ವಿಶ್ರಾಂತಿ ಪಡೆಯುತ್ತದೆ ಎಂಬ ಖಾತ್ರಿಯಿದ್ದುದರಿಂ... ನಿಧಾನವಾಗಿ ಅದನ್ನು ಹಿಂಬಾಲಿಸಿದೆವು. ಅಪಾ... ಪ್ರಾಣಿಯೊಂದನ್ನು ಸಾವಿನಬಲೆಯಂತಹ ಸ್ಥಳದಲ್ಲಿ ಹಿಂ... ಮೂರ್ಖತನ ಮಾಡುತ್ತಿದ್ದೇನೆಯೇ ಎನ್ನುವ ... ಹಾದುಹೋಯಿತು. ನೀರಿನಲ್ಲಿ ನನ್ನ ಬೂಟು ಸದ್ದು ಮಾ... ಜೊತೆಗೆ ಹಾಳು ಕಷ್ಟಗಳನ್ನು ಹೊರತಳ್ಳಿ ಕಾಡೆಮ್ಮೆಗ... ಕಳಿಸುತ್ತಿತ್ತು.

ಇದ್ದಕ್ಕಿದ್ದಂತೆ ಮಾರ್ಗದರ್ಶಿಗಳು ಕಾಣೆಯಾದ... ಮುಂದೆ 40 ಅಡಿ ದೂರದಲ್ಲಿ ದೈತ್ಯಾಕಾರದ... ಕೆಸರಿನಿಂದ ಮೇಲೆದ್ದಿತು. ಅದು ನನ್ನ ಕಡೆ... ತಕ್ಷಣ ಗುಂಡು ಹಾರಿಸಿದೆ. ನಾನೆಣಿಸಿದಂತೆ ಅದು... ಬೀಳಲಿಲ್ಲ, ಮಾರ್ಗದರ್ಶಿಗಳಲ್ಲೊಬ್ಬ ಅದರತ್ತ ಹ... ಕಾಡೆಮ್ಮೆ ಅವನ ಕಡೆ ನುಗ್ಗಿತು. ನಾನು ಹಾರಿಸಿದ... ಗುಂಡು ಅದರ ಮುನ್ನುಗ್ಗುವಿಕೆಗೆ ತಡೆಯೊಡ್ಡಿತ್ತು... ಆ ವ್ಯಕ್ತಿ ಹುಲ್ಲಿನ ಕೆಳಗಿದ್ದ ನೀರಿನಲ್ಲಿ ಮುಳುಗಿದ... ಜೋರಾಗಿ ಓಡಿ ಮುಂದಿದ್ದ ಅರಣ್ಯವನ್ನು ಹೊ...

ಭಯದಿಂದ ನಮ್ಮ ಉಸಿರು ಸಿಕ್ಕಿಕೊಂಡಿತ್ತು... ದೊಡ್ಡದಾಗಿ ನಕ್ಕು ವಾತಾವರಣವನ್ನು ಹಗುರಾಗಿ... ಸುಧಾರಿಸಿಕೊಳ್ಳಲು ಕುಳಿತುಕೊಂಡಾಗ ಅವರೆಲ್ಲ... ಸೇದುತ್ತ ಪ್ರಪಂಚವನ್ನೇ ಮರೆತರು. ಮತ್ತೆ ಕಾ... ಹೆಜ್ಜೆಗುರುತುಗಳನ್ನು ಹುಡುಕಿಕೊಂಡು ಹೋದಾ... ಸ್ವಲ್ಪ ದೂರದಲ್ಲಿ ಸತ್ತುಬಿದ್ದಿತ್ತು.

ಕಾಡೆಮ್ಮೆಯ ಕುತ್ತಿಗೆಯನ್ನು ನನಗೆ ನೀಡಲು ... ಮೇಲೆ ಆ ಜನಗಳು ಶವದ ಜವಾಬ್ದಾರಿ ವಹಿಸಿ... ಊರಿನ ಜನಗಳೂ ಬಂದು ಸೇರಿಕೊಂಡು ಮಾ... ಅಲ್ಲಿಯೇ ಬೇಯಿಸಿ ತಿನ್ನುತ್ತಾ ಅವರೆಲ್ಲಾ ಸಂತೋ... ಕಾಲಕಳೆದರು. ಅಲ್ಲಿನ ಜನಗಳ ಸಂತೋಷವನ್ನು ನೋ... ನಾಗರಿಕತೆ ನಾವಂದುಕೊಂಡಂತೆ ನಿಜವಾಗಿ ವರ... ನನಗೆ ಆಶ್ಚರ್ಯವಾಗುತ್ತದೆ.

ಹಿಂತಿರುಗುವಾಗ ನಾನು ಕಾಡುಕೋ... ಬೇಟೆಯಾಡಿದ್ದಕ್ಕಾಗಿ ಐದು ರೂಪಾಯಿ ಕರ ಕೊಡಬೇ...

(ಮು...

ಸಂಪಾದಕೀಯ

ಕೃಪೆ: *Economic and Political Weekly*
June 3, 2017. Vol. 52. No.22

ಅನು: ಶಿವಸುಂದರ್

ಕೊಲ್ಲುವ ಸಲುವಾಗಿ ಜಾನುವಾರುಗಳನ್ನು ಮಾರುಕಟ್ಟೆಯಲ್ಲಿ ಮಾರುವುದನ್ನು ನಿಷೇಧಿಸುವ ಹೊಸ ನಿಯಮಗಳು ಸಂವಿಧಾನಕ್ಕೆ ಮಾತ್ರವಲ್ಲದೆ ಹಿಂದೂ ಧರ್ಮಕ್ಕೂ ವಿರುದ್ಧವಾಗಿದೆ..


'ಗೋವು ಪವಿತ್ರ'ವೆಂಬ ರಾಜಕಾರಣ

ಗುಜರಾತ್, ಹಿಮಾಚಲ್ ಪ್ರದೇಶ, ರಾಜಸ್ಥಾನ, ಹರ್ಯಾಣ ಮತ್ತು ಪಂಜಾಬ್ ರಾಜ್ಯಗಳಲ್ಲಿ ಹಸುಗಳನ್ನು ಕೊಲ್ಲುವುದನ್ನು ನಿಷೇಧಿಸುವ ಅತ್ಯಂತ ಕರಾಳ ಕಾನೂನುಗಳಿವೆ. ಆದರೆ ಪಶ್ಚಿಮ ಬಂಗಾಳ, ಕೇರಳ, ಮೇಘಾಲಯ, ನಾಗಾಲ್ಯಾಂಡ್ ಮತ್ತು ತ್ರಿಪುರಾಗಳು ಹಸುಗಳನ್ನು ಕೊಲ್ಲುವುದನ್ನು ನಿಷೇಧಿಸುವುದಿಲ್ಲ, ಹಾಗೆಯೇ ಒಡಿಸಾ, ಅಸ್ಸಾಂ, ಆಂಧ್ರಪ್ರದೇಶ, ತೆಲಂಗಾಣ ಮತ್ತು ತಮಿಳುನಾಡುಗಳಲ್ಲಿ ಕೆಲವು ಶರತ್ತುಗಳಿಗೆ ಬದ್ಧವಾದ ನಿಷೇಧಗಳು ಮಾತ್ರ ಅಸ್ತಿತ್ವದಲ್ಲಿವೆ. ಈ ರಾಜ್ಯಗಳಲ್ಲಿ ಗೊಡ್ಡು ಹಸುಗಳನ್ನೂ ಮತ್ತು ಗೇಯ್ಮೆ ಮಾಡದ ಎತ್ತುಗಳನ್ನು ಕೊಲ್ಲಬಹುದು.

ಕಳೆದ ಮೂರು ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಭಾರತೀಯ ಜನತಾ ಪಕ್ಷಕ್ಕೆ ಒಂದು ವಿಷಯವಂತೂ ಸ್ಪಷ್ಟವಾಗಿ ಗೊತ್ತಿದೆ. 1980ರಿಂದ ಅದು ಸಾಧಿಸುತ್ತಿರುವ ಅಸಾಧಾರಣ ಏಳಿಗೆಗೆ ಮುಖ್ಯ ಕಾರಣ ಅದು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರೆಸ್ಸೆಸ್) ಪ್ರಣೀತವಾದ ಆಕ್ರಮಣಶೀಲ ಹಿಂದೂತ್ವವಾದಿ ರಾಷ್ಟ್ರವಾದದ ರಾಜಕೀಯ ಪ್ರದರ್ಶನವನ್ನು ನಿರಂತರವಾಗಿ ಮಾಡಿಕೊಂಡುಬರುತ್ತಿರುವುದೇ ಆಗಿದೆ. ಇದೀಗ ತಾನು ಅಷ್ಟು ಪ್ರಬಲವಲ್ಲದ ರಾಜ್ಯಗಳಲ್ಲೂ ಅಧಿಕಾರವನ್ನು ಪಡೆದುಕೊಳ್ಳುವ ತಂತ್ರದ ಭಾಗವಾಗಿಯೇ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದೇಶದ ಉದ್ದಗಲಕ್ಕೂ ಜಾನುವಾರು ಹತ್ಯೆಯನ್ನು ನಿಷೇಧಿಸುವ ಕ್ರಮಕ್ಕೆ ಮುಂದಾಗಿದೆ. ಇದನ್ನದು ಪ್ರಿವೆನ್ಷನ್ ಆಫ್ ಕ್ರುಯೆಲ್ಟಿ ಟು ಅನಿಮಲ್ಸ್ ಆಕ್ಟ್ (ಪಿಸಿಎಎ) (ಪ್ರಾಣಿಗಳ ಮೇಲಿನ ಕ್ರೌರ್ಯವನ್ನು ನಿಷೇಧಿಸುವ ಕಾಯಿದೆ)ಗೆ ತಿದ್ದುಪಡಿಯನ್ನು ತರುವುದರ ಮೂಲಕ ಮಾಡುತ್ತಿದೆ. ಈ ಹೊಸ ತಿದ್ದುಪಡಿಗಳು ಜಾನುವಾರುಗಳನ್ನು ಕೊಲ್ಲುವ ಉದ್ದೇಶದಿಂದ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದನ್ನು ದೇಶಾದ್ಯಂತ ನಿಷೇಧಿಸುತ್ತದೆ. ಹಾಗೆ ಮಾಡುವ ಮೂಲಕ ಪರಿಣಾಮವಾಗಿ ಇಡೀ ದೇಶದಲ್ಲಿ ಜಾನುವಾರು ಹತ್ಯೆಗಳನ್ನು ನಿಷೇಧಿಸುವ ಪ್ರಯತ್ನವನ್ನು ಮಾಡುತ್ತಿದೆ.

ಇದಲ್ಲದೆ ಬಿಜೆಪಿ ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಸ್ವಯಂಘೋಷಿತ ಗೋ ರಕ್ಷಕರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡರಿಂದಲೂ ಬೆಂಬಲ ಪಡೆದುಕೊಂಡು ಹೊಸ ಬಗೆಯ ಆತಂಕವಾದವನ್ನೇ ಸೃಷ್ಟಿಸುತ್ತಿದ್ದಾರೆ. ಮುಸ್ಲಿಮರು ಮತ್ತು ದಲಿತರ ಮೇಲೆ ವಿಧವಿಧವಾದ ಬೆದರಿಕೆ ಮತ್ತು ಹಿಂಸಾಚಾರಗಳನ್ನು ಎಸಗುತ್ತಿದ್ದಾರೆ. ಛತ್ತೀಸ್‌ಘಡದ ಬಿಜೆಪಿ ಮುಖ್ಯಮಂತ್ರಿಯಾದ ರಮಣ್‌ಸಿಂಗ್‌ರಂತೂ ಹಸುವಿಗೆ ಉಪದ್ರವ ಕೊಡುವವರನ್ನು ನೇಣಿಗೇರಿಸುವುದಾಗಿ ಬೆದರಿಸಿದ್ದಾರೆ. ಗುಜರಾತಿನ ಬಿಜೆಪಿ ಮುಖ್ಯಮಂತ್ರಿ ಹಸುವಿನ ರಕ್ಷಣೆಯ ಮೂಲಕ ಜಗತ್ತನ್ನೇ ನೈತಿಕ ... ಅವನತಿಯಿಂದ ರಕ್ಷಿಸಬಹುದೆಂದು ಅಭಿಪ್ರಾಯ... ಇದೇ ಏಪ್ರಿಲ್‌ನಲ್ಲಿ ರಾಜಸ್ಥಾನದಲ್ಲಿ ದನಗಳನ್ನು ... ಮಾರುಕಟ್ಟೆಗೆ ಸಾಗಾಟ ಮಾಡುತ್ತಿದ್ದ ಪೆಹ್ಲೂ ಖಾ... ಗೋರಕ್ಷಕ ಗೂಂಡಾಗಳು ಮಾರಣಾಂತಿಕವಾಗಿ ... ಬಿಸಾಡಿದಾಗ ಆ ರಾಜ್ಯದ ಮಂತ್ರಿಯೊಬ್ಬರು ಪ್ರ... ಪೆಹ್ಲೂ ಖಾನ್ ಮೇಲೆ ಹಲ್ಲೆ ಮಾಡಿದ... ಹಿಡಿಯುವುದಕ್ಕಿಂತ ಜಾನುವಾರುಗಳನ್ನು... ಮಾಡುವವರನ್ನು ಹಿಡಿಯಬೇಕೆಂದು ನಿರ್ದೇಶನ ... ಹಲ್ಲೆಯಲ್ಲಿ ಗಾಯಗೊಂಡಿದ್ದ ಪೆಹ್ಲೂ... ಅದರಿಂದಾಗಿಯೇ ನಂತರದಲ್ಲಿ ಮರಣವ... ಪ್ರಾಯಶಃ ಜಾನುವಾರುಗಳನ್ನು ಕೊಲ್... ಸಹಕರಿಸುವುದು ಮನುಷ್ಯರ ಮೇಲೆ ಮಾರಣಾ... ಹಲ್ಲೆ ಮಾಡುವುದಕ್ಕಿಂತ ಮತ್ತು ... ಕಾರಣವಾಗುವುದಕ್ಕಿಂತ ದೊಡ್ಡ ಅಪರಾಧವಾ...

ಸಂವಿಧಾನವು ಧಾರ್ಮಿಕ ಆಧಾರದಲ್ಲಿ ... ರಕ್ಷಿಸುವುದಿಲ್ಲ ಎಂದು ಚೆನ್ನಾಗಿಬಲ್ಲ ನ್ಯಾಯಾಂ... 2005ರಲ್ಲಿ ಹಸು ಮತ್ತದರ ಸಂತತಿಯನ್ನು ಕೊ... ಮೇಲೆ ಸಂಪೂರ್ಣ ನಿಷೇಧ ಹೇರಿದೆ. (ಪ್ರಭುತ್ವ ... ತತ್ವದ 48ನೇ ಕಲಮು ಕೃಷಿ ಮತ್ತು ಪಶುಸಂಗೋ... ಉದ್ದೇಶಗಳಿಗೆ ವ್ಯತಿರಿಕ್ತವಾದಲ್ಲಿ ಮಾತ್ರ ... ಕೊಲ್ಲುವುದನ್ನು ನಿಷೇಧಿಸುತ್ತದೆ). ಹಸುಗಳು ಮತ್ತು...



ಭಾಗ- ಆರು

ರಾಮಮಂದಿರ ಏಕೆ ಬೇಡ?

ವೈದಿಕ ಮತದ ಕ್ರೌರ್ಯ ಭಯಾನಕವಾದುದು

■ ಪ್ರೊ| ಕೆ. ಎಸ್. ಭಗವಾನ್

ಕ್ರಿಪೂ. ಮೂರನೆಯ ಶತಮಾನದಿಂದ ಅಂದರೆ ...ಂಚದಲ್ಲೇ ಅತ್ಯಂತ ಶ್ರೇಷ್ಠ ಸಾಮ್ರಾಟನೆಂದು ಕೀರ್ತಿತ ...ಿರುವ ಅಶೋಕನ ಕಾಲದಿಂದ ಕ್ರಿ.ಶ. ಎಂಟನೆಯ ...ಮಾನದವರೆಗೆ ಅಂದರೆ ಸುಮಾರು ಒಂದು ಸಾವಿರದ ...ನ್ನೂರು ವರ್ಷಗಳವರೆಗೆ, ಭಾರತದ ರಾಷ್ಟ್ರೀಯ ...ವಾಗಿದ್ದ ಬುದ್ಧ ಧಮ್ಮವನ್ನೂ ಅದರ ಪಾಲಕರಾಗಿದ್ದ ... ಮಹಾರಾಜಾಧಿರಾಜರುಗಳನ್ನೂ ಬೌದ್ಧ ಜನ ...ುದಾಯವನ್ನೂ ಸಂಹಾರ ಮಾಡಿರುವುದನ್ನು ಓದಿದರೆ ...ಭೀತಿಯಾಗುತ್ತದೆ, ನಡುಕವಾಗುತ್ತದೆ. ವೈದಿಕ ಮತದ ...ರ್ಯ ಭಯಾನಕವಾದುದು. ಅಜ್ಞಾನಿ ರಾಜಮಹಾ ...ರುಗಳನ್ನು ಬಳಸಿಕೊಂಡು ಪುರೋಹಿತಶಾಹಿ ಹೇಗೆ ...ದ್ಧ ರಾಜರುಗಳನ್ನು, ಬೌದ್ಧಸಂಘವನ್ನು ನಾಶಪಡಿಸಿತು ...ು ಸಮಗ್ರವಾಗಿ ತಿಳಿಯಲು 'ಹಿಂದೂ ಸಾಮ್ರಾಜ್ಯ ...ಯ ಇತಿಹಾಸ' - ಕೆ. ಎಸ್. ಭಗವಾನ್ (ಅನು.), ...ನೆಯ ಮುದ್ರಣ, 2107, ಪು. 85 ರಿಂದ 161 ...ರೆಗೆ ಓದಬೇಕಾಗಿ ವಿನಂತಿ.

...ರಾಮ ಜನ್ಮಭೂಮಿ ಮತ್ತು ಬಾಬ್ರಿ ಮಸೀದಿ ವಿವಾದ ...ರ್ವೋಚ್ಚ ನ್ಯಾಯಾಲಯದ ಅಂಗಳಕ್ಕೆ ಇಳಿದು ಸುಮಾರು ...ಲ್ಕು ದಶಕಗಳ ಮೇಲಾಯಿತು. ಅದು ಸದ್ಯಕ್ಕೆ ...ಹರಿಯುವಂತೆ ಕಾಣುವುದಿಲ್ಲ. ಗೌರವಾನ್ವಿತ ಘನ ...ಯಾಲಯ ಕೂಡ ಸಂಕಷ್ಟದಲ್ಲಿ ಸಿಲುಕಿರುವಂತಿದೆ. ...ು ಪಂಗಡಗಳಿಗೂ ಅದು ಮಾತುಕತೆಯ ಮೂಲಕ ...ರ್ಥ ಮಾಡಿಕೊಳ್ಳಲು ಸೂಚಿಸಿರುವುದು ಅದರ ಗಾಢ ...ಜೆಯನ್ನು ತೋರಿಸುತ್ತದೆ. ಆದರೆ ಯಾವ ಪರಿಹಾರವೂ ...ತದ ಅಂಚಿನಲ್ಲಿ ಕಾಣುತ್ತಿಲ್ಲ. ಅದನ್ನು ಯಾವ ...ುದಾಯಕ್ಕೆ ಕೊಟ್ಟರೂ ಶಾಂತಿ ಇಲ್ಲವಾಗುತ್ತದೆ. ಗಲಭೆ ...ತ್ತು ಕದನಗಳು ನಡೆದು ರಕ್ತದ ಕೋಡಿ ಹರಿಯು ...ಂತೂ ಖಾತ್ರಿ. ಶಾಂತಿ ನೆಮ್ಮದಿಗೆ ಕಾರಣವಾಗಬೇಕಿದ್ದ ...ರ್ಗಗಳು ಪರಸ್ಪರ ಕಾದಾಡುವ ಸನ್ನಿವೇಶವನ್ನು ...ುವುದಾದರೆ ಅವು ಯಾಕೆ ಬೇಕು?

ಆದ್ದರಿಂದ ನನ್ನ ಒಂದೆರಡು ಸಲಹೆಗಳನ್ನು ರಾಷ್ಟ್ರದ ...ಂದೆ ವಿನಮ್ರವಾಗಿ ನಿವೇದಿಸಲು ಇಷ್ಟಪಡುತ್ತೇನೆ:

...ರಾಮಜನ್ಮ ಭೂಮಿ ಮತ್ತು ಬಾಬ್ರಿ ಮಸೀದಿ ವಿವಾದಕ್ಕೆ ...ಂಧಪಟ್ಟ ಸಂಪೂರ್ಣ ಸ್ಥಳವನ್ನು ಭಾರತ ಸರ್ಕಾರ ... ವಶಕ್ಕೆ ತೆಗೆದುಕೊಂಡು, ಅದನ್ನು ರಾಷ್ಟ್ರೀಯ ಆಸ್ತಿ ...ು ಘೋಷಿಸಿ, ಸಂಸತ್ತಿನಲ್ಲಿ ಕಾನೂನು ಮಾಡುವುದು ...ಯುದು. ಆಗ ರಾಷ್ಟ್ರೀಯ ಆಸ್ತಿ ಸರ್ವರಿಗೂ ಸೇರುತ್ತದೆ.

...ರಾಷ್ಟ್ರೀಯ ಆಸ್ತಿಯಾದ ಈ ಸ್ಥಳದಲ್ಲಿ ರಾಷ್ಟ್ರೀಯ ...ದ್ಯಾನವನ್ನು ನಿರ್ಮಿಸುವುದು ಎಲ್ಲಾ ದೃಷ್ಟಿಯಿಂದಲೂ ...ೇಯಸ್ಕರ. ನಮ್ಮ ದೇಶದ ಎಲ್ಲಾ ರಾಜ್ಯಗಳಲ್ಲಿ ಬೆಳೆಯುವ ಅತ್ಯುತ್ತಮ ಮತ್ತು ಅಪರೂಪವಾದ ಗಿಡ ಮರ ಹೂವುಗಳನ್ನು ಇಲ್ಲಿ ಬೆಳೆಸಲು ವ್ಯವಸ್ಥೆ ಮಾಡಬೇಕು. ಇದರಿಂದ ಸಮಗ್ರ ಭಾರತದ ಒಂದು ಆತ್ಮೀಯ ಕಿರುನೋಟ ಸಿಕ್ಕಿದಂತಾಗುತ್ತದೆ. ಇದನ್ನು ನೋಡಿ ಪ್ರತಿಯೊಬ್ಬ ವ್ಯಕ್ತಿಯೂ ನಮ್ಮ ರಾಷ್ಟ್ರೀಯ ಉದ್ಯಾನವನವೆಂದು ಹೆಮ್ಮೆ ಪಡುವಂತಾಗುತ್ತದೆ. ವಾಯು ಮಾಲಿನ್ಯದಿಂದ ಉಸಿರು ಕಟ್ಟುವ ಪರಿಸರ ಉಂಟಾಗಿ ಅದನ್ನು ನಿವಾರಿಸಲು ರಾಷ್ಟ್ರೀಯ ಉದ್ಯಾನ ಅಪಾರ ಪ್ರಮಾಣದಲ್ಲಿ ಆಮ್ಲಜನಕವನ್ನು ಉತ್ಪಾದಿಸಿ ವಾತಾವರಣವನ್ನು ಜೀವಪೋಷಕವನ್ನಾಗಿಸುವುದು.

ಈ ಪ್ರದೇಶದಲ್ಲಿ ರಾಷ್ಟ್ರೀಯ ವಸ್ತುಸಂಗ್ರಹಾಲಯವನ್ನು ನಿರ್ಮಾಣ ಮಾಡಲಿಕ್ಕೆ ಚಿಂತನೆ ನಡೆಸಬೇಕು. ಇಡೀ ದೇಶದ ಎಲ್ಲಾ ರಾಜ್ಯಗಳಲ್ಲಿ ಪ್ರಮುಖ ಎನಿಸುವ ಐತಿಹಾಸಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಇಲ್ಲಿ ಸಂಗ್ರಹಿಸಿ ಇಡಬೇಕು. ಇದನ್ನು ನೋಡುವುದರಿಂದ ಇಡೀ ದೇಶದ ಮಹತ್ವ ಕಣ್ಣಿಗೆ ಕಟ್ಟಿದಂತಾಗುತ್ತದೆ.

ಇನ್ನೊಂದು ಸೂಚನೆ - ಈ ವಿವಾದಿತ ಪ್ರದೇಶವನ್ನು ರಾಷ್ಟ್ರದ ಸೊತ್ತು ಎಂದು ಗೊತ್ತುಪಡಿಸಿ ತೀರ್ಮಾನವಾದ ಮೇಲೆ ಅಲ್ಲಿ ರಾಷ್ಟ್ರೀಯ ಆಸ್ಪತ್ರೆ ಕಟ್ಟಬೇಕು. ಜೀವನಾಶಕ್ಕೆ ಕಾರಣವಾಗುವ ಮತೀಯ ಕಟ್ಟಡ ನಿರ್ಮಾಣ ಕಾರ್ಯವನ್ನು ಬಿಟ್ಟು, ಜೀವ ಉಳಿಸುವ ಅತ್ಯಾಧುನಿಕ ಸೌಲಭ್ಯವುಳ್ಳ ಸರ್ವರೋಗಗಳಿಗೂ ಅತ್ಯುತ್ತಮ ಚಿಕಿತ್ಸೆ ಲಭ್ಯವಾಗುವಂಥ ಆಸ್ಪತ್ರೆ ನಿರ್ಮಾಣ ಮಾಡುವುದನ್ನು ಚಿಂತಿಸಬೇಕು. ಹೀಗೆ ರಾಷ್ಟ್ರೀಯ ಉದ್ಯಾನ ಅಥವಾ ರಾಷ್ಟ್ರೀಯ ಆಸ್ಪತ್ರೆ ಅಥವಾ ರಾಷ್ಟ್ರೀಯ ವಸ್ತುಸಂಗ್ರಹಾಲಯ ನಿರ್ಮಿಸುವುದರಿಂದ ಎಲ್ಲಾ ಜನರು ಒಂದೇ ಸೂರಿನಡಿ ಸೇರಲು ಅನುಕೂಲವಾಗುತ್ತದೆ. ಇದು ಸ್ನೇಹ ಸೌಹಾರ್ದತೆಗಳು ಸರ್ವ ಜನಾಂಗಗಳಲ್ಲಿ ವರ್ಧಿಸಲು ಸಾಧನವಾಗುತ್ತದೆ. ಮತೀಯ ಕೇಂದ್ರವಾದರೆ ಒಂದು ಕೋಮಿನವರು ಅಲ್ಲಿಗೆ ಹೋಗುತ್ತಾರೆ. ಇನ್ನೊಂದು ಕೋಮಿನವರು ಅಲ್ಲಿಂದ ದೂರವಾಗುತ್ತಾರೆ. ಆದ್ದರಿಂದ ಎಲ್ಲ ಮಾನವರನ್ನೂ ಹತ್ತಿರ ತರುವ ಮತ್ತು ಬೆಸೆಯುವ ಕೆಲಸ ಸದಾ ಅಪೇಕ್ಷಣೀಯ. ಯುವಕಯುವತಿಯರು ಇಲ್ಲಿಗೆ ವಾಯುವಿಹಾರಕ್ಕೆ ಬಂದು ಸ್ನೇಹಿತರಾಗಿ ಪ್ರೀತಿಸಿ, ಮದುವೆ ಆಗುವ ಮಾನವ ಮಂಟಪವಾಗುತ್ತದೆ. ರಾಷ್ಟ್ರೀಯ ಉದ್ಯಾನ ಅಥವಾ ರಾಷ್ಟ್ರೀಯ ಆಸ್ಪತ್ರೆಯಾದರೆ ಜಾತಿಮತಗಳ ಕಾಯಿಲೆ ದೂರ ಮಾಡುವುದಲ್ಲದೆ, ಅತ್ಯುತ್ತಮ ರೋಗ ನಿವಾರಣಾ ಕೇಂದ್ರ ಆಗುವುದು. ನಿಜದ ಅರ್ಥದಲ್ಲಿ ನೆಮ್ಮದಿಯನ್ನು ನೆಲೆಗೊಳಿಸುವ ಕೇಂದ್ರವಾಗುವುದು. ಇಲ್ಲದಿದ್ದರೆ ಕೋಮು ಜಗಳಗಳ ಕಾಳ್ಗಿಚ್ಚು ಹಬ್ಬಿ ದೇಶ ಅಶಾಂತಿಯ ಬೀಡಾಗುವುದು.

ಹೀಗೆ ಮಾಡುವುದರಿಂದ ಎರಡು ಕಡೆಯವರೂ ಸಮಾಧಾನಪಟ್ಟುಕೊಳ್ಳುತ್ತಾರೆಂದು ಭಾವಿಸೋಣ. ಆಗ ಯಾರಿಗೂ ಸೋಲಿಲ್ಲ, ನಷ್ಟವಿಲ್ಲ; ಅಥವಾ ಜಯವೂ ಇಲ್ಲ, ಲಾಭವೂ ಇಲ್ಲ. ರಾಷ್ಟ್ರದ ಅಭ್ಯುದಯ ಮಾತ್ರ ಗೆಲ್ಲುತ್ತದೆ, ಗೆಲ್ಲಬೇಕು.

ಮಧ್ಯಯುಗದಲ್ಲಿ ಯೂರೋಪಿನಲ್ಲಿ ನಿರ್ಮಾಣವಾದ ಭಾರೀ ಇಗರ್ಜಿಗಳು ಈಗ ಹಾಳು ಮೇಯುತ್ತಿವೆ. ಜನರು ಚರ್ಚ್‌ಗಳಿಗೆ ಹೋಗುವುದನ್ನು ಬಿಟ್ಟುಬಿಡುತ್ತಿದ್ದಾರೆ. ಏಕೆಂದರೆ, ಅಲ್ಲಿ ಏನೂ ವಿಚಾರ ವಿಜ್ಞಾನ ಮಾನವೀಯತೆಯ ಬೀಜ ಬಿತ್ತನೆ ಆಗುತ್ತಿಲ್ಲ. ದೇವಮಂದಿರಗಳು ಎಂದು ಹೇಳುವ ಕಡೆ ಅಜ್ಞಾನ, ಅಂಧಕಾರ, ಅರ್ಚಕರ ಅಟ್ಟಹಾಸ, ಅನ್ಯಮತಗಳವರ ಮೇಲೆ ತಾತ್ಸಾರ ಮತ್ತು ತಿರಸ್ಕಾರಗಳು ಹರಡುತ್ತಿವೆ. ಆದ್ದರಿಂದ ಪೂಜಾಸ್ಥಳಗಳಿಗೆ ಹೋಗುವುದನ್ನು ತೊರೆದು ಗ್ರಂಥಾಲಯಗಳಿಗೆ ಜ್ಞಾನಾರ್ಜನೆಗೆ ಹೋಗುವುದನ್ನು ಜನರು ರೂಢಿಸಿಕೊಳ್ಳಬೇಕು. ಗ್ರಂಥಾಲಯವೇ ನಿಜವಾದ ದೇವಾಲಯ, ಜ್ಞಾನ ದೇವಾಲಯ, ಮಾನವ ದೇವಾಲಯ.

ಹಿಂದಿನ ಕಾಲದಲ್ಲಿ ಆದಿಮಾನವ ಒಗ್ಗಟ್ಟಾಗದಿದ್ದರೆ ದುಷ್ಟಮೃಗಗಳಿಂದಲೂ, ಆಕ್ರಮಣಕಾರಿ ಬುಡಕಟ್ಟುಗಳಿಂದಲೂ ಆಗುತ್ತಿದ್ದ ದಾಳಿಗಳಿಗೆ ತುತ್ತಾಗುತ್ತಿದ್ದನು. ಇದನ್ನು ತಡೆಗಟ್ಟಲು ದೇವರು ಮತ್ತು ಮತದ ಹೆಸರಿನಲ್ಲಿ ಜನರು ಸಂಘಟಿತರಾಗುವ ಅವಶ್ಯಕತೆ ಇತ್ತು. ಈಗ ಅಂಥ ಅನಿವಾರ್ಯತೆ ಕಂಡುಬರುವುದಿಲ್ಲ. ಏಕೆಂದರೆ ಪ್ರತಿಯೊಂದು ದೇಶವೂ ತನ್ನನ್ನು ರಕ್ಷಣೆ ಮಾಡಿಕೊಳ್ಳಲು ತನ್ನದೇ ಆದ ಸರ್ಕಾರ ಮತ್ತು ಸೇನಾಬಲಗಳನ್ನು ಹೊಂದಿರುತ್ತದೆ. ಯುದ್ಧವನ್ನು ಆದಷ್ಟು ಮಟ್ಟಿಗೆ ತಡೆಗಟ್ಟಲು, ನಿವಾರಿಸಲು ವಿಶ್ವಮಟ್ಟದಲ್ಲಿ ವಿಶ್ವಸಂಸ್ಥೆಯನ್ನು ಸ್ಥಾಪಿಸಿಕೊಂಡಿದ್ದೇವೆ. ಒಂದು ಕಾಲದಲ್ಲಿ ಮತೀಯ ಶಕ್ತಿಗೆ ಮಾನ್ಯತೆ ಇತ್ತು. ಸುಮಾರು ಹತ್ತೊಂಬತ್ತನೆಯ ಶತಮಾನದಿಂದ ಈಚೆಗೆ ದೇವಕೇಂದ್ರಿತ ಆಲೋಚನಾ ಕ್ರಮವನ್ನು ಬಿಟ್ಟು, ಮಾನವ ಕೇಂದ್ರಿತ ಅಥವಾ ಜೀವ ಕೇಂದ್ರಿತ ಕ್ಷೇಮಾಭಿವೃದ್ಧಿಯ ಕಡೆ ಮಾನವ ಕ್ರಿಯಾಶೀಲನಾಗಿರುವುದು ಹೆಚ್ಚಾಗಿ ಕಂಡುಬರುತ್ತಿದೆ. ಇದು ಒಳ್ಳೆಯ ಬೆಳವಣಿಗೆ. ಇದರಿಂದ ವಿಚಾರ ವಿಜ್ಞಾನ ಐಹಿಕ ಅಭಿವೃದ್ಧಿಗೆ ಪ್ರೇರಣೆ ಅಧಿಕವಾಗಿ ಒದಗುವುದು.



ಭಾರತ ಸರ್ಕಾರ ಮೊನ್ನೆ (01-04-2017ರಂದು) ಸಣ್ಣ ಸಣ್ಣ ಬ್ಯಾಂಕುಗಳನ್ನು ದೊಡ್ಡ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಜೊತೆ ವಿಲೀನಗೊಳಿಸಿತು. ಇಂಥದೇ ಕಾರ್ಯವನ್ನು, ಅಂದರೆ ಎಲ್ಲ ಜಾತಿಗಳನ್ನು ಸಮಾನಗೊಳಿಸಿ ಭಾರತೀಯರು ಎಂಬ ದೊಡ್ಡ ಸಮುದಾಯವನ್ನಾಗಿ ರೂಪಿಸಿದರೆ ಸನ್ಮಾನ್ಯ ಮೋದಿ ಅವರ ಪ್ರಧಾನಮಂತ್ರಿ ಸರ್ಕಾರ ಅಜರಾಮರವಾಗಿ ಬದುಕ್ತದೆ. ಮಾನ್ಯ ಮೋದಿ ಅವರು "ಭಗವದ್ಗೀತೆ ರಾಷ್ಟ್ರೀಯ ಗ್ರಂಥವಲ್ಲ 'ಭಾರತ ಸಂವಿಧಾನ'ವೇ ರಾಷ್ಟ್ರೀಯ ಗ್ರಂಥ" ಎಂದು ಘೋಷಿಸಿ ದೊಡ್ಡ ಮಾನಸಿಕ ಬದಲಾವಣೆಯನ್ನು ತಂದರು. ಹಾಗೆಯೇ ಅವರು ಎಲ್ಲ ಜನರನ್ನು ಒಂದು ಮಾಡಬೇಕಾಗಿದೆ. ಇದು ರಾಷ್ಟ್ರೀಯ ಜರೂರು.

ಜಾತಿಯನ್ನು ನಿರ್ಮೂಲ ಮಾಡುವುದು ಕಷ್ಟ ಎಂದು ಸಾಮಾನ್ಯವಾಗಿ ಹೇಳುತ್ತಾರೆ. ನನಗೆ ಹಾಗೆ ಅನ್ನಿಸುವುದಿಲ್ಲ. ಜಾತಿಯನ್ನು ಅಳಿಸುವುದು ನಿಜಕ್ಕೂ ಸುಲಭದ ಕೆಲಸ. ಅದಕ್ಕೆ ಬೇಕಾದದ್ದು ತಾತ್ವಿಕ ಚಿಂತನೆ, ಮಾನಸಿಕ ಸಿದ್ಧತೆ, ಜಾರಿಗೊಳಿಸುವ ಧೈರ್ಯ ಮೊದಲಾಗಬೇಕು. ಅಂತರ್‌ಜಾತಿ ಮದುವೆಗಳನ್ನು ಕಡ್ಡಾಯ ಮಾಡಬೇಕು. ಹೇಗೆಂದರೆ, ಅಂತರ್ಜಾತಿ ವಿವಾಹ ಆದವರಿಗೆ ಮಾತ್ರ ಸರ್ಕಾರಿ ನೌಕರಿ, ಜೀವವಿಮೆ ಸೌಲಭ್ಯ ಮನೆ ಮತ್ತು ನಿವೇಶನಗಳನ್ನು ವಿತರಿಸಲಾಗುವುದು ಎಂದು ಶಾಸನ ಮಾಡಬೇಕಾಗಿದೆ. ಆಗ ಜನರು ಅದ್ಭುತವಾಗಿ ಬದಲಾಗುತ್ತಾರೆ. ಸರ್ಕಾರದಿಂದ ಜನರಿಗೆ ಏನೆಲ್ಲ ನಾಗರಿಕ ಸೌಲಭ್ಯಗಳು ಇವೆಯೋ ಅವೆಲ್ಲ ಜಾತಿ ಬಿಟ್ಟು ಮದುವೆ ಆದವರಿಗೆ ಮಾತ್ರ ಸಿಗುವಂತೆ ಸರ್ಕಾರ ಮಸೂದೆ ತರಬೇಕು. ತಂದೆತಾಯಿಗಳ ಜಾತಿಯನ್ನು ಬಿಟ್ಟು ಮಕ್ಕಳು ಬೇರೆ ಜಾತಿಯ ಹೆಣ್ಣು ಗಂಡನ್ನು ವಿವಾಹವಾದರೆ, ಹೀಗೆ ಇದು ಐದು ಹತ್ತು ತಲೆಮಾರು ಗಳವರೆಗೆ ಜಾರಿಯಾದರೆ ಜಾತಿ ಎಂಬ ಭೂತ ಅಳಿದು ಎಲ್ಲರೂ ಒಂದು ಎಂಬ ಬೆಳಕು ಪ್ರಕಾಶಮಾನವಾಗುತ್ತದೆ. ಹೀಗಾದಾಗ ಜಾತಿ ತನಗೆ ತಾನೇ ಒಣಎಲೆಯಂತೆ ಉದುರಿಹೋಗುತ್ತದೆ. ಈಗ ಸರ್ಕಾರ ಜಾತಿಯನ್ನು ಗುರುತಿಸುತ್ತಿರುವುದರಿಂದ ಜಾತಿಗೆ ಬೆಲೆ ಇದೆ, ಅಷ್ಟೆ. ಸರ್ಕಾರ ತನ್ನ ನೀತಿಯನ್ನು ಮಾರ್ಪಾಡು ಮಾಡಿಕೊಂಡರೆ ಸಮಾಜ ಸಹ ಬೇಗ ಬದಲಾಗುತ್ತದೆ. ಮಿಶ್ರ ತಳಿಯಿಂದ ಅಥವಾ ಕಸಿಕಟ್ಟುವುದರಿಂದ, ಫಸಲು ಹುಲುಸಾಗಿ ಬೆಳೆದು ಇಳುವರಿ ಹೆಚ್ಚಾಗುವಂತೆ ಮಾನವ ಜನಾಂಗದಲ್ಲಿ ಆರ್ಥಿಕ ಸಮೃದ್ಧಿ ಮತ್ತು ಬೌದ್ಧಿಕ ಸಾಮರ್ಥ್ಯ ಹೆಚ್ಚಾಗುವುದು. ವರ್ಣಸಂಕರದಿಂದ ವೀರ ಪಾಂಡವರು ಜನಿಸಿದ ಕತೆ ಎಲ್ಲರ ಮನಸ್ಸನ್ನು ಅರಳಿಸಲಿ.

ಒಂದು ಕಾಲದಲ್ಲಿ ಅಗತ್ಯ ಎನಿಸಿದ್ದ ಸಂಸ್ಥೆಗಳು ಯುಗ ಉರುಳಿದಂತೆ ಅಪ್ರಸ್ತುತ, ಅನಗತ್ಯ ಅಪಾಯಕಾರಿ ಆಗುತ್ತವೆ. ಅವುಗಳನ್ನು ನಿರ್ದಾಕ್ಷಿಣ್ಯವಾಗಿ ಮಾನವಕುಲದ ಹಿತಕ್ಕಾಗಿ ನೆಲಸಮ ಮಾಡಲೇಬೇಕು. ಇದೇ ಕ್ರಮವನ್ನು ವಿಸ್ತರಿಸುತ್ತಾ ಹೋದರೆ ಮಾನವ ಜನಾಂಗವೆಲ್ಲ ಒಂದು ಎಂಬ ಭಾವನೆ ಬೆಳೆದು ದೃಢವಾಗುತ್ತದೆ. ಆಗ ಯುದ್ಧಗಳು ನಿಂತುಹೋಗುತ್ತವೆ. ಏಕೆಂದರೆ ಅಯ್ಯೋ, ಯುದ್ಧಬೇಡಿ, ಅಲ್ಲಿ ನನ್ನ ಅಣ್ಣ ತಮ್ಮಂದಿರಿದ್ದಾರೆ, ಅಕ್ಕ ತಂಗಿಯರಿದ್ದಾರೆ; ನಮ್ಮ ಮಕ್ಕಳು ಇದ್ದಾರೆ; ಇಲ್ಲಿ ನನ್ನ ಬಂಧುಗಳು ಇದ್ದಾರೆ. ಆ ಕಡೆ ನನ್ನ ಮೊಮ್ಮಕ್ಕಳು ಇದ್ದಾರೆ, ಈ ಕಡೆ ನಮ್ಮ ದೂರದ ಸಂಬಂಧಿಕರು ಇದ್ದಾರೆ ಎಂದು ಬಾಂಬುಗಳನ್ನು ಹಾಕಲು ಹಿಂಜರಿಯುವರು. ಈ ನೆಂಟಸ್ತನದ ಭಾವನೆ ಯುದ್ಧದ ದುರಂತವನ್ನು ತಪ್ಪಿಸುವುದರಲ್ಲಿ ಯಾವ ಅನುಮಾನವೂ ಇಲ್ಲ. ರಕ್ತ ಸಂಬಂಧ ಎಲ್ಲಕ್ಕಿಂತ ದೊಡ್ಡದು. ಇಡೀ ಪ್ರಪಂಚದಲ್ಲಿ ಸಮಗ್ರ ಮಾನವ ಸಂಬಂಧ ಬೆಳೆದರೆ ವಿಶ್ವಶಾಂತಿ ನೆಲೆಸುತ್ತದೆ. ■

...ಾದರೂ, ಕೆಲಸ ಮಾಡಲು ಅನರ್ಹವಾದರೂ ಅವುಗಳ ...ಲ ಮತ್ತು ಸಗಣಿಯಿಂದ ಜೈವಿಕ ಅನಿಲವನ್ನು ಮತ್ತು ...ವು ಬಗೆಯ ಔಷಧಗಳನ್ನು ಉತ್ಪಾದಿಸಬಹುದೆಂದು ... ನ್ಯಾಯಾಧೀಶರ ಪೀಠವು ಅಭಿಪ್ರಾಯಪಟ್ಟಿದೆ. ಇಂಥಾ ...ು ನ್ಯಾಯಾದೇಶದ ಹಿಂದೆ ಮುದಿಯಾದರೂ ...-ಮಾತೆಯನ್ನು ಪೂಜಾರ್ಹಳೆಂಬ ಹಿಂದೂ ...ೋಧರ್ಮ ಕೆಲಸ ಮಾಡಿಲ್ಲ ಎಂದು ಹೇಳಲು ...ವೇ?

...ಗೊಡ್ಡು ಮತ್ತು ಗೇಯ್ಮೆ ಮಾಡದ ಜಾನುವಾರುಗಳನ್ನು ...ವುದನ್ನೂ ನಿಷೇಧಿಸುವ ಮೂಲಕ ಸಂಪನ್ಮೂಲಗಳು (ಮೇವು ಇತ್ಯಾದಿ) ವ್ಯರ್ಥವಾಗುವುದಿಲ್ಲವೇ? ಹಾಗೆಯೇ ಅವುಗಳನ್ನು ನಿಧಾನವಾಗಿ ಸಾಯಲು ಬಿಡುವುದರ ಮೂಲಕ ಹಲವಾರು ಜನರ ಆಹಾರವನ್ನು ಮತ್ತು ಜೀವನೋಪಾಯವನ್ನು ಕಸಿದುಕೊಂಡಂತಾಗುವುದಿಲ್ಲವೇ? ಈ ರೀತಿ ಜಾನುವಾರು ಹತ್ಯಾ ನಿಷೇಧವನ್ನು ಹೇರುವ ಮೂಲಕ ದಲಿತರು, ಆದಿವಾಸಿಗಳು, ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಖ್ಖರು ಮತ್ತು ಹಲವಾರು ಹಿಂದೂಗಳೂ ಸಹ ತಮಗಿರುವ ಸೀಮಿತ ಸಂಪನ್ಮೂಲಗಳ ಮಿತಿಗಳಲ್ಲಿ ವಾರಕ್ಕೊಮ್ಮೆ ಅಥವಾ ಎರಡು ಬಾರಿ ದಕ್ಕಿಸಿಕೊಳ್ಳುತ್ತಿದ್ದ ಪ್ರಾಣಿ ಜನ್ಯ ಪ್ರೋಟೀನ್ ಆಹಾರದಿಂದ ವಂಚಿಸಿದಂತಾಗುವುದಿಲ್ಲವೇ?



ಮತ್ತೊಂದು ವಿಷಯವೆಂದರೆ ಪಿಸಿಎಪಿ ಕೆಳಗೆ ಮಾಡಿರುವ ಈ ನಿಯಮಗಳು 48ನೇ ಕಲಮಿನಿಂದ ಮಾರ್ಗದರ್ಶನ ಪಡೆದ ಕಾಯಿದೆಯಿಂದ ಪ್ರೇರಣೆ ಪಡೆದಿಲ್ಲ.

ಆಧ್ಯಾತ್ಮಿಕವಾಗಿ ಮೋಕ್ಷವನ್ನು ಪಡೆದುಕೊಳ್ಳುವ ಗುರಿಯುಳ್ಳ ಹತ್ತು ಹಲವು ಬಗೆಯ ಶ್ರದ್ಧೆ ಮತ್ತು ನಂಬಿಕೆಗಳ ಸಮ್ಮಿಳಿತವಾಗಿರುವ ಹಿಂದೂ ಧರ್ಮಕ್ಕೆ ವ್ಯತಿರಿಕ್ತವಾಗಿ ಬಿಜೆಪಿ ಸರ್ಕಾರದ ಸಿದ್ಧಾಂತವು ಹಿಂದೂತ್ವವಾಗಿದೆ. ಅದು ಸಂಪೂರ್ಣ ರಾಜಕೀಯ ಸರ್ವಾಧಿಕಾರವನ್ನು ಪಡೆಯುವ ಮತ್ತು ತನ್ನ ಮಾದರಿ ಹಿಂದೂ ಧರ್ಮವನ್ನು ಹೇರುವ ಉದ್ದೇಶವನ್ನು ಹೊಂದಿದೆ. ಪಿಸಿಎಪಿಗೆ ತಂದಿರುವ ಹೊಸ ತಿದ್ದುಪಡಿಗಳು ಬಿಜೆಪಿ ವ್ಯಾಖ್ಯಾನದ ಹಿಂದೂ ಧರ್ಮವನ್ನು ಒಪ್ಪದವರ ಜೀವನ ವಿಧಾನಗಳನ್ನೂ ಮತ್ತು ಜೀವನೋಪಾಯಗಳನ್ನೂ ನಿರಾಕರಿಸುತ್ತದೆ. ಹಾಗೆಯೇ ಈ ಕ್ರಮಗಳ ಮೂಲಕ ಹಿಂದೂ ಧರ್ಮೀಯರ ಧಾರ್ಮಿಕ ಮನೋಭಾವನೆಗಳನ್ನು ದುರ್ಬಳಕೆ ಮಾಡಿಕೊಂಡು ಬಹುಸಂಖ್ಯಾತರ ಜನಾಭಿಪ್ರಾಯವನ್ನು ತನ್ನೆಡೆಗೆ ಸೆಳೆದುಕೊಳ್ಳುವ ಮೂಲಕ ಬರಲಿರುವ ವಿಧಾನಸಭಾ ಚುನಾವಣೆಗಳಲ್ಲೂ ಮತ್ತು 2019ರ ಸಾರ್ವತ್ರಿಕ ಚುನಾವಣೆಗಳಲ್ಲೂ ಮೇಲುಗೈ ಪಡೆಯುವ ಉದ್ದೇಶವನ್ನೂ ಹೊಂದಿದೆ.


ಪಿಸಿಎಪಿಗೆ ತಂದಿರುವ ಹೊಸ ತಿದ್ದುಪಡಿಗಳನ್ನು ಅನಿವಾರ್ಯವಾಗಿ ನ್ಯಾಯಾಲಯಗಳಲ್ಲಿ ಪ್ರಶ್ನಿಸಲಾಗುವುದು ಮತ್ತು ನ್ಯಾಯಾಲಯಗಳು ಈ ನಿಯಮಗಳನ್ನು ರದ್ದು ಕೂಡಾ ಮಾಡಬಹುದು. ಹಾಗಾಗುವುದೂ ಸಹ ಬಿಜೆಪಿಗೆ ಅನುಕೂಲವೇ... ಆಗ ಅವರು ತಾವು ವೈದಿಕ ಸಂಸ್ಕೃತಿಯ ವೈಭವವನ್ನು ಜಾರಿಗೆತರಲು ಪ್ರಯತ್ನಿಸುತ್ತಿದ್ದರೂ ನ್ಯಾಯಾಲಯಗಳು ತಮ್ಮ ದಾರಿಗೆ ಅಡ್ಡವಾಗಿವೆಯೆಂದು ಬಹುಸಂಖ್ಯಾತ ಹಿಂದೂ ಮತದಾರರಿಗೆ "ಮನವರಿಕೆ" ಮಾಡಿಕೊಡಬಹುದು. ಆದರೆ ಅಸಲಿ ವಿಷಯವೆಂದರೆ ವೇದಕಾಲದಲ್ಲಾಗಲೀ, ವೇದೋತ್ತರ ಕಾಲದಲ್ಲಾಗಲೀ ಹಸುವನ್ನು ಪವಿತ್ರ ಎಂದೇನೂ ಪರಿಗಣಿಸಿರಲಿಲ್ಲ. ಜಾನುವಾರುಗಳನ್ನು ಕೊಲ್ಲುವುದಾಗಲೀ, ಹಸುವಿನ ಮಾಂಸವನ್ನು ತಿನ್ನುವುದಾಗಲೀ ನೈತಿಕ ಉಲ್ಲಂಘನೆಯೂ ಆಗಿರಲಿಲ್ಲ, ಯಾವುದೇ ಕಾನೂನುಗಳ ಉಲ್ಲಂಘನೆಯೂ ಆಗಿರಲಿಲ್ಲ. ಮೇಲಾಗಿ ಕ್ರಿ.ಪೂ. 1500 ರಿಂದ ಕ್ರಿ.ಪೂ. 600 ರ ತನಕ ಹಸುವಿನ ಮಾಂಸವನ್ನು ತಿನ್ನುವುದು ಭಾರತದಲ್ಲಿ ಅತ್ಯಂತ ಸಾಮಾನ್ಯವಾದ ಸಂಗತಿಯಾಗಿತ್ತು. ಆದರೆ ಇಂಥಾ ಸತ್ಯಸಂಗತಿಗಳನ್ನು ಜೀರ್ಣಿಸಿಕೊಳ್ಳಲಾಗದ ಹಿಂದೂತ್ವವಾದಿಗಳು ಹಿಂದೂ ಧರ್ಮದ ಇತಿಹಾಸದ ಈ ಭಾಗವನ್ನೇ ತಮ್ಮ ಅನುಕೂಲಕ್ಕೆ ತಕ್ಕಂತೆ ಕತ್ತರಿಸಿ ಹಾಕಲು ಯತ್ನಿಸುತ್ತಿದ್ದಾರೆ.


ವಾಸ್ತವವಾಗಿ ಈ ಹೊಸ ಪಿಸಿಎಪಿ ತಿದ್ದುಪಡಿ ನಿಯಮಗಳು ಅಸಂವಿಧಾನಿಕ ಮಾತ್ರವಲ್ಲ, ಅಹಿಂದೂ ಕೂಡ ಆಗಿದೆ. ■

ಗೋವು ಬಡಿದರೆ ಅಮಾನುಷ, ಜನರನ್ನು ಕೊಂದರೆ ಮ

ಹೊಗಳಿಕೆ ತೆಗಳಿಕೆ

ಗೋವು ಮಾತ್ರವಲ್ಲ ಇತರ ಪ್ರಾಣಿಗಳನ್ನೂ ಆಹಾರಕ್ಕಾಗಿ ಕೊಲ್ಲುವ ವಿಚಾರದಲ್ಲಿ ಮೋದಿ ಮೊನ್ನೆ ಹೊರಡಿಸಿದ ಮಹಾಮೂರ್ಖ ನಿರ್ಬಂಧಗಳ ವಿರುದ್ಧ ಕೇರಳದಲ್ಲಿ ಕೆಲವು ಯುವಕರು ಸಾರ್ವಜನಿಕವಾಗಿ ಒಂದು ಗಂಡು ಕರುವನ್ನು ಕೊಂದು ಮಾಂಸ ಹಂಚಿದರು ಎಂದು ರಾಜಕಾರಣಿಗಳು ಮತ್ತು ಪತ್ರಿಕೆಗಳವರು ಅದು ಅಮಾನುಷ, ಕ್ರೂರ, ಬರ್ಬರ, ಶಾಕಿಂಗ್ ಎಂಬೆಲ್ಲಾ ವಿಶ್ಲೇಷಣೆಗಳೊಂದಿಗೆ ಭಯಂಕರವಾಗಿ ಅಳುತ್ತಾ ಕೂಗಾಡಿದರು. ರಾಹುಲ್ ಗಾಂಧಿ ಸಹ ಅದನ್ನು ಖಂಡಿಸುತ್ತಾ ಆ ಎತ್ತನ್ನು ಕೊಲ್ಲುವುದರಲ್ಲಿ ಪಾಲ್ಗೊಂಡಿದ್ದ ಮೂವರು ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಪಕ್ಷದಿಂದ ಅಮಾನತುಗೊಳಿಸಿದರು.





ಆದರೆ ಮೋದಿ ಬಿಡಿ ರಾಹುಲ್ ಗಾಂಧಿ ಸಹ ಜಾರ್ಖಂಡ್ ರಾಜ್ಯದಲ್ಲಿ ಮೊನ್ನೆ ಮೊನ್ನೆ ಎಂಟು ಜನರನ್ನು 'ಮಕ್ಕಳ ಅಪಹರಣಕಾರರು' ಎಂಬ ಗುಮಾನಿ ಮೇಲೆ ಬರ್ಬರವಾಗಿ ಕೊಂದಾಗ ಅದು ಅಮಾನುಷ, ಕ್ರೂರ, ಬರ್ಬರ ಎಂದು ಯಾರಿಗೂ ಅನಿಸಲೇ ಇಲ್ಲ, ರಾಜಸ್ಥಾನದಲ್ಲಿ ಪೆಹ್ಲೂ ಖಾನ್‌ನನ್ನು ಬಡಿದು ಕೊಂದಾಗ ಅಥವಾ ಮಧ್ಯಪ್ರದೇಶದಲ್ಲಿ ಇಬ್ಬರು ಹೈನುಗಾರರನ್ನು ಮರಕ್ಕೆ ನೇಣು ಹಾಕಿ ಕೊಂದಾಗ ದೇಶದ ಯಾವುದೇ ಪತ್ರಿಕೆಗಳವರಿಗೆ ಅಥವಾ ರಾಜಕಾರಣಿಗಳಿಗೆ ಅದು ಅಮಾನುಷ ಬರ್ಬರ ಕ್ರೂರ ಅನಿಸಲೇ ಇಲ್ಲ!

ಕೇವಲ ಒಂದು ಹಿಡಿಯಷ್ಟು ಇರುವ ವೈಷ್ಣವರಿಗೆ ಗೋವು ಪೂಜ್ಯ ಎಂದ ಮಾತ್ರಕ್ಕೆ ಅದನ್ನೇ ಎಲ್ಲಾ ಹಿಂದೂಗಳಿಗೆ ಪೂಜ್ಯ ಎನ್ನುವ ರೀತಿಯಲ್ಲಿ ಹಿಂದುಳಿದ ವರ್ಗದ ಬೆಪ್ಪರನ್ನು ವೈದಿಕರು ಬ್ರೇನ್‌ವಾಶ್ ಮಾಡಿದರು. ಜೀವನದಲ್ಲಿ ಎಂದೂ ಕೃಷ್ಣನಿಗೆ ಕೈಮುಗಿಯದವರು ಗೋವು ಪೂಜ್ಯ ಅನ್ನತೊಡಗಿದರು. ಬ್ರಾಹ್ಮಣರಿಗಿಂತಲೂ ತಾವು ಮೇಲು ಎಂದು ಸಾಧಿಸುವ ಸಮಯಸಾಧಕ ಜೈನರೂ ಗೋವಿನ ಬಗ್ಗೆ ಕೃತ್ರಿಮ ಭಕ್ತಿ ತೋರಿಸಿ ಹಿಂದೂತ್ವದ ಅಡಿ ತಾವೂ ಲಾಭ ಮಾಡಿಕೊಳ್ಳಲಾರಂಭಿಸಿದರು. ಅವರದೇ ಜೈನ ಬಂಧುಗಳು ದಿನಾಲೂ ಲಕ್ಷಾಂತರ ಗೋವುಗಳನ್ನು ಕೊಂದು ವಿದೇಶಕ್ಕೆ ಬೀಫ್ ರಫ್ತು ಮಾಡುವುದನ್ನು ಈ ಜೈನರು ಕಂಡೂಕಾಣದಂತಿರುವರು. ಮುಂದಿನ ವರ್ಷದ ಶ್ರವಣ ಬೆಳಗೊಳದ ಜೈನರ ಬಾಹುಬಲಿ ಮಸ್ತಕಾಭಿಷೇಕಕ್ಕೆ ಅತಿ ಹೆಚ್ಚಿನ ದೇಣಿಗೆ ಈ ಜೈನ ಗೋಮಾಂಸ ರಫ್ತುಗಾರರೇ ಕೊಡುತ್ತಿರುವುದಂತೆ. ಈ ಜೈನರಿಗಿಂತ ದೊಡ್ಡ ಕಲ್ಲು ಹೃದಯದವರು ಯಾರಿದ್ದಾರೆ? ಆ ವೈರಾಗ್ಯ ಮೂರ್ತಿ ಬಾಹುಬಲಿಗೂ ಇವರ ಕೈಯಿಂದ ಸುರಿಯುವ ಅಭಿಷೇಕದಿಂದ ಮೈ ಉರಿದು ಹೋಗಬಹುದು.

ನಮ್ಮ ಕರ್ನಾಟಕದಲ್ಲಿ ನೂರಾರು ಮಾರಿಯಮ್ಮ ಗುಡಿಗಳಿವೆ. ಅಲ್ಲಿ ಪ್ರಾಣಿ ಬಲಿ ನಿಷೇಧವಿದ್ದರೂ ಹಳ್ಳಿಗರು ಪ್ರತಿವರ್ಷ ಸಾವಿರಾರು ಆಡು ಕುರಿ ಕೋಣದ ಕರುಗಳನ್ನು ಸಾರ್ವಜನಿಕವಾಗಿ ಬಲಿ ಕೊಡುತ್ತಾರೆ. ದೇವರಿಗೆ ಬಲಿ ಅರ್ಪಿಸುವವರಲ್ಲಿ ಹೆಚ್ಚಿನವರು ಗೋವುಪ್ರಿಯ ಬಿಜೆಪಿಯವರೇ ಆಗಿರುವುದು ವಿಪರ್ಯಾಸ. ಕೇರಳದಲ್ಲಿ ಒಂದೇ ಒಂದು ಗಂಡು ಕರುವನ್ನು ಸಾರ್ವಜನಿಕವಾಗಿ ಹತ್ಯೆ ಮಾಡಿದಾಗ ರಾಜಕಾರಣಿಗಳಿಗೆ ಮತ್ತು ಪತ್ರಕರ್ತರಿಗೆ ಅದು ಅಮಾನುಷ, ಕ್ರೂರ, ಬರ್ಬರ, ಭೀಭತ್ಸವಾಗಿ ಕಂಡಿತು. ಆದರೆ ಮಾರಮ್ಮ ಗುಡಿಗಳಲ್ಲಿ ಹತ್ತಾರು ಕೋಣದ ಕರುಗಳನ್ನು ಸಾಲಾಗಿ ನಿಲ್ಲಿಸಿ ಕಚಕಚಾ ಕಡಿಯುತ್ತಾ ಹೋಗುವಾಗ, ಕೋಡಿಗಟ್ಟಲೆ ರಕ್ತ ಹರಿಯುವಾಗ, ಅರೆಸತ್ತ ಕರುಗಳು ಒದ್ದಾಡುವಾಗ, ಅದನ್ನು ನೋಡಿ ಯಾರಿಗೂ ಬರ್ಬರ, ಅಮಾನುಷ, ಕ್ರೂರ ಎಂದು ಅನಿಸುವುದೇ ಇಲ್ಲ!

ನೇಪಾಳದ ಗದಿಮಾಯಿ ಎಂಬ ದುರ್ಗಾ ದೇವಳದಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ಕನಿಷ್ಠ ಎರಡು ಲಕ್ಷ ಎಮ್ಮೆ-ಕೋಣಗಳನ್ನು ಸಾರ್ವಜನಿಕವಾಗಿ ಕಡಿಯಲಾಗುತ್ತದೆ. ಇದರ ಭೀಭತ್ಸ ದೃಶ್ಯಗಳು ಯೂಟ್ಯೂಬ್‌ನಲ್ಲಿ ಈಗಲೂ ಲಭ್ಯವಿವೆ. ನೇಪಾಳಕ್ಕೆ ಹೋಗಿ ಕೋಣ ಕಡಿಸುವವರು ಹೆಚ್ಚಿನವರು ಭಾರತೀಯರೇ! ಆದರೂ ಈ ಘೋರ ದೃಶ್ಯಗಳಿಂದ ಯಾರಿಗೂ ಶಾಕ್ ಆಗುವುದೇ ಇಲ್ಲ. ಆದರೆ ಕೇರಳದಲ್ಲಿ ಜನರು ಸರಕಾರಕ್ಕೆ ತಮ್ಮ ಪ್ರತಿಭಟನೆ ತೋರ್ಪಡಿಸಲು ಒಂದು ಗಂಡು ಕರು ಸಾರ್ವಜನಿಕವಾಗಿ ಕೊಂದ ಮಾತ್ರಕ್ಕೆ ರಾಜಕಾರಣಿ ಮತ್ತು ಪತ್ರಕರ್ತರ ಭಾವನೆಗಳಿಗೆ ಭಾರಿ ನೋವಾಯಿತಂತೆ: ಹಾಗಾದರೆ ಜೈನರ ಕಸಾಯಿಖಾನೆಗಳಲ್ಲಿ ಕೆಲಸ ಮಾಡುವ ದಲಿತರ ಕಣ್ಣ ಮುಂದೆಯೇ ದಿನಾಲೂ ಲಕ್ಷಾಂತರ ಗೋವುಗಳು ಎಲೆಕ್ಟ್ರಿಕ್ ಮಷಿನಿನಲ್ಲಿ ಕಟ್ಟಾಗಿ ಒದ್ದಾಡುವಾಗ ಅಲ್ಲಿಯ ಕೆಲಸಗಾರರ ಭಾವನೆಗಳಿಗೆ ಎಷ್ಟು ನೋವಾಗುತ್ತಿರಬಹುದು? ಹೊಟ್ಟೆ ಪಾಡಿಗಾಗಿ ಎಲ್ಲವನ್ನೂ ಅವರು ಸಹಿಸಬೇಕು ಅಲ್ಲವೇ? ಇಡೀ ಜಗತ್ತಿನಲ್ಲಿಯೇ ಭಾರತೀಯರಷ್ಟು ದೊಡ್ಡ ಆಷಾಢಭೂತಿಗಳು ಬೇರೆ ಎಲ್ಲಿಯೂ ಇಲ್ಲ ಬಿಡಿ.

- ರಾಮಕೃಷ್ಣ ಕುಲಾಲ್, ಬೆಂಗಳೂರು

ಚೆಡ್ಡಿಗಳ ಕಣ್ಣೀರು ಮತ್ತು ಗೋಮಾತೆಯ ಗರ್ಭ

ರಾಜಸ್ಥಾನದ ಹೈಕೋರ್ಟ್ ನ್ಯಾಯಾಧೀಶ ಮಹೇಶ್ ಶರ್ಮ ಮೊನ್ನೆ ಮೇ 31 ಕ್ಕೆ ನಿವೃತ್ತಿಯಾದ. ನಿಜವಾಗಿ ಈತ ನಿವೃತ್ತಿಯ ನಂತರ ನೇರವಾಗಿ ರಾಜಕೀಯ ಸೇರಬೇಕು ಎಂದು ಪ್ಲಾನ್ ಮಾಡಿದ್ದಾನಂತೆ. ಅದಕ್ಕಾಗಿ ನಿವೃತ್ತಿಯಾಗುವ ಒಂದೇ ದಿನ ಮುಂಚೆ ಗೋವನ್ನು ರಾಷ್ಟ್ರೀಯ ಪ್ರಾಣಿ ಮಾಡಬೇಕು ಹಾಗೂ ಗೋಹತ್ಯೆಗೆ ಜೀವಾವಧಿ ಶಿಕ್ಷೆ ಕೊಡಬೇಕು ಎಂದು ಪೆದ್ದುಪೆದ್ದಾಗಿ ಶಿಫಾರಸು ಮಾಡಿದ್ದು, ಅಷ್ಟೇ ಅಲ್ಲ ಪತ್ರಕರ್ತರ ಮುಂದೆ ಈತ ಬ್ರಹ್ಮಚಾರಿ ನವಿಲಿನ ಕಣ್ಣೀರಿನ ರಹಸ್ಯ ಸಹ ಹೊರಗೆಡವಿಬಿಟ್ಟ. ಇವನ ಮಕ್ಕಳೂ ಹಾಗೆಯೇ ಕಣ್ಣೀರಿಂದ ಹುಟ್ಟಿರಬಹುದು. ಹಾಗಾಗಿ ಇವನು ಆರೆಸ್ಸೆಸ್ ಸೇರಲು ಅತ್ಯಂತ ಫಿಟ್!


ಇಂತಹ ಬುದ್ಧಿಗೇಡಿಯು ತನ್ನ ಸರ್ವಿಸಿನ ಉದ್ದಕ್ಕೂ ಎಂತೆಂತಹ ಮೂರ್ಖ ಘಾತಕ ತೀರ್ಪುಗಳನ್ನು ಕೊಟ್ಟು ಎಷ್ಟೆಲ್ಲಾ ಪ್ರಮಾದ ಮಾಡಿರಬಹುದು, ಎಷ್ಟೆಲ್ಲಾ ಅಮಾಯಕ ಜನರ ಜೀವನ ಹಾಳುಮಾಡಿ ಕಣ್ಣೀರು ಹಾಕಿಸಿರಬಹುದು, ಎಷ್ಟು ಭ್ರಷ್ಟನಾಗಿರಬಹುದು ಎಂದು ಊಹಿಸಿ. ಈ ಶರ್ಮಾನ ಫಾರ್ಮುಲಾದಂತೆ ಭಾರತದಲ್ಲಿ ಜನಸಂಖ್ಯೆ ಇಷ್ಟು ತೀವ್ರ ಹೆಚ್ಚಲು ಕಾರಣ ಇಲ್ಲಿಯ ಶತಭ್ರಷ್ಟ ರಾಜಕಾರಣಿಗಳು, ರಕ್ತಹೀರುವ ಉದ್ಯಮಿಗಳು, ಮಹಾಭ್ರಷ್ಟ ಸರಕಾರಿ ಅಧಿಕಾರಿಗಳು ಮತ್ತು ನ್ಯಾಯಾಧೀಶರುಗಳು ಇಲ್ಲಿಯ ಬಡವರನ್ನು ಸತತವಾಗಿ ಶೋಷಿಸಿ ಭಾರಿ ಕಣ್ಣೀರು ಹಾಕಿಸುತ್ತಿರುವುದೇ ಆಗಿರುವ ಸಾಧ್ಯತೆ ಇದೆ!

ಈ ಶರ್ಮ ಚಿಕ್ಕಂದಿನಲ್ಲಿ ತನ್ನ ಶಾಲಾಪುಸ್ತಕದಲ್ಲಿ ನವಿಲು ಗರಿ ಇಟ್ಟು ಅದು ಮರಿ ಹಾಕುತ್ತೆ ಎಂದು ಕಾದಿರಬಹುದು. ಹಾಗೂ ಬೇರೆ ಯಾರೋ ಈತನ ಪುಸ್ತಕದಲ್ಲಿ ಇನ್ನೊಂದು ಸಣ್ಣ ನವಿಲುಗರಿ ಇಟ್ಟಿರಬೇಕು.



ಅದನ್ನು ಈ ಪೆದ್ದ ಶರ್ಮ ತನ್ನ ನವಿಲುಗರಿ ಮರಿ ಹಾಕಿತು ಎಂದು ತಿಳಿದಿರಬಹುದು. ಅದನ್ನೇ ಈತ ಮುದುಕನಾಗಿ ರಿಟೈರ್ ಆಗುವವರೆಗೂ ನಂಬಿಕೊಂಡು ಬಂದಿರುವಂತಿದೆ. ನಮ್ಮ ದೇಶದ ಪ್ರಧಾನಮಂತ್ರಿಯಂತೆ, ಎಲ್ಲಾ ಮುಖ್ಯಮಂತ್ರಿಗಳು ಹಾಗೂ ಕೇಂದ್ರ ಸಚಿವರೂ ಹೆಂಡತಿ ಬಿಟ್ಟವರಾಗಿರಬೇಕು ಎಂದು ನಾಳೆ ಈ ಶರ್ಮ ಹೇಳಿಕೆ ಕೊಡಬಹುದು. ಈ ಹೇಳಿಕೆ ಕೊಟ್ಟಿದ್ದಕ್ಕಾಗಿ ಇವನಿಗೆ ಯಾವುದಾದರೂ ರಾಜ್ಯದ ರಾಜ್ಯಪಾಲ ಹುದ್ದೆ ಗ್ಯಾರಂಟಿ. ಬಿಜೆಪಿಯವರಿಗೆ ತಮ್ಮ ಹಿಡನ್ ಅಜೆಂಡಾ ಅನುಷ್ಠಾನಗೊಳಿಸಲು ಇಂತಹ ಮೆದುಳಿಲ್ಲದ ಹುಂಬರೇ ಬೇಕು ತಾನೇ.

ನವಿಲಿಗಿಂತಲೂ ಪೂಜ್ಯವಾದುದು ನಮ್ಮ ಗೋಮಾತೆ. ವೈಷ್ಣವರಿಗೆ ಅದು 33 ಕೋಟಿ ದೇವರ ಪ್ಯಾಕೇಜ್. ಹಾಗಾಗಿ ಅದು ಶೈವರ ನಂದಿ ಹೋರಿಯಿಂದ ಗರ್ಭ ಧರಿಸುತ್ತದೆ ಎಂದು ಹೇಳುವುದು ವೈಷ್ಣವರಿಗೆ ಭಾರಿ ಅವಮಾನ ಹಾಗೂ ಅವರ ಧಾರ್ಮಿಕ ಭಾವನೆಗೆ ಧಕ್ಕೆಯಾಗುತ್ತದೆ. ಹಾಗಾಗಿ ಪವಿತ್ರ ಗೋಮಾತೆ ಗರ್ಭ ಧರಿಸುವುದು ವೈಷ್ಣವ ಸ್ವಾಮೀಜಿಗಳ ಅಥವಾ ಬ್ರಹ್ಮಚಾರಿ ಆರೆಸ್ಸೆಸ್ ಪ್ರಮುಖರ ಕಣ್ಣೀರು ಅಥವಾ ವೀರ್ಯ ಕುಡಿದು ಎಂದು ಸಂಘಿಗಳು ಇನ್ನು ಮುಂದೆ ಪ್ರಚಾರ ಮಾಡಿದರೆ ವೈಷ್ಣವರಿಗೆ ಖುಷಿಯಾಗಬಹುದು. ಸಂಸ್ಕೃತದಲ್ಲಿ ಮಿಥುನ ಅಥವಾ ಮೈಥುನ ಎಂದರೆ ಸಂಭೋಗ. ಹಾಗಾಗಿ ಮಿಥುನ್ ಚಕ್ರವರ್ತಿ ಶೇಟ್ ಎಂದು ಹೆಸರಿರುವ ಸುಳ್ಳುಬೇಲಿಯ ಹೆಸರನ್ನು ಹಿಂದಿ-ಕನ್ನಡಕ್ಕೆ ಭಾಷಾಂತರಿಸಿದರೆ ಅದರ ಅರ್ಥ 'ಸಂಭೋಗ ಸಾಮ್ರಾಟ ವ್ಯಾಪಾರಿ' ಎಂದಾಗುತ್ತದೆ. ಅಕ್ಷರ ವ್ಯಭಿಚಾರ ಇದ್ದಂತೆ ಭಾಷಣ ವ್ಯಭಿಚಾರವೂ ಇದೆ. ಅದು ಈ ವಿಷ-ಭೀಷಣ ಭಾಷಣಕಾರ ವೈಷ್ಣವ ಚಕ್ರಿ ಸುಳ್ಳುಬೆಲೆಗೆ ಸರಿಯಾದ ಹೆಸರು.



ಬಾಬಾ ರಾಂದೇವ್ 'ಪತಂಜಲಿ ಶುದ್ಧ ನವಿಲಿನ ಕಣ್ಣೀರು' ಮಾರುಕಟ್ಟೆಗೆ ತರಲಿದ್ದಾನಂತೆ. ಮಕ್ಕಳಿಲ್ಲದ ಮಹಿಳೆಯರು ಇದನ್ನು ಕುಡಿದರೆ ಮಕ್ಕಳಾಗುತ್ತವೆಯಂತೆ! ಆದರೆ ಇದನ್ನು ಗಂಡಸರು ಕುಡಿದರೆ ಅವರಿಗೂ ಮಕ್ಕಳಾಗಬಹುದು ಜೋಕೆ!

- ಅಭಿಷೇಕ್ ಪಡಿವಾಳ್, ಸುಳ್ಯ

ಪ್ರಿಯಾಂಕಾಳ ಚೋಟು ಡ್ರೆಸ್ಸ್ ಮತ್ತು ಭಾರತೀಯ ನಗ್ನ ಸಂಸ್ಕೃತಿ

ಬರ್ಲಿನ್‌ನಲ್ಲಿ ಕಳೆದ ವಾರ ಬಾಲಿವುಡ್ ನಟಿ ಪ್ರಿಯಾಂಕಾ ಚೋಪ್ರ ಪ್ರಧಾನಮಂತ್ರಿ ಮೋದಿಯನ್ನು ಭೇಟಿಯಾಗಲು ಹೋದಾಗ ಅವಳು ತೊಟ್ಟ ಕಾಲು ಕಾಣುವ ಫ್ರಾಕ್ ಮತ್ತು ಕುಳಿತ ಭಂಗಿ ಬಗ್ಗೆ ಕೆಲವು ಮಡಿವಂತರು ಕೆಟ್ಟದಾಗಿ ಪ್ರತಿಕ್ರಿಯೆ ಮಾಡುತ್ತಿದ್ದಾರೆ. ಆದರೆ ನಾವು ಎಂತಹ ಆಷಾಢಭೂತಿಗಳು ನೋಡಿ, ಜಗತ್ತಿನ ಪ್ರವಾಸಿಗರನ್ನೆಲ್ಲಾ ಕರೆ-ಕರೆದು ನಾವು ಖಜೂರಾಹೊ ಮತ್ತು ಕೊನಾರ್ಕಿನ ಸಂಭೋಗಶಿಲ್ಪಗಳನ್ನು ತೋರಿಸಿ ನಮ್ಮ ಶಿಲ್ಪ ಕಲೆಯ ಬಗ್ಗೆ ಹೆಮ್ಮೆ ಪಡುತ್ತೇವೆ. ಬೇಲೂರು ಹಳೇಬೀಡಿನ ಮುಕ್ಕಾಲು ಪಾಲು ಬೆತ್ತಲೆಯಾಗಿರುವ ಶಿಲಾಬಾಲಿಕೆಯರನ್ನು ತೋರಿಸಿ ನಮ್ಮ ಸಂಸ್ಕೃತಿಯ ಬಗ್ಗೆ ಹೆಮ್ಮೆಯಿಂದ ಬೀಗುತ್ತೇವೆ. ಇಂದಿಗೂ ಸಂಪೂರ್ಣ ಬೆತ್ತಲೆಯಾಗಿರುವ ಕಾಳಿಮಾತೆಯನ್ನು ಪೂಜಿಸಿ ನಾವು ಮಹಾ ದೈವಭಕ್ತರು ಎಂದು ತೋರಿಸಿಕೊಳ್ಳುತ್ತೇವೆ. ಹೀಗಿರುವಾಗ ಒಬ್ಬ ಸಿನಿಮಾ ನಟಿಯ ಮಂಡಿಯ ಕೆಳಗಿನ ಕಾಲು ಸ್ವಲ್ಪ ಕಂಡಕೂಡಲೇ ಅದೇನೋ ಮಹಾ ಪ್ರಮಾದವಾದಂತೆ ಹುಯಿಲಿಡುತ್ತಿದ್ದೇವೆ.

ಇಂದು ಭಾರತೀಯ ಮಹಿಳೆಯರು ಎದೆಯ ಮೇಲೆ ಮೈ ಮುಚ್ಚಿಕೊಳ್ಳಲು ಬಳಸುವ ಕುಪ್ಪಸ (ಬ್ಲೌಸ್) ಹನ್ನೆರಡನೆ ಶತಮಾನದ ಪರ್ಷಿಯನ್ನರ ಕೊಡುಗೆ. ಅದಕ್ಕೆ ಮೊದಲು ಭಾರತೀಯರು ವಿವಿಧ ತರಹದ ಬಟ್ಟೆ ನೇಯುತ್ತಿದ್ದರು ನಿಜ, ಆದರೆ ಆ ಬಟ್ಟೆಯನ್ನು ದೇಹದ ಆಕಾರಕ್ಕೆ ತಕ್ಕಂತೆ ಕಟ್ ಮಾಡಿ ಕೈಯಿಂದ ಹೊಲಿಯುವ ಕಲೆ ಭಾರತೀಯರಿಗೆ ಗೊತ್ತಿರಲಿಲ್ಲ, ಕೈಹೊಲಿಗೆ ಮತ್ತು ಕಸೂತಿಯನ್ನು ನಾವು ಪರ್ಶಿಯನ್ ದರ್ಜಿಗಳಿಂದ ಕಲಿತಿದ್ದು, ಅದಕ್ಕೆ ಮಹಿಳೆಯರು ಕೇವಲ ತುಂಡು ಬಟ್ಟೆಯಿಂ ಮುಚ್ಚಿಕೊಳ್ಳುತ್ತಿದ್ದರು (ಕೇರಳದಲ್ಲಿ ಅದೂ ಇರಲಿ ಅಲ್ಲಿ ಕೆಳಜಾತಿ ಮಹಿಳೆಯರು ಬಟ್ಟೆಯಿಂ ಮುಚ್ಚಿಕೊಳ್ಳುವುದು ನಿಷಿದ್ಧವಾಗಿತ್ತು, ಹಾಗಾಗಿ ಸೊ ಮೇಲ್ಗಡೆ ಮಲೆಯಾಳಿ ಸ್ತ್ರೀಯರು ಬೆತ್ತಲೆ ಇರಬೇಕಿತ್ತು, ಅದಕ್ಕಾಗಿ ವಿವೇಕಾನಂದರು ಕೇ ಹುಚ್ಚಾಸ್ಪತ್ರೆ ಎಂದು ಕರೆದಿದ್ದು).

ಅಜಂತಾ ಎಲ್ಲೋರಾ ಬಾದಾಮಿ ಗುಹೆ ಚಿತ್ರ, ಬೇಲೂರು ಹಳೇಬೀಡಿನ ಶಿಲ್ ಇವೆಲ್ಲವುಗಳಲ್ಲಿ ಎಲ್ಲಿಯೂ ನಮಗೆ ಕುಪ್ಪಸ ತೊ ಒಬ್ಬಳೇ ಒಬ್ಬ ಮಹಿಳೆಯ ಶಿಲ್ಪ ಕಾಣಿಸುವುದಿಲ್ಲ, ಆಗ ಬ್ಲೌಸ್ ಇರಲೇ ಇಲ್ಲ, ವರ್ಣಚಿತ್ರಗಳಲ್ಲಿ ಮೊ ಬಾರಿಗೆ ಕುಪ್ಪಸ ತೊಟ್ಟ ಮಹಿಳೆಯ ಚಿತ್ರ ಬಿ ರಾಜಾ ರವಿವರ್ಮ, ಅದೂ ಕಳೆದ ಶತಮಾನ ರಿಂದ 1906 ನಡುವೆ. ಅನಂತರ ಇತರ ಚಿ ರವಿವರ್ಮನನ್ನು ಅನುಸರಿಸಿದರು). ಆದರೂ ಇ ವಿಷಯಕ್ಕೆ ನಾವು ಭಾರತೀಯ ಸಂಸ್ಕೃತಿ ಸಂಸ್ಕಾರ ಸಂಪ್ರದಾಯ ಎಂದು ಬೊಬ್ಬೆ ಹಾಕುತ್ತೇವೆ, ಸೋಗಲಾಡಿಗಳು ನಾವು!

ಭಾರತೀಯ ನಾರಿಗೆ ಸೀರೆಯೇ ಗೌರವಪೂರ್ಣ ಸಂಪ್ರದಾಯಸ್ಥರು ಹೇಳುತ್ತಾರೆ. ಆದರೆ ಈ ಸೀರೆ ಸ್ಟೈಲ್ ಸಹ ಭಾರತೀಯ ಮೂಲದಲ್ಲವೇ ಅ ಭಾರತಕ್ಕೆ ಬಂದಿದ್ದು ಗ್ರೀಕರ ಮೂಲಕ. ಗ್ರೀಕ ರೋಮನ್ ಗಂಡಸರು ಈ ರೀತಿ ಎಡಕ್ಕೆ ಸೆರ ಇಡೀ ಮೈಮುಚ್ಚುವಂತೆ ಬಟ್ಟೆ ಉಡುತ್ತಿದ್ದರು. ಐತಿಹಾಸಿಕ ರೋಮನ್ ಅಥವಾ ಗ್ರೀಕ್ ದೇಶದ ಹಾಲಿವುಡ್ ಚಲನಚಿತ್ರಗಳಲ್ಲಿ ಇವನ್ನು ನೋಡಬಹುದು. ಆಗಿನ ಕಾಲದಲ್ಲಿ ಗ್ರೀಸ್ ಮತ್ತು ಮಹಿಳೆಯರು ಈಗಿನ ನಮ್ಮ ಆಧುನಿಕ ಹುಡು ಉಡುವ ಲೆಹೆಂಗಾ-ಶರಾರಾ ಮಾದರಿಯ ಮುಚ್ಚುವ ಗೌನ್ ಧರಿಸುತ್ತಿದ್ದರು. ಒಂದು ಯೂರೋಪಿಯನ್ ಮಹಿಳೆಯರು ತ

ಕಾಲಿನವರೆಗೆ ಮೈಮುಚ್ಚುವ ಬಟ್ಟೆ ಧರಿಸು ಕಾಲದಲ್ಲಿ ಭಾರತೀಯ ಬಡವರು ಮಾತ್ರವಲ್ಲ ಮಹಿಳೆಯರೂ ಮುಕ್ಕಾಲು ಪಾಲು ದೇಹ ಬಟ್ಟೆ ತೊಡುತ್ತಿದ್ದರು. ಈಗ ಕಾಲ ಸ್ವಲ್ಪ ಉ ಅಷ್ಟೇ.

ಆದರೂ ನಿಷ್ಪಕ್ಷವಾಗಿ ವಿವಿಧ ದೇಶದ ಮ ಬಟ್ಟೆಗಳ ವಿನ್ಯಾಸವನ್ನು ವಿಮರ್ಶಿಸುವವರ ಮಹಿಳೆಯ ಸೊಂಟ, ಕಿಬ್ಬೊಟ್ಟೆ, ಹೊಕ್ಕಳು, ಬೆನ್ ಕಾಣಿಸುವ ಭಾರತೀಯ ಮಹಿಳೆಯರ ಸೀರೆ-ಕುಪ್ಪ ಮನದಲ್ಲಿ ಅತಿಹೆಚ್ಚು ಕಾಮೋತ್ತೇಜಕವಂತೆ. ಯನ್ ಮಹಿಳೆಯರ ಕಾಲು ಮಾತ್ರ ಕಾಣ ಗಂಡಸರ ದೃಷ್ಟಿಯಲ್ಲಿ ಬರೀ ಬೋರ್ ಅಂತೆ!! ಇಡೀ ಮೈಮುಚ್ಚುವ ಸಲ್ವಾರ್ ಕಮೀಜ್ ಹೆ ಪೂರ್ಣ ಡ್ರೆಸ್ ಆಗಿದೆ ಎಂದು ಎಲ್ಲ ಭಾ ಒಪ್ಪುತ್ತಾರೆ. ಈ ಸಲ್ವಾರ್ ಕಮೀಜ್ ಸಹ ಕಾಲದಲ್ಲಿ ಅಫಘಾನಿಸ್ತಾನದಿಂದ ಭಾರತಕ್ಕೆ ಬಂದಿ ವೇಳೆ ಸಲ್ವಾರ್ ಕಮೀಜ್ ಬದಲು ಸೀರೆ ಕಾಲದಲ್ಲಿ ಅಫಘಾನಿಸ್ತಾನದಿಂದ ಭಾರತಕ್ಕೆ ಬಂದಿ ಪಡೆಗಳು ಸೀರೆ ಭಾರತೀಯ ಸ್ತ್ರೀಯತ್ವದ ಸಂಕೇ ಬದಲು ಈಗಿನ ಆಧುನಿಕ ರೀತಿಯಲ್ಲಿ ಸೀರೆ ರಿಗೆಲ್ಲಾ ದೇಶದ್ರೋಹಿ ಎಂದು ಹಣೆಪಟ್ಟಿ ಕಟ್ಟಿ ಹೋಗಿ ನಿಮ್ಮ ಕಿಬ್ಬೊಟ್ಟೆ ತೋರಿಸಿ' ಎಂದು ತ್ತಿದ್ದರೇನೋ!

- ಆರ್. ಬಿ. ಶೆಣವ, ಮ

ವಿ.ಸೂ. : ನಿಮ್ಮ ಅನಿಸಿ
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹು
ಪ್ರತಿಕ್ರಿಯೆಗಳನ್ನು 9980331427 ನ
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳು



ಕಲೆ-ವ್ಯವಹಾರಗಳ ನಡುವಣ ಕಲಾಲೋಕ

ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವ Bengaluru

■ ಕೆ.ಫಣಿರಾಜ್ 15

ಈ ಸಿನಿಮಾ ಹಬ್ಬದ ಪ್ರಯುಕ್ತ ಮೈಸೂರಿನಲ್ಲಿ ಒಟ್ಟು 140 ಚಲನಚಿತ್ರಗಳು ಪ್ರದರ್ಶನಗೊಂಡವು. ಒಬ್ಬರಿಗೆ ದಿನಕ್ಕೆ ಐದೇ ಸಿನಿಮಾಗಳನ್ನು ನೋಡುವುದಕ್ಕೆ ಸಾಧ್ಯವಿದ್ದು, ಆ ಮಿತಿಯಲ್ಲಿ ನಾನು 34 ಸಿನಿಮಾಗಳನ್ನು ನೋಡಿದೆ. ನಾನು ನೋಡಿದ್ದರಲ್ಲಿ ಈ ಹಿಂದಿನ ವಾರಗಳಲ್ಲಿ ಬರೆದಿರುವ 14 ಸಿನಿಮಾಗಳು, ಸೃಜನಶೀಲ ಕಲೆಪ್ರಯೋಗದ ಉತ್ತಮ ಕೃತಿಗಳಾಗಿ ನನಗೆ ಕಂಡಿವೆ. ಕಲಾವಿದರ ವ್ಯಕ್ತಿಗತ ವೈಚಾರಿಕ ನಿಲುವುಗಳ ವೈವಿಧ್ಯತೆಯು, ಲೋಕದ ಇತರ ಜೀವಿಗಳ ವೈಚಾರಿಕ ಒಲವುಗಳಷ್ಟೇ ವೈವಿಧ್ಯವಾಗಿರುತ್ತದೆ; ಒಂದು ದೇಶದ ಸನ್ನಿವೇಶದಲ್ಲಿ, ಸಮಾಜದಲ್ಲಿ ಒಡೆದು ಕಾಣುವ ವೈಚಾರಿಕ ಪಕ್ಷಪಾತಿ ಧೋರಣೆಗಳು ಕಾಲದ ಲಕ್ಷಣವಾಗಿದ್ದರೆ, ಕಲಾವಿದರೂ, ಒಂದಲ್ಲ ಒಂದು ಪಕ್ಷಪಾತಿ ನಿಲುವನ್ನು ಹೊಂದಿರುವುದು ಸಹಜವೇ; ತಮ್ಮ ಪ್ರಸ್ತುತ ವೈಚಾರಿಕ ಪಕ್ಷಪಾತದ ನೆಲೆಯಿಂದ, ಕಲಾವಿದರು ಲೋಕವ್ಯವಹಾರವನ್ನು ಗ್ರಹಿಸಿ, ತಮ್ಮ ಸಂವೇದನೆಗಳನ್ನು (ಸೆನ್ಸಿಬಲಿಟಿಸ್) ರೂಪಿಸಿಕೊಳ್ಳುವುದೂ ಸಹಜವೇ. ಆದರೆ, ಕಾಲದೇಶಗಳ ಲೋಕವ್ಯವಹಾರಗಳ ಕುರಿತ ತಮ್ಮ ಸಂವೇದನೆಗಳನ್ನು, ಪ್ರೇಕ್ಷಕರ ಬುದ್ಧಿಭಾವಗಳಿಗೆ ಸಂವಹನೆ ಮಾಡುವುದಕ್ಕೆ, ಕಲಾವಿದರ ಬಳಿ ಇರುವುದು ಅವರ ಕಲೆಯ ಕಸೆಬುದಾರಿಕೆ ಮಾತ್ರವೇ. ಯಾವುದೇ ಕಲಾಪ್ರಕಾರಕ್ಕೂ ಇರುವ ಹಾಗೆಯೇ, ಸಿನಿಮಾಕ್ಕೂ ತನ್ನ ಕಲಾ ವ್ಯಾಕರಣದ ಮಿತಿಗಳಿವೆ. ಸಿನಿಮಾದ ಕಲಾ ವ್ಯಾಕರಣದ ಮಿತಿಯನ್ನು ಹೀಗೆ ಪಟ್ಟಿ ಮಾಡಬಹುದು:

ಕಲಾವಿದ ತನ್ನ ಸಂವೇದನೆಯನ್ನು ಬೀಜವಾಗಿ ಹೊರಬಲ್ಲ ಒಂದು ವಸ್ತುವನ್ನು ಆಯ್ದುಕೊಳ್ಳುವುದು; ತನ್ನ ಸಂವೇದನೆಯನ್ನು ಪ್ರೇಕ್ಷಕರ ಬುದ್ಧಿಭಾವಗಳಿಗೆ ಅನಾವರಣಗೊಳಿಸುವ ಒಂದು ಚಿತ್ರಕತೆ (ಸ್ಕ್ರೀನ್‌ಪ್ಲೇ)ಯನ್ನು ರಚಿಸಿಕೊಳ್ಳುವುದು; ಚಿತ್ರಕತೆಯಲ್ಲಿರುವ ಪಾತ್ರ ಹಾಗು ಸ್ಥಳ ಸನ್ನಿವೇಶಗಳಿಗೆ ಹೊಂದುವ ನಟರು/ಚಿತ್ರೀಕರಣ ಸ್ಥಳ (ಲೊಕೇಷನ್) ನಿರ್ಧರಿಸಿಕೊಳ್ಳುವುದು; ಸ್ಥಳದಲ್ಲಿ ಪಾತ್ರಗಳು ಅಭಿನಯಿಸುವುದನ್ನೂ, ಹಾಗು ಆ ದೃಶ್ಯವನ್ನು ಹಿಡಿದಿಡುವ ಕ್ಯಾಮೆರಾದ ಚಲನೆಗಳನ್ನು ಚಿತ್ರಕತೆ ಸಾಕಾರವಾಗುವ ದೃಷ್ಟಿಯಿಂದ ಸೂತ್ರಬದ್ಧವಾಗಿ ನಿಯಂತ್ರಿಸುವುದು; ಕ್ಯಾಮೆರಾದದಲ್ಲಿ ಹಿಡಿದಿಟ್ಟ ದೃಶ್ಯ-ಶಬ್ದಾವಳಿಗಳನ್ನು ತನ್ನ ಸಂವೇದನೆಯು ದೃಶ್ಯ-ಶಬ್ದಗಳ ಸರಣಿಯಲ್ಲಿ ಪ್ರೇಕ್ಷಕರ ಬುದ್ಧಿಭಾವ ತಟ್ಟುವ ಊಹೆಯಲ್ಲಿ ಕತ್ತರಿಸಿ-ಸೇರಿಸುವ ಸಂಕಲದ (ಮಾಂಟಾಜ್/ಎಡಿಟಿಂಗ್) ಸವಾಲಿನ ಕೆಲಸವನ್ನು ಪೂರೈಸುವುದು. ಇಷ್ಟಾದ ನಂತರವೂ, ಸಿದ್ಧವಾದ ಸಿನಿಮಾ ಕೃತಿಯ ಪ್ರದರ್ಶನಕ್ಕೆ ಒಂದು ಚಿತ್ರಮಂದಿರ ಸಿಗುವುದು, ಸಿಕ್ಕರೂ ಬರುವ ಪ್ರೇಕ್ಷಕರ ಸಿನಿಮಾ ಕಲೆಯ ಈ ಕಸಬುದಾರಿಕೆಯ ಅರಿವನ್ನು ಅವಲಂಬಿಸಿ, ತನ್ನ ಸಂವೇದನೆ ಪ್ರೇಕ್ಷಕರ 'ನೋಡುವ ಆ ಗಳಿಗೆ'ಯ ಬುದ್ಧಿಭಾವವನ್ನು ತಟ್ಟುವುದಕ್ಕಾಗಿ ಕಾಯುವುದು.

ಈ ಅರ್ಥದಲ್ಲಿ ಸಿನಿಮಾ ಕಲೆಯು, ನಮ್ಮ ಕಾಲದಲ್ಲಿ ಉಳಿದು ಸೃಜಿಸುತ್ತಿರುವಂತಹ ಇತರ ಕಲೆಗಳಿಗಿಂತ ಹೆಚ್ಚು ಸಂಪನ್ಮೂಲಗಳನ್ನು ಬೇಡುವ-ಹೆಚ್ಚು ಶ್ರಮದಾಯಕವಾದ ಕಲಾ ಕಸಬುದಾರಿಕೆ, ಆ ಕಾರಣಕ್ಕಾಗಿಯೇ ಹೆಚ್ಚು ಲೋಕ ನಿಯಂತ್ರಣಕ್ಕೆ ಒಳಪಟ್ಟ ಕಲಾವಿಧಾನ. ಈ ಹಿಂದಿನ ವಾರಗಳಲ್ಲಿ ಮೆಚ್ಚಿ ಬರೆದ 14 ಸಿನಿಮಾಗಳ ನಿರ್ದೇಶಕರು, ಲೋಕದ ನಿತ್ಯ ಬದುಕಿನ ವ್ಯವಹಾರಗಳ ಬಗ್ಗೆ, ಅಧಿಕಾರಸ್ಥರ ತಂತ್ರಗಾರಿಕೆಯ ಮಧ್ಯಪ್ರವೇಶದಿಂದ ಜನರ ಬುದ್ಧಿಭಾವಗಳಲ್ಲಿ ರೂಢಿಸಲಾಗಿರುವ ವೈಚಾರಿಕ ನಿಲುವುಗಳ 'ಸಹಮತ'ಕ್ಕಿಂತ ಭಿನ್ನವಾದ, ವೈಚಾರಿಕ ನಿಲುವು-ತತ್ಫಲ ಸಂವೇದನೆಗಳನ್ನು ಉಳ್ಳವರು; ಅವರ ವಸ್ತು ಹಾಗು ಕಸಬುದಾರಿಕೆಗಳು ಸದ್ಯಕ್ಕೆ ಅಧಿಕಾರಸ್ಥ ನಿಯಂತ್ರಿತ ಲೋಕಸಹಮತದ ಬುದ್ಧಿಭಾವಗಳಿಗೆ ತಟ್ಟದೇ ಹೋಗಬಹುದು ಎಂದು ಗೊತ್ತಿದ್ದೂ ತಮ್ಮ ಸಂವೇದನೆಗಳು ಅಂತಿಕವಾಗಿ ಸಿನಿಮಾ ಕಲೆಯ ಮೂಲಕ, ಆ ಮೂಲಕ ಮಾತ್ರವೇ ಹೊಮ್ಮುವಷ್ಟು, ತಮ್ಮ ಕಲಾವಂತಿಕೆ ಗಟ್ಟಿಯಾಗಿದೆಯೋ ಎಂದು ಪರೀಕ್ಷಿಸಿಕೊಳ್ಳಲು ಹೊರಟ ಪ್ರಯೋಗಗಳು. ಈ ಬಗೆಯ ಸಿನಿಮಾಗಳನ್ನು 'ಕಲಾತ್ಮಕ ಸಿನಿಮಾ'ಗಳು ಎಂದು ವಿಂಗಡಿಸಿ, ಇವು ಸಾಮಾನ್ಯ ಪ್ರೇಕ್ಷಕರ ಬುದ್ಧಿಭಾವಕ್ಕೆ ಅತೀತವಾದುವು ಎಂದು ಅಧಿಕಾರಸ್ಥ ಮಾಧ್ಯಮಗಳೇ ನಿರ್ಣಯಿಸಿಬಿಡುತ್ತವೆ. ಇದು ಇನ್ನೂ ಒಂದು ಅತಿಗೆ ಹೋಗಿ ಈ ಸಿನಿಮಾಗಳು 'ಮಾಸ್'(ಜನಜಂಗುಳಿ)ಗೆ ಆಗಿಬರದಂತಹ 'ಕ್ಲಾಸ್' (ಶಿಷ್ಟರಿಗೆ ಸೀಮಿತವಾದ) ಸಿನಿಮಾಗಳು ಎನ್ನುವ ವಿಂಗಡಣೆಯನ್ನೂ ಜನಪ್ರಿಯಗೊಳಿಸಲಾಗಿದೆ! ಈ 'ಮಾಸ್' ಮತ್ತು 'ಕ್ಲಾಸ್' ಯಾರು? ನಿತ್ಯದ ಹೊಟ್ಟೆಪಾಡಿನ ಗೋಜಲಿನಲ್ಲಿ ಕಲಾಪ್ರಕಾರಗಳ ಸೂಕ್ಷ್ಮತೆಗಳನ್ನು ಕಲಿತು ಅರಿಯದ ಸ್ಥಿತಿಯಲ್ಲಿರುವ ಮಂದಿಯೇ 'ಮಾಸ್' ಎನ್ನುವುದಾದರೆ, ಆ 'ಮಾಸ್' ಕಲಾಪ್ರಕಾರಗಳ ಸೂಕ್ಷ್ಮತೆಗಳನ್ನು ಅರಿಯದಂತೆ ತಡೆಹಿಡಿದಿರುವ ಅಧಿಕಾರಸ್ಥ ವ್ಯವಸ್ಥೆ ಯಾವುದು? ಅದು 'ಮಾಸ್'ನ್ನು ಯಾವ ಕಲೆಗೆ ಒಗ್ಗಿಸುತ್ತಿದೆ? ಎನ್ನುವ ಸಾಮಾಜಿಕ ರಾಜಕೀಯ ಜಿಜ್ಞಾಸೆಗಳಿಗೆ ಈ ಸಿನಿಮಾಗಳು ದಾರಿ ತೋರುತ್ತವೆ.

ಅಧಿಕಾರಸ್ಥರು, ತಮ್ಮ ಅಧಿಕಾರದ ವರಸೆಗಳನ್ನೂ, ಅದನ್ನು ಚಾಲ್ತಿಯಲ್ಲಿಡುವ ಬಗೆಯನ್ನೂ ಬಿಚ್ಚಿಡುವ ಕಲೆಯನ್ನು ಯಾಕೆ 'ಜನಸಾಮಾನ್ಯ ಶಿಕ್ಷಣ'ದ ಭಾಗವಾಗಿ ಮಾಡುತ್ತಾರೆ! ಅವರು, ತಮ್ಮ ಅಧಿಕಾರ ಚಲಾವಣೆಯನ್ನು ಬೆಂಬಲಿಸುವ ಬುದ್ಧಿಭಾವಗಳನ್ನು ಬಹುಪಾಲು ಜನರಲ್ಲಿ ರೂಢಿಸುವ ಸಲುವಾಗಿಯೇ, ಈ ಬಗೆಯ ಸಿನಿಮಾಗಳನ್ನು ನೋಡುವ ಕಲಾಶಿಕ್ಷಣವನ್ನು ನಿತ್ಯದ ಹೊಟ್ಟೆಪಾಡಿಗೆ ದಿನದ ಬಹು ಸಮಯವನ್ನು ಕಳೆಯುವ ಜನ, ದಿನದ ಅರ್ಧ-ಮುಕ್ಕಾಲು ಗಂಟೆಯ ವಿರಾಮ ಸಮಯದಲ್ಲಿ ಅಧಿಕಾರಸ್ಥರನ್ನು ಬೆಂಬಲಿಸುವ ವಿಚಾರಗಳನ್ನು ಬಿತ್ತರಿಸುವ 'ಮಾಸ್' ದೃಶ್ಯ ಕಾರ್ಯಕ್ರಮಗಳನ್ನು ನೋಡುವ 'ಮನೋರಂಜನಾ ಶಿಕ್ಷಣ'ವನ್ನು ಪ್ರೋತ್ಸಾಹಿಸುತ್ತವೆ. ಹೀಗಾಗಿ, ಇಲ್ಲಿ 'ಕ್ಲಾಸ್' ಎಂದರೆ 'ಅಧಿಕಾರಸ್ಥರ ಅಧಿಕಾರದ ವರಸೆಗಳಿಗೆ ಸವಾಲೊಡ್ಡುವ ವೈಚಾರಿಕರು' ಎಂದು ಮಾತ್ರವೇ ಅರ್ಥ- 'ದೇಶಪ್ರೇಮಿ' 'ದೇಶದ್ರೋಹಿ'ಗಳು ಯಾರು ಎಂಬ ಸಮೂಹ ಸನ್ನಿ ಹರಡುತ್ತಿರುವ ಆಧುನಿಕ ಸಮೂಹ ಸಂಪರ್ಕ ಕ್ರಾಂತಿಯ ಯುಗದಲ್ಲಿ!

ಇರಲಿ, ಈ ನಿಯಮಿತ ಅಂಕಣದ ಉದ್ದೇಶ, ಶಾಸ್ತ್ರೀಯ ಚಿಂತನಾ-ಸಾಮಾಜಿಕ-ರಾಜಕೀಯಗಳ ಸಂಗಮ ಸ್ನಾನದ ಚಕ್ರತೀರ್ಥಗಳ




ವಿಶ್ಲೇಷಣೆಯಾಗಿದ್ದಿಲ್ಲವಾದರೂ, ಈ ಸಿನಿಮಾಗಳೇ, ಈ ಚಕ್ರತೀರ್ಥದ ಪ್ರವರ್ತಕರಾಗಿದ್ದು, ನನ್ನಂಥ ಪ್ರೇಕ್ಷಕನನ್ನು ಸಂಗಮ ಸ್ನಾನಕ್ಕೆ ಸೆಳೆಯುವಷ್ಟು ಪ್ರಭಾವಶಾಲಿಯಾಗಿವೆ, ಎನ್ನುವ ಉಮೇದಿನಲ್ಲಿ ಹೇಳಿದೆ. ಮುಂದೆ.

ಈ ಹಿಂದೆ ಚರ್ಚಿಸಿರುವ 14 ಸಿನಿಮಾಗಳಲ್ಲಿಯೂ ವಿಪರೀತ ಪ್ರಯೋಗ ವೈವಿಧ್ಯಗಳಿವೆ: ಒಂದು ಕಡೆ ಬೆಂಡೆಕ್ (ಲಿಲಿ ಲೇನ್) ಹಾಗು ಅನೂಚ (ವೈ ದ ಟೈಂ ಇಟ್ ಗೆಟ್ಸ್ ಡಾರ್ಕ್) ತಮ್ಮ ಸಮಾಜದಲ್ಲಿರುವ ಮನುಷ್ಯ ಅಸ್ತಿತ್ವದ ಸ್ಥಿತಿಗತಿಗಳನ್ನು ಹೇಳಿಕೊಳ್ಳಲಿಕ್ಕೆ ಹೊಸ ಬಗೆಯ ಸಿನಿಮಾಕಲೆಯ ಪ್ರಯೋಗವನ್ನು ನೆಚ್ಚಿಕೊಂಡಿದ್ದಾರೆ; ಇನ್ನೊಂದು ಕಡೆ ಸಿನಿಮಾಕಲೆಯ ನುರಿತರಾದ ಕೆನ್ ಲೋಚ್ (ಐ ಡೇನಿಯಲ್ ಬ್ಲೇಕ್), ಬ್ರಿಯಂಟ್ ಮೆಂಡೋನ್ಸ (ಮಾ' ರೋಸ) ಹಾಗು ದಾನೀಶ್ ತಾನೋವಿಕ್ (ಡೆಥ್ ಇನ ಸರೋಯೆವೊ) ಸಿನಿಮಾಕಲೆಯನ್ನು ತಮ್ಮ ಚಿತ್ರಥೆಗಳ ಮೂಲಕ ಅಧಿಕಾರ ವಿರೋಧಿ ವೈಚಾರಿಕತೆಯನ್ನು ತಮ್ಮ ಪಟ್ಟುಗಳನ್ನು ಬಿಡದೆ 'ಮಾಸ್'ಗಳ ಹತ್ತಿರ ತರುವ ಯತ್ನದಲ್ಲಿ ತೊಡಗಿದ್ದಾರೆ; ಇವರ ನಡುವೆ ಕುಪಿತ ಯುವಕರು ಝೇವಿಯರ್ ಡೋಲನ್ (ಇಟ್ಸ್ ದಿ ಓನ್ಲಿ ಎಂಡ್ ಆಫ್ ದಿ ವರ್ಲ್ಡ್), ಯನೀವ್ (ಲ್ಯಾಂಡ್ ಆಫ್ ದಿ ಲಿಟ್ಲ್ ಪಿಪಲ್) ನಿಮ್ಮ ಲೋಕದ ಕೊಳಕನ್ನು ನೀವೇ ಕಾಣಿ ಎನ್ನುವ ಧೀಮಂತ ದನಿ ಹೊರಡಿಸುತ್ತಿದ್ದಾರೆ. ಇವೆಲ್ಲಾ ಇಂದಿನ ವ್ಯಾಪಾರೀಕೃತ 'ಮನೋರಂಜನಾ ಲೋಕ'ದಲ್ಲಿ ವ್ಯರ್ಥ ಪ್ರಲಾಪಗಳೇ? ಎಂದು ಕೇಳುವುದು ಸಹಜ. ಆದರೆ, ಇವರ ಈ ಸಿನಿಮಾಕಲೆಯು ಲೋಕ ವಿಯುಕ್ತವಾದುದ್ದಲ್ಲ; ಇವರ ಕಲೆಯ ದನಿಯನ್ನು ಹಲವು ಬಗೆಗಳಲ್ಲಿ ಹಿಡಿದುಕೊಂಡು, 'ಮಾಸ್'ಗಳ ಸ್ಥಾಪಿತ ಮನೋವೃತ್ತಿಗೆ ಸಮೀಪವಾಗುವಂಥ ಸಿನಿಮಾಗಳನ್ನು ಮಾಡುವ ನಿರ್ದೇಶಕರೂ ಇದ್ದಾರೆ. ಅಂತಹ 4 ನಿರ್ದೇಶಕರ ಸಿನಿಮಾಗಳ ಬಗ್ಗೆ ಎರಡು ಬರಹಗಳಲ್ಲಿ ಕಿರುಪರಿಚಯ ಮಾಡಿ ಈ ಅಂಕಣ ಕೊನೆಗೊಳಿಸುವೆ.

ಚಿತ್ರ: ದಿ ಏಜ್ ಆಫ್ ಶ್ಯಾಡೋಸ್ (2016)
ದೇಶ: ದಕ್ಷಿಣ ಕೊರಿಯಾ
ಚಿತ್ರಕತೆ-ನಿರ್ದೇಶನ: ಜೂ ವೂ ಕಿಮ್

ಕೈಗಾರಿಕ ಉತ್ಪನ್ನಗಳ ಮುಂಚೂಣಿಯಲ್ಲಿರುವ ದಕ್ಷಿಣ ಕೊರಿಯಾದ ಸಮಾಜದಲ್ಲಿ ಅಂತರ್ಗತವಾಗಿರುವ ಹಿಂಸೆಯ ಸ್ವರೂಪವೇನು? ಎನ್ನುವುದು ದ.ಕೋ.ದ ಹೊಸ ಬಗೆಯ ಸಿನಿಮಾದ ಹುಡುಕಾಟವಾಗಿದೆ. ಒಂದು ಕಡೆ, ಜಗದ್ವಿಖ್ಯಾತನಾದ ಕಿ-ಕಿ-ಡುಕ್, ಭೂಗತ ಕೂಟಗಳ ಚಲಾವಣೆಯ ಬೆಂಬಲದಲ್ಲಿ ನಡೆಯುತ್ತಿರುವ ಬಂಡವಾಳಶಾಹಿ ಉತ್ಪಾದನೆಯು ಪ್ರಕಟಿಸಲು ಸಾಧ್ಯವಿರುವ ನಮುನಮೂನೆಯ ಹಿಂಸೆಗಳನ್ನೂ, ದೇಶದಲ್ಲಿ ಆಚರಣೆಯಲ್ಲಿದ್ದರೂ ಆಧ್ಯಾತ್ಮಿಕವಾಗಿ ಹೊರತಾಗಿರುವ ಬುದ್ಧ ಭೋದನೆಯನ್ನು ಹಿಂಸೆಯ ವಿರುದ್ಧ ಆಸರೆಯಾಗಿ ಪಡೆಯಲು ಸಾಧ್ಯವೇ? ಎಂಬ ವಿಚಾರಸಹಿತವಾಗಿ ಸಿನಿಮಾಗಳ ಪ್ರಯೋಗ ಮಾಡುತ್ತಿದ್ದಾನೆ.

ಕಿಮ್‌ಗಿಂತ ಭಿನ್ನವಾಗಿ, ತನ್ನ ಸಮಾಜದೊಳಗಿನ ಹಿಂಸೆಯನ್ನು, ವ್ಯವಸ್ಥೆ-ಭೂಗತ ಜಗತ್ತು ಹಾಗು ನಿಗೂಢ ಅಮಾನುಷ ಶಕ್ತಿಗಳಿಗೆ ವಹಿಸಿ, ವಿಲಕ್ಷಣ ಕುತೂಹಲದ (ಕಲ್ಟ್‌ಥ್ರಿಲ್ಲರ್) ರಂಜಕ ಸಿನಿಮಾಗಳನ್ನು ಮಾಡಿ ಖ್ಯಾತಿ ಪಡೆದಿರುವವನು ಜೂ ವೂ ಕಿಮ್. ಆದರೆ, 2016ರಲ್ಲಿ ಈತ ಅಚ್ಚರಿ



ಹುಟ್ಟಿಸುವ ಹಾಗೆ ಸಿನಿಮಾಕಲೆಗೆ ಮರ್ಯಾದೆ ತಂದುಕೊಡುವ ಈ ಸಿನಿಮಾ ಮಾಡಿದ್ದಾನೆ. 1920ರ ಕಾಲದಲ್ಲಿ, ಜಪಾನ್ ಕೊರಿಯವನ್ನು ತನ್ನ ಮಾಂಡಲಿಕವನ್ನಾಗಿಸಿಕೊಂಡು, ದಬ್ಬಾಳಿಕೆಯ ಆಡಳಿತ ಮಾಡುತ್ತಿದ್ದ ಕಾಲಾವಧಿಯಲ್ಲಿ, ಮಾಂಡಲಿಕಶಾಹಿಯ ವಿರುದ್ಧ ಸೆಣೆಸಿದ ಒಂದು ಸಶಸ್ತ್ರ ಕ್ರಾಂತಿಕಾರಿ ಗುಂಪು ಹಾಗು ಜಪಾನಿನ ಪೊಲೀಸು ಪಡೆಯ ನಡುವೆ ನಡೆಯುವ ಸೆಣಸಾಟವನ್ನು ವಸ್ತುವಾಗಿ ಇಟ್ಟುಕೊಂಡು ರೋಚಕವಾದ ಸಿನಿಮಾವನ್ನು ಜೂ ವೂ ಮಾಡಿದ್ದಾನೆ. ಬಿಗಿಯಾದ ಚಿತ್ರಕತೆ, ಅದಕ್ಕೆ ಹೊಂದಿದಂತಹ ಸಂಯಮವರಿತು ನಟಿಸುವ ತಾರಾಗಣ, ಕ್ಯಾಮೆರ ಹಾಗು ಸಂಕಲನಗಳ ಕಲೆಗಾರಿಕೆಯ ಮೂಲಕ ಪ್ರೇಕ್ಷಕರನ್ನು ಸೆಳೆಯುವ ಯುದ್ಧಕಾಲೀನ ಸಿನಿಮಾಗಳನ್ನು ಅಮೆರಿಕೆಯ 'ಹಾಲಿವುಡ್' ಸಹ ಮೈನೆವಿರೇಳುವ ಹಾಗೆ ಮಾಡುವುದು ಸಹಜವಾಗಿರುವ ಕಾಲದಲ್ಲಿ, ಜೂ ವೂನ ಸಿನಿಮಾ ಇಷ್ಟವಾಗುವುದು, ಅದರ ಕಥನಾ ನಿರೂಪಣ ಶೈಲಿಯಲ್ಲಿ, ಇಲ್ಲಿ 'ದೇಶಪ್ರೇಮ' 'ದೇಶದ್ರೋಹ'ಗಳ ಒಪ್ಪಿತ ಮೌಲ್ಯಗಳನ್ನೇ ಪಾತ್ರಗಳನ್ನಾಗಿಸುವ ಜೂ ವೂ, ಆ ಪಾತ್ರಗಳನ್ನು ಪರಸ್ಪರ ವೈರುಧ್ಯಗಳಲ್ಲಿ ಹಿಡಿದಿಡುವುದಿಲ್ಲ, ವಿರೋಧಿ ಬಣಗಳ ಸೆಣಸಾಟದಲ್ಲಿ ಪಾತ್ರಗಳು ತಮ್ಮ ಮನುಷ್ಯ ಸಾಧ್ಯತೆಯ ಆಯ್ಕೆಗಳನ್ನು ಮಾಡಿಕೊಳ್ಳುತ್ತ, ತಮ್ಮ ಆ ಹೊತ್ತಿನ ನಡಾವಳಿಗಳ ಮೂಲಕವೇ ಕಾಲವನ್ನೂ, ಅದೇರೀತಿಯಲ್ಲಿ ಸಿನಿಮಾದ ಕಥನವನ್ನು ಮುನ್ನಡೆಸುವ ನಿಮಿತ್ತ ವ್ಯಕ್ತಿಗಳಾಗಿ ಪ್ರೇಕ್ಷಕರಿಗೆ ಅನ್ನಿಸುವ ಹಾಗೆ ಜೂ ವೂ ಸಿನಿಮಾ ಕಟ್ಟಿದ್ದಾನೆ. ಜೂ ವೂನ ಗಮನವೆಲ್ಲಾ ಸಿನಿಮಾಕಲೆಯ ಎಲ್ಲಾ ಭಾಗಗಳನ್ನು ಸಕ್ಷಮವಾಗಿ ಒಗ್ಗೂಡಿಸಿಕೊಂಡು ಒಂದು ರೋಚಕ ಕಥನವನ್ನು ಹೆಣೆಯುವುದರ ಕಡೆಗೆ- ಹೀಗಾಗಿ, ಇಲ್ಲಿ ಚರಿತ್ರೆಯ ಸನ್ನಿವೇಶವೊಂದು, ತನ್ನೆಲ್ಲ ಭಾವುಕ ಅಬ್ಬರವನ್ನು ಕಳೆದುಕೊಂಡು, ಸಿನಿಮಾಕಲೆಗಾರಿಕೆಯ ಕನ್ನಡಿಯ ಚೌಕಟ್ಟಿನೊಳಗಿನ ಒಂದು ಬಿಂಬವಾಗುವ ಬುಡಮೇಲು ಕೃತ್ಯ ಇಚ್ಛೆಸದೆಯೂ ಸಂಭವಿಸಿಬಿಟ್ಟಿದೆ! 'ಕಲೆಗಾಗಿ ಕಲೆ' ಎಂಬ ಪ್ರಭೇದ ಕಲೆಯಲ್ಲಿ ಇಲ್ಲ; ಇದ್ದರೆ, ಹೀಗಿರಲಿ ಎನಿಸುವಂತೆ ಜೂ ವೂ ಸಿನಿಮಾವಿದೆ-ಕಲೆಯ ಈ ಗಳಿಗೆಗಳು ಪುಳಕ ಹುಟ್ಟಿಸುತ್ತವೆ.

ಈ ಸಿನಿಮಾದ ಪ್ರತಿದೃಶ್ಯವೂ, ಆಯಾ ಸಂದರ್ಭಾನುಸಾರ ಚಿತ್ರಿತವಾದ ಜಗತ್ತಿನ ಅತ್ಯುತ್ತಮ ಚಿತ್ರಗಳ ಶ್ರೇಷ್ಠ ದೃಶ್ಯಗಳ ಹಬ್ಬಾಚರಣೆಯಾಗಿದೆ! ಸಿನಿಮಾದ ಪ್ರಾರಂಭದ ದೃಶ್ಯದಲ್ಲಿ: ಜಪಾನಿ ಪೊಲೀಸರು ಕೊರಿಯಾದ ಬಂಡುಕೋರ ನಾಯಕನನ್ನು ಅವನ ಅಡಗುದಾಣಕ್ಕೆ ಮುತ್ತಿಗೆ ಹಾಕಿ ಶರಣಾಗುವಂತೆ ಕರೆಕೊಡುತ್ತಿದ್ದಾರೆ; ಕೊರಿಯಾದವನಾಗಿದ್ದೂ, ಜಪಾನಿ ಪೊಲೀಸು ಪಡೆಯ ಅಧಿಕಾರಿಯಾಗಿರುವ ಜೂಂಗ್ ಚೂಲ್, ಆ ಕ್ರಾಂತಿಕಾರಿಯನ್ನು ಕೊಲ್ಲದೆ ಜೀವಂತವಾಗಿ ಸೆರೆ ಹಿಡಿಯುವಂತೆ ಆಗ್ರಹಿಸುತ್ತಿರುವ ಹಾಗೇ, ಹಿಡಿಯುವ-ತಪ್ಪಿಸಿಕೊಳ್ಳುವ ಕಣ್ಣುಮುಚ್ಚಾಲೆಯಾಟ ಶುರುವಾಗುತ್ತದೆ; ಒಂದು ಆವರಣದ ಒಳಗೆ, ಎರಡು ಮುಖ್ಯ ಪಾತ್ರಗಳು ಹಾಗು ನೂರಾರು ಪೊಲೀಸು ಪಾತ್ರಗಳು ಹಿಡಿಯುವಾಟ ನಿಯಂತ್ರಿಸುವ ದೃಶ್ಯ ಸಂಯೋಜನೆಯನ್ನು ಕುರಸೋವ ಕಂಡಿದ್ದರೆ 'ವ್ಹಾ' ಎಂದಿದ್ದಾನು! ಚಿತ್ರದ ಕೊನೆಯ ಕಾಲುಭಾಗದಲ್ಲಿ, ರೈಲಿನಲ್ಲಿ ಮದ್ದುಗುಂಡುಗಳನ್ನು ಸಾಗಿಸುತ್ತಿರುವ ಕ್ರಾಂತಿ ಪಡೆ ಹಾಗು ಅವರ ಬೆನ್ನು ಹತ್ತಿದ ಜಪಾನ್ ಪೊಲೀಸರ ನಡುವೆ ಮತ್ತೊಂದು ಕಣ್ಣುಮುಚ್ಚಾಲೆಯಾಟ ಶುರುವಾಗುತ್ತದೆ; ಅರ್ಧ ಗಂಟೆಗೂ ಹೆಚ್ಚು ನಡೆಯುವ ಈ ದೃಶ್ಯಾವಳಿಗಳಲ್ಲಿ ನಡೆಯುವ ವಿದ್ಯಮಾನಗಳು ಹಾಗು ಅವುಗಳು ಹೊಮ್ಮಿಸುವ ಭಾವಗಳನ್ನು ಕಂಡರೆ, ಅತ್ಯುನ್ನತ್ತ ತಂತ್ರಜ್ಞಾನ ಹೊಂದಿರುವ 'ಹಾಲಿವುಡ್' ಹೊಟ್ಟೆಕಿಚ್ಚಿಂದ ನರಳುತ್ತದೆ! ಯಾಕೆಂದರೆ ಇಡೀ ಅರ್ಧ ಗಂಟೆಯ ರೋಚಕ ದೃಶ್ಯಗಳು, ಕ್ರಾಂತಿಕಾರಿಗಳು ಹಾಗು ಜೂಂಗ್ ಚೂಲ್‌ರ ನಡುವಿನ ವ್ಯಕ್ತಿತ್ವ ಭಾವಗಳ ಸೂಕ್ಷ್ಮ ಸೆಣಸಾಟಗಳ ನಾಟಕೀಯ ಚಿತ್ರಣವಾಗಿದೆ; 'ಹಾಲಿವುಡ್ಡಿ'ನ ಯಾವ ರೈಲು ದೃಶ್ಯವೂ ಈ ಬಗೆಯ ಸಾಮೂಹಿಕ ವ್ಯಕ್ತಿ ಸ್ವಭಾವ ಜೋಕಾಲೆಯಾಟದ ಕಲೆಯ ಕಣ್ಣು ಮುಚ್ಚಾಲೆಯಾಗಿಲ್ಲ! ಈ ಬಗೆಯ ರೈಲು ದೃಶ್ಯಗಳನ್ನು ರೋಚಕವಾಗಿ ಚಿತ್ರೀಕರಿಸಿದ ಹಿಚ್ ಕಾಕ್ 'ವ್ಹಾ' ಎಂದಾನು!

ಈ ಸಿನಿಮಾ ನೋಡಿದಾಕ್ಷಣ ನನಗೆ ನೆನಪಾದದ್ದು ಮೈಕಲ್ ಕರ್ಟಿಜನ 'ಕ್ಯಾಸಬ್ಲಾಂಕ'. 'ಹಾಲಿವುಡ್'ನಲ್ಲಿ ಹತ್ತಾರು ಸಿನಿಮಾಗಳನ್ನು ಮಾಡಿದ ಕರ್ಟಿಜ್, ತನ್ನ ನಟ-ನಟಿಯರಿಗೆ ಖ್ಯಾತಿತಂದು ಕೊಡುವ ಸಿನಿಮಾ ಮಾಡಿದ್ದರೂ, ಅವನ ನಿರ್ದೇಶನ ಸಾಮರ್ಥ್ಯ ಪ್ರಕಟಗೊಂಡಿರಲಿಲ್ಲ, 1942ರಲ್ಲಿ ಎರಡನೇ ಮಹಾಯುದ್ಧದ ನಡುವೆಯೇ, ಆತ ಖ್ಯಾತ ನಟ ಹಂಫ್ರೇ ಬೋಗಾರ್ಟ್, ನಟಿ ಇಂಗ್ರಿಡ್ ಬರ್ಗ್‌ಮನ್‌ರನ್ನು ಸೇರಿಸಿಕೊಂಡು ಈ ಸಿನಿಮಾ ಮಾಡಿದ. 1942ರ ಆ ಸಿನಿಮಾ, ಮರ್ಟಿಜನ ಬಹು ಚರ್ಚಿತ ಮೇಲು ಕಲಾಕೃತಿಯಾಗಿದೆ. ಕಲಾವಿದನ ಕಲಾಸಂವೇದನೆ, ಚರಿತ್ರೆಯನ್ನು ಕಾಣುವ ನಮ್ಮ ಕಣ್ನೋಟವನ್ನೇ ಹೇಗೆ ಬದಲಾಯಿಸಬಹುದು ಎಂಬುದಕ್ಕೆ ಕರ್ಟಿಜ್ ಉದಾಹರಣೆಯಾಗಿದ್ದಾನೆ. ಬ್ರೆಕ್ಟ್ ಆ ಕಾಲದಲ್ಲಿ ಹಾಲಿವುಡ್ಡಲ್ಲಿದ್ದಿದ್ದರೆ ಇದೇ ಚಿತ್ರಕತೆ ಬರೆದಿದ್ದಾನೋ ಏನೋ! ಕರ್ಟಿಜನ ಸಿನಿಮಾ ಡಿಜಿಟಲ್ ಆವೃತ್ತಿಯಲ್ಲಿ ಮರು ಪ್ರದರ್ಶಿತವಾಗಿ ದಂಗು ಹೊಡೆಸುತ್ತಿದೆ!

'ಕಲೆಗಾಗಿ ಕಲೆ'-'ಜನರಿಗಾಗಿ ಕಲೆ' ಎಂಬುದು ಎರಡನೇ ಮಹಾಯುದ್ಧದ ಕಾಲದಲ್ಲಿ, ವೈಚಾರಿಕ ಚರ್ಚೆಯ ವಿಷಯವಾಗಿತ್ತು; ಕಾಲಾಂತರದಲ್ಲಿ ಜಾಹಿರಾತು ಮಾಧ್ಯಮ ಹಾಗು ಅಪಾರ ಬಂಡವಾಳ ಹೂಡಿಕೆಯ ರಂಜನೋದ್ಯಮ ಬೆಳೆದ ನಂತರದಲ್ಲಿ ಬರೀ ಸೈದ್ಧಾಂತಿಕ ಸೃಷ್ಟಿಯಾಗಿ ಈ ಚರ್ಚೆಯನ್ನು ಉಳಿಸಿಕೊಳ್ಳಬೇಕೋ? ಅಥವ ವಾಸ್ತವಿಕ ದೃಶ್ಯಕಲೆಯ ಸೃಜನಶೀಲ ಕಲಾ ವ್ಯವಹಾರಗಳನ್ನು ಮಾತನಾಡುವುದೋ? - ಇದು ಚರ್ಚಿಸಬೇಕಾದ ಸಂಗತಿ.

ನಿಜಕ್ಕೂ ಕಲೆಯಲ್ಲಿ ಜನರ ಸಮೂಹ ಕಲ್ಯಾಣವನ್ನು ಬೋಧಿಸುವುದಿದ್ದರೆ ಅದನ್ನು ಅಂತಿಮ ಕೃತಿಯಲ್ಲಿ ಮಾತ್ರ ಕಾಣಬೇಕು ಎಂದು ಸಿನಿಮಾ ಕಲೆ ಹೇಳುವಷ್ಟು ಸ್ಪಷ್ಟತೆಯಲ್ಲಿ ಯಾವ ಕಲೆಯೂ ಹೇಳುತ್ತಿಲ್ಲ, ಅದಕ್ಕೆ ಕಾರಣವೂ ಇದೆ. ಸಂವಹನ ಕ್ರಾಂತಿಯ ಕಾಲದಲ್ಲಿ ನಾವಿದ್ದೇವೆ. ನಿಮ್ಮ ಮೊಬೈಲಿಗೆ ಅಗ್ಗದ ದರದಲ್ಲಿ ಮಾಹಿತಿಯನ್ನು ತಂದು ಸುರಿಯುವ ವ್ಯಾಪಾರ ಶುರುವಾಗಿದೆ. ನೀವು ಯಾವುದನ್ನು ನೋಡಬೇಕು/ಯಾವುದನ್ನು ಕಡೆಗಣಿಸಬೇಕು ಎನ್ನುವ ಸೋವಿ ಬೆಲೆಯ ನಿಯಂತ್ರಿತ ಸ್ವಾತಂತ್ರ್ಯ ಇರುವ ಗಳಿಗೆಯಲ್ಲಿ ಬರುವ ಇಂಥ ಸಿನಿಮಾಗಳ ಸೌಂದರ್ಯ ವಾಸ್ತವ ಬಗ್ಗೆ 'ಕೂಲ್' ಆಗಿದ್ದರೆ ಕ್ಷೇಮ ಇರಲಿ! ■

Registered No.RNP/KA/BGS/2036/2017-19 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 21-06-2017 RNI No. KARKAN200

ಪಬ್ಲಿಸಿಟಿ ಬೇಕಾ? ವಿವಾದ ಮಾಡ್ಕೊಳ್ಳಿ!!

ಮುಸ್ಸಂಜೆ ಮಹೇಶ್ ನಿರ್ದೇಶನದ 'ಜಂದಾ' ಸಿನಿಮಾ ಈ ವಾರ ರಿಲೀಸ್ ಆಗುತ್ತಿದೆ. ಹಾಗಾಗಿ ಸುಖಾಸುಮ್ಮನೆ ಒಂದು ವಿವಾದ ಎದ್ದಿದೆ. 'ಜಂದಾ' ಸಿನಿಮಾದಲ್ಲಿ ಕಥಾನಾಯಕಿ ಮೇಘನಾ ರಾಜ್ ಡೈಲಾಗ್‌ವೊಂದನ್ನು ಹೇಳಿದ್ದಾರೆ. "ಈ ಗಂಡು ಅನ್ನೊ ಒಬ್ಬ ಕಚಡ ನನ್ನ ಮಗಾನು ಪ್ರೀತಿ ಮಾಡೋವಾಗ ಸತ್ಯ ಹೇಳಲ್ವಲ್ಲ..." ಅನ್ನೋದು ಆ ಡೈಲಾಗ್. ಇದು ಗಂಡುಮಕ್ಕಳನ್ನು ಕೆಣಕಿಬಿಟ್ಟಿದೆ. ಹಾಗಾಗಿ 'ಜಂದಾ' ಸಿನಿಮಾದಲ್ಲಿ ನಟಿಸಿರುವ ಮೇಘನಾ, ಯುವರಾಜ್ ಮನೆ ಮುಂದೆ ಪ್ರತಿಭಟನೆ ಶುರುವಾಗಿದೆ.

ಗಂಡಸರಿಗೆ ಇದರಿಂದ ಅವಮಾನ ಆಗಿದ್ದರೆ, ಸೆನ್ಸಾರ್ ಮಂಡಳಿಯವರು ಯಾಕೆ ಈ ಸಂಭಾಷಣೆಯನ್ನು ಹಾಗೆಯೇ ಬಿಟ್ಟರು?. ಗೊತ್ತಿಲ್ಲ. ಅಲ್ಲದೇ ಗಂಡಸರನ್ನು ಬೈಯುವ ಅದೆಷ್ಟೋ ಸಂಭಾಷಣೆಗಳು ಈಗಾಗಲೇ ನಮ್ಮೆಲ್ಲರ ಕಿವಿಗೆ ಬಿದ್ದರೂ, ಹೋರಾಟ ಮಾಡುವವರು ಯಾಕೆ ಸುಮ್ಮನಿದ್ದರು? ಅದೂ ಗೊತ್ತಿಲ್ಲ. ಆದರೆ, ಭರ್ಜರಿ ಪ್ರಚಾರವಂತೂ ಸಿನಿಮಾ ತಂಡಕ್ಕೆ ಸಿಗುತ್ತಿದೆ.





ಅವಂತಿಕಾ ವಿವಾದಕ್ಕೆ ಮತ್ತೊಂದು ಟ್ವಿಸ್ಟ್

'ರಂಗಿತರಂಗ' ಖ್ಯಾತಿಯ ಬೆಡಗಿ ಅವಂತಿಕಾ ಶೆಟ್ಟಿ ಮತ್ತು ಕೆ.ಎ.ಸುರೇಶ್ ನಡುವಿನ ವಿವಾದಕ್ಕೆ ಮತ್ತೊಂದು ಟ್ವಿಸ್ಟ್ ಸಿಕ್ಕಿದೆ. ಕೈಯಲ್ಲಿ ಸಿನಿಮಾವಿಲ್ಲವೆಂದು 'ರಾಜು ಕನ್ನಡ ಮೀಡಿಯಂ' ಸಿನಿಮಾ ಒಪ್ಪಿಕೊಂಡಿದ್ದ ಈ ನಟಿ, ನಂತರ ಉಪೇಂದ್ರ ಸೇರಿದಂತೆ ಕೆಲ ಸ್ಟಾರ್ ನಟರ ಸಿನಿಮಾ ಸಿಗುತ್ತಿದ್ದಂತೆಯೇ 'ರಾಜು...' ಸಿನಿಮಾದಿಂದ ದೂರವಾಗಲು ಡ್ರಾಮಾ ಮಾಡಿದ್ದಾರೆ. ಈಗ ಅದೇ ನಾನಾ ತೊಂದರೆಗೆ ಕಾರಣವಾಗಿದೆ ಎನ್ನಲಾಗುತ್ತಿದೆ.

ಗುರುನಂದನ್ ನಟನೆಯ 'ರಾಜು...' ಸಿನಿಮಾ ಒಪ್ಪಿಕೊಳ್ಳುವಾಗ ಅವಂತಿಕಾಗೆ ಅಂಥದ್ದೇನೂ ಆಫರ್ಸ್ ಇರಲಿಲ್ಲ, ಆದರೂ, ದೊಡ್ಡ ಮೊತ್ತದ ಸಂಭಾವನೆಯನ್ನೇ ಕೇಳಿದ್ದರು. 'ರಂಗಿತರಂಗ' ಹಿಟ್ ಆಗಿದ್ದರಿಂದ ನಿರ್ಮಾಪಕರು ಕೂಡ ಒಪ್ಪಿದ್ದರು. ಅಲ್ಲದೇ ಅವಂತಿಕಾ ನಿರ್ವಹಿಸಬೇಕಿದ್ದ ಪಾತ್ರಕ್ಕೆ ಹೆಚ್ಚು ಮಹತ್ವವಿದೆ ಎಂದೂ ನಿರ್ದೇಶಕರು ಹೇಳಿದ್ದರು. ನಂತರದ ದಿನಗಳಲ್ಲಿ ಅವಂತಿಕಾಗೆ ಕೈ ತುಂಬಾ ಸಿನಿಮಾಗಳು ಸಿಕ್ಕವು. ಅಲ್ಲದೇ 'ರಾಜು...' ಸಿನಿಮಾದಲ್ಲಿ ಇನ್ನಿಬ್ಬರು ನಾಯಕಿಯರು ಸೇರ್ಪಡೆಯಾದರು. ಅಲ್ಲಿಂದ ಅವಂತಿಕಾಳ ಕಿರಿಕ್‌ಗಳು ಶುರುವಾದವು. ಕಾಸ್ಟ್ಯೂಮ್ ಚೆನ್ನಾಗಿಲ್ಲವೆಂದು ರಗಳೆ ತೆಗೆದರು. ಡೇಟ್ಸ್ ಹೊಂದಾಣಿಕೆ ಆಗುತ್ತಿಲ್ಲವೆಂದು ಸುಳ್ಳು ಹೇಳಿದರು. ಹಾಗಾಗಿ ಸಿನಿಮಾ ತಂಡದಿಂದಲೂ ಇವರನ್ನು ಕೈಬಿಡಬೇಕು ಅಂತ ತೀರ್ಮಾನ ಮಾಡಿದರೂ, ಬುದ್ಧಿ ಕಲಿಸಲೆಂದು ನಿರ್ಮಾಪಕರು ಸಂಭಾವನೆಯ ಕೆಲ ಮೊತ್ತವನ್ನು ತಡೆಹಿಡಿದರು. ಅಲ್ಲದೇ ಅವಂತಿಕಾರ ದೃಶ್ಯಗಳಿಗೆ ಕತ್ತರಿಹಾಕಿ, ಅತಿಥಿಪಾತ್ರ ಎನ್ನುವಂತೆ ಮಾಡಿದರು. ಅದು ಸಾಮಾಜಿಕ ಜಾಲತಾಣಗಳಲ್ಲಿ ಬರುವಂತೆ ನೋಡಿಕೊಂಡರು. ಅಲ್ಲಿವರೆಗೂ ಸುಮ್ಮನಿದ್ದ ನಾಯಕಿ, ತನ್ನ ಬಗ್ಗೆ ಸಲ್ಲದ ಆರೋಪ ಮಾಡಿದ್ದರಿಂದ, ಚೆಕ್‌ಬೌನ್ಸ್ ಹೆಸರಿನಲ್ಲಿ ಕೋರ್ಟ್‌ಗೆ ಮೊರೆ ಹೋದರು. ತನಗೆ ಕಿರುಕುಳ ಆಗಿದೆ ಅಂತ ಮಾಧ್ಯಮಗಳ ಜತೆ ಮಾತಾಡಿದರು. ಎರಡೂ ಕಡೆಯಿಂದಲೂ ಮಾನ ಹರಾಜು ಆಯಿತು. ಈಗ ಇಬ್ಬರೂ ಕೂತು ಸಮಸ್ಯೆ ಬಗೆಹರಿಸಿಕೊಳ್ಳುವ ಮಾತುಗಳನ್ನು ಆಡುತ್ತಿದ್ದಾರೆ. ಆದರೆ, ಇವರ ಜಗಳದಲ್ಲಿ ನಿಜವಾಗಿಯೂ ಹಾನಿಯಾಗಿದ್ದು ನಿರ್ದೇಶಕನಿಗೆ. ಈ ಚಿತ್ರಕ್ಕಾಗಿ ನಿರ್ದೇಶಕ ಸುರೇಶ್ ಎರಡೂವರೆ ವರ್ಷಗಳ ಕಾಲ ಶ್ರಮ ಪಟ್ಟಿದ್ದಾರೆ.

ಕನಕನ ಕೈಹಿಡಿದ ರಚಿತಾ ರಾ

ಸ್ಟಾರ್ ನಟರ ಸಿನಿಮಾ ಮೂಲಕವೇ ಗುರುತಿಸಿಕೊಂಡವರು ರಾಮ್. ಹಾಗಾಗಿ ಅವರು ಓಡುವ ಕುದುರೆಯನ್ನೇ ಆಯ್ಕೆ ಮಾಡಿಕೊಳ್ ಹೊಸ ಹೀರೋ, ಹೊಸ ಬ್ಯಾನರ್ ಅಂದರೆ ಆಗುತ್ತಿರಲಿಲ್ಲ, ಆದರೆ, ಯಾವುದೇ ಪಾತ್ರ ಬಂದರೂ ಓಕೆ ಅನ್ನುತ್ತಿದ್ದಾರೆ. ಆ ಸಿನಿಮಾದಲ್ಲಿ ನಾಯಕಿಯರು ಇದ್ದರೂ ನಟಿಸುತ್ತಿದ್ದಾರೆ. ಕಾರಣ ಬಿಡಿಸಿ ಹೇಳಬೇಕಿ

ಸದ್ಯ ರಚಿತಾ ಹೊಸ ಸಿನಿಮಾ ಒಪ್ಪಿಕೊಂಡಿದ್ದಾರೆ. ಈ ಚಿತ್ರಕ್ಕೆ ವಿಜಯ್ ನಾಯಕ. ಮಾನ್ವಿತಾ ಹರೀಶ್ ನಾಯಕಿ. ಮತ್ತೊಂದು ಪಾತ್ರ ರಚಿತಾಗೆ ಸಿಕ್ಕಿದೆ. ಆರ್.ಚಂದ್ರು ನಿರ್ದೇಶನದಲ್ಲಿ 'ಕನಕ' ಮೂಡಿಬ

ಅಲ್ಲದೇ ಧ್ರುವ ಸರ್ಜಾ ನಟನೆಯ ಸಿನಿಮಾದಲ್ಲೂ ರಚಿತಾ ನಟಿಸು ಇಲ್ಲಿಯೂ ಇಬ್ಬರು ನಾಯಕಿಯರು. ಹರಿಪ್ರಿಯಾ ಜತೆ ತೆರೆಹಂಚಿಕೊಳ್ಳುತ್ತಿದ್ದಾರೆ. ನಮ್ಮ ಗುಣ ನಮಗೆ ಸರಿಯಾದ ಪಾತ್ರ ಕಲ ಅನ್ನುವುದಕ್ಕೆ ರಚಿತಾ ಉತ್ತಮ ಉದಾಹರಣೆ ಅನ್ನಬಹುದು.



ಕಿರಿಕ್ ಹುಡುಗರ ಜಗಳ

'ಕಿರಿಕ್ ಪಾರ್ಟಿ' ಜೋಡಿ ರಕ್ಷಿತ್ ಶೆಟ್ಟಿ ಮತ್ತು ರಶ್ಮಿಕಾ ಜುಲೈ 3ರಂದು ನಿಶ್ಚಿತಾರ್ಥ ಮಾಡಿಕೊಳ್ಳುತ್ತಿದ್ದಾರೆ. ವಯಸ್ಸಿನ ಅಂತರವಿದ್ದರೂ, ಹೃದಯಗಳಿಗೆ ಯಾವ ಅಂತರವೂ ಇಲ್ಲವೆಂದು ಹೇಳುವ ಮೂಲಕ ತಮ್ಮಿಬ್ಬರ ನಡುವೆ ಪ್ರೀತಿ ಇತ್ತು ಅನ್ನುವುದನ್ನು ಒಪ್ಪಿಕೊಂಡಿದ್ದಾರೆ. ಆದರೆ, ಈ ಜೋಡಿಯ ಅಭಿಮಾನಿಗಳು ಇದ್ದಾರಲ್ಲ, ಅವರು ಸೋಶಿಯಲ್ ಮೀಡಿಯಾದಲ್ಲಿ ಕಿತ್ತಾಡುತ್ತಿದ್ದಾರೆ. ನೋಡುಗರಿಗೆ ಪುಗಸಟ್ಟೆ ಮನರಂಜನೆ ನೀಡುತ್ತಿದ್ದಾರೆ. ರಶ್ಮಿಕಾ ಅಭಿಮಾನಿಗಳು "ನಿನಗೆ ನಮ್ ಹುಡುಗೀನೇ ಬೇಕಿತ್ತಾ ಶೆಟ್ರೆ?" ಎಂದು ಕಾಲೆಳೆದರೆ "ನಮ್ ಹುಡುಗನ ತೂಕಕ್ಕೆ ಹುಡುಗಿ ಇಲ್ಲ, ಬೇರೆ ಹುಡುಗಿನ ನೋಡ್ಕೊಳ್ಳಿ ಬಾಸ್" ಅಂತ ರಕ್ಷಿತ್ ಹುಡುಗರು ಸಲಹೆ ನೀಡಿದ್ದಾರೆ. ಈ ಚರ್ಚೆಯಲ್ಲಿ ಕೀಳುಮಟ್ಟದ ಪದಪ್ರಯೋಗಗಳೂ ಆಗಿವೆ. ಇದೆಲ್ಲವನ್ನೂ ನೋಡಿಕೊಂಡು ಇಬ್ಬರೂ ಸುಮ್ಮನೆ ಕೂತಿದ್ದಾರೆ. ಅಭಿಮಾನಿಗಳ ಈ ಕಿರಿಕ್ ವಿಷಯದಲ್ಲಿ ಈಗಾಗಲೇ ಯಶ್ ಮತ್ತು ರಕ್ಷಿತ್ ನೊಂದಿದ್ದಾರೆ.

ದರ್ಶನ್ ಮತ್ತು ಸುದೀಪ್ ಕೂಡ ಅತಿರೇಕವಾಗಿ ಆಡಿದರೆ ಸುಮ್ಮನೆ ಇರಲ್ಲ ಅಂತ ಅಭಿಮಾನಿಗಳಿಗೆ ಖಡಕ್ ಆದೇಶ ನೀಡಿದ್ದಾರೆ. ಆದರೆ, ಇನ್ನೂ ಇಂತಹ ಘಟನೆಗಳು ಆಗುತ್ತಲೇ ಇವೆ. ರಕ್ಷಿತ್ ಮತ್ತು ರಶ್ಮಿಕಾ ಇಬ್ಬರೂ ಪರಸ್ಪರ ಪ್ರೀತಿಸಿ ಮದುವೆ ಆಗುತ್ತಿದ್ದಾರೆ. ಅವರಿಗೆ ಹಾರೈಸುವುದನ್ನು ಬಿಟ್ಟು, ನಿಂದನೆಗೆ ನಿಂತಿದ್ದಾರೆ ಕೆಲ ಅಭಿಮಾನಿಗಳು. ಇದು ಯಾರಿಗೂ ಶೋಭೆ ತರುವಂಥದ್ದಲ್ಲ ಅಲ್ಲವೆ?



ಚೇತನ್‌ನಂಥ ನಿರ್ದೇಶಕರು ಬೇ

ಈಗಾಗಲೇ ಗೊತ್ತಿರುವಂತೆ ನಿಖಿಲ್ ಚಿತ್ರವನ್ನು 'ಭರ್ಜರಿ' ನಿರ್ದೇಶಕ ಚೇತನ್ ನಿರ್ದೇಶಿಸಬೇಕಿತ್ತು, ಚೇತನ್ ಸಾರಥ್ಯದಲ್ಲಿಯೇ ಲಾಂಚ್ ಕೂಡ ಆಯಿತು. ಈ ಚಿತ್ರದಿಂದ ಈಗ ಚೇತನ್ ಹೊರಬ ಕಾರಣ, ನಿಂತುಹೋಗಿದ್ದ ಅವರ 'ಭರ್ಜರಿ' ಸಿನಿಮಾ ಈಗ ಮತ್ತೆ ಪಡೆದುಕೊಂಡಿದೆ.

ಧ್ರುವ ಸರ್ಜಾ ಮುಖ್ಯಭೂಮಿಕೆಯಲ್ಲಿ ತಯಾರಾಗುತ್ತಿದ್ದ 'ಭ ಸಿನಿಮಾ ಆರ್ಥಿಕ ಕಾರಣದಿಂದಾಗಿ ಅರ್ಧಕ್ಕೆ ನಿಂತಿತ್ತು, ಹಾಗಾಗಿ ವರ್ಷಗಳ ಹಿಂದೆಯೇ ಸೆಟ್ಟೇರಿದ್ದ ಚಿತ್ರದ ಶೂಟಿಂಗ್ ಅನ್ನು ಸಂ ಮಾಡಲು ಆಗಿರಲಿಲ್ಲ, ಆದರೂ, ನಿರ್ದೇಶಕರು ಎರಡು ವರ್ಷ ಕಾದರು. ಕಾಯುವುದರಲ್ಲಿ ಸುಖವಿಲ್ಲ ಎಂದು ಗೊತ್ತಾದಾಗ ನಿಖಿಲ್ ಒಪ್ಪಿಕೊಂಡರು. ಇನ್ನೇನು ನಿಖಿಲ್ ಸಿನಿಮಾ ಶುರುವಾಗುವಾಗ 'ಭ ಸಿನಿಮಾದ ಶೂಟಿಂಗ್ ಮಾಡುವುದಾಗಿ ನಿರ್ಮಾಪಕರು ಹೇಳಿದ್ದಾರೆ. ಅನಿವಾರ್ಯವಾಗಿ ಚೇತನ್ ಸಂಕಟಕ್ಕೆ ಸಿಲುಕಿದ್ದಾರೆ. ತನಗೆ ಕಷ್ಟವಾ ಶೂಟಿಂಗ್ ಮುಗಿಸಿಕೊಡುವುದಾಗಿ ಹೇಳಿದ್ದಾರೆ. ಈ ಎಲ್ಲವೂ ಗ ಕುಮಾರಸ್ವಾಮಿ ಅವರು ತಮ್ಮ ಸಿನಿಮಾವನ್ನು ಒಂದು ಕಾಲ ಮುಂದೂಡಿದ್ದರೆ, ಚೇತನ್‌ಗೆ ಸಹಾಯವಾಗುತ್ತಿತ್ತು. ನಿಖಿಲ್ ಸಿನಿಮಾ ಕೂಡ ಈಗಲೇ ಶೂಟಿಂಗ್ ಮಾಡಬ ಹಾಗಾಗಿ ಹೊಸ ನಿರ್ದೇಶಕರನ್ನೂ ಹುಡುಕು ಗಾಂಧಿನಗರದಲ್ಲಿ ಯಾವಾಗ ಏನಾಗತ್ತೋ ಹೇಳೋದ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com